# ಅಪರಂಜಿ

ತಿಳಿನಗೆಯ ಕಾರಂಜಿ

ಜನವರಿ 2017



**ಸಂಪಾದಕ ಮಂಡಳಿ**

**ಸಂಪಾದಕರು**

ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**

ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**

ಶ್ರೀ ಎಂ. ಶಿವಕುಮಾರ್

**ಟ್ರಸ್ಟಿಗಳು**

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್


**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ:ರೂ. 750/-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳಿಸಿ.

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ


**ಸಂಪುಟ 34**

**ಸಂಚಿಕೆ - 4**

**ಜನವರಿ - 2017**


***ಈ ಸಂಚಿಕೆಯಲ್ಲಿ .....***


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಶ್ರೀಮಾರುತಿ..... | **ವತ್ಸನ** | 3 |
| ದಾಂಪತ್ಯದ ಇನ್ನೊಂದು.. | **ಎಸ್.ಆರ್. ವಿಜಯಶಂಕರ** | 8 |
| ಕಪಾಟಿಗೆ ಬಂತು..... | **ಆರತಿ ಘಟಿಕಾರ್** | 12 |
| ಕಪ್ಪು-ಬಿಳಿಪು.... | **ಇ.ಆರ್. ರಾಮಚಂದ್ರನ್** | 17 |
| ಆಸನಾ(ವಿ)ಯೋಗ | **ನಳಿನಿ ಸೂರ್ಯಪ್ರಕಾಶ್** | 19 |
| ವ್ಯಂಗ್ಯ ಮೆಲುಕು | **ಪ್ರಕಾಶ್ ಶೆಟ್ಟಿ** | 22 |
| ದಶಶಿರ | **ವೈ.ವಿ. ಗುಂಡೂರಾವ್** | 23 |
| ವರ್ಷಕ್ಕೊಂದು ದಿನ? | **ಜಿ.ವಿ. ನಿರ್ಮಲ** | 26 |
| ತುಂತುರು | **ದಂನಾಆ** | 29 |
| ಪಂಚ್ ಪದ್ಯಗಳು | **ಎಚ್. ಡುಂಡಿರಾಜ್** | 30 |
| ಕರೆಕ್ಟ್ ಚಂದ್ರಮ್ಮ | **ಶ್ಯಾಮಲಾ ರವಿಶಂಕರ್** | 31 |
| ಸ್ಕೋರ್ ಏನೂ ಸಾರ್? | **ಸಿ.ಆರ್. ಸತ್ಯ** | 34 |
| ನಾನಾ ರೂಪದ.... | **ಬೇಲೂರು ರಾಮಮೂರ್ತಿ** | 36 |


**ಮುಖಪುಟ ವ್ಯಂಗ್ಯಚಿತ್ರ - ಗುಜ್ಜಾರ್**


ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು - 560 003. email: koravanji42@hotmail.com



*ಸಂಪರ್ಕ ವಿಳಾಸ:* **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com



*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ನೆರೆ ರಾಜ್ಯದ ಅನಭಿಷಿಕ್ತ ರಾಣಿಯ ಆತ್ಮಕ್ಕೆ ಚಿರಶಾಂತಿ ದೊರೆಯಲಿ!!

★★★

ನಗದು ಸಂಗ್ರಹ ಬೇಡ; ಜನರಿಗೆ ರಿಸರ್ವ್ ಬ್ಯಾಂಕ್ ಗೌರ್‍ನರ್ ಸಲಹೆ – ಸುದ್ದಿ

***● ಅವರ ಸಲಹೆಯನ್ನು ಊರ್ಜಿತಗೊಳಿಸಲೇಬೇಕು !!***

★★★

ಅಪರಂಜಿಯಂತೆಯೇ ವಿಕಟ ಕವಿಯಾಗಿದ್ದ

ಚೋ ರಾಮಸ್ವಾಮಿಯವರಿಗೆ ಹೃತ್ಪೂರ್ವಕ ವಿದಾಯ !!

★★★

ಜನಾರ್ದನ ರೆಡ್ಡಿ ಮನೆ, ಕಛೇರಿಗಳ ಮೇಲೆ ಐ.ಟಿ. ದಾಳಿ – ಪತ್ರಿಕೆ

***● ಕೋಟೆ ಸೂರೆ ಹೋದಮೇಲೆ....... !!***

★★★

ರಂಗನಾಥ ಸ್ವಾಮಿಯ ದೇವಾಲಯದ ಆಸ್ತಿ ಸ್ವಾಧೀನ ಇನ್ನಷ್ಟು ತಡ – ಪತ್ರಿಕೆ !!

***● ಎದ್ದೇಳು ರಂಗನಾಥಾ..... !!***

★★★

ಹಲವು ಬ್ಯಾಂಕ್ ಅಧಿಕಾರಿಗಳ ಬಂಧನ – ಸುದ್ದಿ

***● ಅವರಿಗೆ ಹಣದ ಬಂಧನವೇ ಕಾರಣ ಇರಬಹುದು !!***

★★★

ವಾಯುಪಡೆ ಮಾಜಿ ಮುಖ್ಯಸ್ಥರ ಬಂಧನ – ಪತ್ರಿಕೆ

***● ಅವರ ಹೆಸರು – ನಡವಳಿಕೆಗಳಲ್ಲಿ ವಿರೋಧಾಭಾಸ !?***

★★★

ನಾನು ಮಾತನಾಡಿದರೆ ಭೂಕಂಪವಾಗುತ್ತದೆ – ಶ್ರೀ ರಾಹುಲ್‌ಗಾಂಧಿ

***● ಭೂಮಾತೆ ನಸುನಕ್ಕಳಂತೆ !!***

★★★

ಹೊಸ ವರ್ಷ ಎಲ್ಲರಿಗೂ ಹೊಸ ಹರ್ಷ ತರಲಿ ಎಂದು ಅಪರಂಜಿ ಹಾರೈಸುತ್ತಾಳೆ !!

★★★

# ಶ್ರೀಮಾರುತಿ ಭಜನಾಮಂದಿರ ಪ್ರಕರಣ

- ವತ್ಸನ

**ಚು**ನಾವಣೆಯಲ್ಲಿ ಗೆದ್ದ ದಾನವರಾಜನ ಕಪಿಮುಷ್ಟಿಯಿಂದ ಹೇಗೋ ಬಿಡಿಸಿಕೊಂಡು ಬೆಂಗಳೂರಿಗೆ ಬಂದ ತಕ್ಷಣ ನಾನು ಕೋಟೆ ಆಂಜನೇಯ ಸ್ವಾಮಿ ಗುಡಿಗೆ ಹಣ್ಣು ಕಾಯಿ ಮಾಡಿಸಿಕೊಂಡು ಬರಲು ಹೋದೆ. ಆಶ್ಚರ್ಯವೆಂದರೆ ಶರಲೇಖನೂ ನನ್ನೊಂದಿಗೆ ಬರಲು ಒಪ್ಪಿದ್ದ. ಮಂಗಳಾರತಿ ತೆಗೆದುಕೊಳ್ಳುತ್ತಿರುವಾಗ ''ಸದ್ಯದಲ್ಲೇ ಪುನಃ ಬರ್ತೀಯಲ್ಲಾ'' ಅಂತ ಯಾರೋ ಪಿಸುಗುಟ್ಟಿದ ಹಾಗೆ ಕೇಳಿಸಿತು. ಹತ್ತಿರದಲ್ಲಿ ಯಾರೂ ಇಲ್ಲದ್ದರಿಂದ ನನ್ನದೇ ಏನೋ ನನ್ನ ಭ್ರಮೆ ಎಂದುಕೊಂಡು ಸುಮ್ಮನಾಗಿದ್ದೆ. ಮಾರನೆಯ ದಿನ ಫ್ಲಾಟಿನಲ್ಲಿ ಕೂತಿದ್ದಾಗ ಕರೆಗಂಟೆ ಟ್ರಿನ್‌ಗುಟ್ಟಿತು. ಬಾಗಿಲು ತೆರೆದು ನೋಡಿದರೆ ಜೆರೋಮ್.

''ಕಳೆದ ವಾರಾನೇ ಬೆಂಗಳೂರಿಗೆ ಬಂದಿದ್ದೆ. ನಿನಗೆ ಫೋನೂ ಮಾಡಿದ್ದೆ. ನಾಟ್ ರೀಚಬಲ್ ಅಂತ ಬಂತು. ಎಲ್ಲಿಗೆ ಹೋಗಿದ್ದೆ?'' ಅಂತ ಕೇಳಿದ ಜೆರೋಮ್. ನಮ್ಮ ಇತ್ತೀಚಿನ ಅನುಭವಾನ್ನ ಅವನಿಗೆ ತಿಳಿಸಿದ್ರೆ, ನಮಗಿಬ್ಬರಿಗೂ ಹುಚ್ಚು ಅಂತ ಆತ ತಿಳಿಯೋದು ಖಂಡಿತ ಅಂತ ಹೆದರಿ, ''ಹೀಗೇ ಕೆಲಸದ ಮೇಲೆ ಹೋಗಿದ್ವಿ. ಶರಲೇಖನ ಕೆಲಸ ಅಂದ್ರೆ ಗೊತ್ತಲ್ಲ, ತೀರ ರಹಸ್ಯ'' ಅಂತ ತೇಲಿಸಿ ಉತ್ತರಿಸಿದೆ.

ಡಾಕ್ಟರ್ ಜೆರೋಮ್ ಡಿಕಾಸ್ಟ ನನ್ನ ಆಪ್ತ ಗೆಳೆಯ ಹಾಗೂ ಸಹಪಾಠಿ. ಅವನು ಓಲ್ಗಾಳನ್ನು ಮಂಗಳೂರಿನಲ್ಲಿ ಮದುವೆಯಾದಾಗ ನಾನೇ ಬೆಸ್ಟ್ ಮ್ಯಾನ್. ಈಗ ಸುರತ್ಕಲ್ಲಿನ ಬಳಿ ಇರುವ ಮುಲ್ಕಿಯಲ್ಲಿ ನೆಲೆಸಿ ಒಳ್ಳೇ ಪ್ರಾಕ್ಟೀಸ್ ಮಾಡ್ತಿದಾನೆ. ಆಗಾಗ್ಗೆ ಬೆಂಗಳೂರಿಗೆ ಬಂದಾಗಲೆಲ್ಲಾ ನಮಗೆ ಹಲೋ ಹೇಳಿ ಹೋಗ್ತಾನೆ.

''ಧಮ್ಮೂರ ಹತ್ತಿರ ಇರೋ ಕೈಪುಂಜಾಲಿನಲ್ಲಿ ಒಂದು ಬೀಚ್ ಹೌಸ್ ಕಟ್ಟಿಸಿದ್ದೀನಿ. ಸಮುದ್ರ ತೀರಕ್ಕೆ ಅಂಟಿಕೊಂಡಂತೇ ಇದೆ. ಹಿಂದಿನ ವರಾಂಡಾದಲ್ಲಿ ಕೂತರೆ ಇಡೀ ಸಮುದ್ರನಾ ಗಂಟೆಗಟ್ಟಲೆ ನೋಡ್ತಾ ಕೂಡಬಹುದು. ಹೇಗೂ ಇಬ್ಬರೂ ಭಾರೀ ಕೇಸು ಮುಗಿಸಿ ಸುಸ್ತಾಗಿದ್ದೀರ. ನನ್ನ ಜೊತೆ ಇವತ್ತೇ ಬಂದುಬಿಡಿ. ಭಾನುವಾರದವರೆಗೂ ಇದ್ದು ಹಿಂತಿರುಗಿದರಾಯಿತು'' ಎಂದು ಜೆರೋಮ್ ಆದರದಿಂದ ಆಹ್ವಾನಿಸಿದ. ಬ್ಯಾಛೆಲರ್ ಜೀವನದಲ್ಲಿ ಏನೇ ಕುಂದುಕೊರತೆಗಳಿದ್ದರೂ, ಇಂತಹ ದಿಢೀರ್ ನಿರ್ಧಾರ ತಗೋಳ್ಳೋದು ಬಹು ಸುಲಭ. ಓಕೆ ಅಂದ್ರೆ ಮುಗೀತು. ಯಾಕೆ? ಅಂತ ಪ್ರಶ್ನಿಸೋಕ್ಕೆ ಯಾರೂ ಇರಲ್ವಲ್ಲ. ಅಂದು ಸಂಜೆ ಅವನ ಇನೋವಾದಲ್ಲಿ ಕುಳಿತು ಶಿರಾಡಿ ಘಾಟ್, ಹಿಯರ್ ವೀ ಕಮ್ ಅಂತ ಹೊರಟೇ ಬಿಟ್ವಿ.

ಮುಲ್ಕಿಯಲ್ಲಿ ಜೆರೋಮನ ಮನೆ ಸೇರಿದಾಗ ಬೆಳಗಿನ ಜಾವ ಆರುಘಂಟೆ. ಫ್ರೆಷನ್‌ಅಪ್ ಮಾಡಿಕೊಂಡು, ಬೆಳಗಿನ ಉಪಹಾರ (ಕಟ್ಟೆ ಕಡುಬು) ಮುಗಿಸಿ ಉಡುಪಿ ದಾರಿ ಹಿಡಿದ್ವಿ. ಕಾಪು ಆದನಂತರ ಎಡಕ್ಕೆ ತಿರುಗಿದರೆ ಕೈಪುಂಜಾಲು. ಅವನ ಬೀಚ್ ಹೌಸ್ ಇದ್ದದ್ದು ಬೆಸ್ತರ ಕಾಲೊನಿಯಲ್ಲಿ. ತುಂಬಾ ಸುಂದರ ಪರಿಸರ. ಎಲ್ಲೆಲ್ಲೂ ತೆಂಗಿನ ಮರಗಳು.

ಮನೆಯನ್ನು ಬಹು ನಾಜೂಕಾಗಿ ಕಟ್ಟಿಸಿದ್ದ ಜೆರೋಮ್. ಪಾಪ, ಇದನ್ನು ನೋಡಿ ಆನಂದಿಸೋಕ್ಕೆ ಓಲ್ಗಾ ಇರಲಿಲ್ಲ. ಕಳೆದ ವರ್ಷತಾನೇ ಆಕೆ ಅಕಾಲಿಕವಾಗಿ ತೀರಿಕೊಂಡಿದ್ದಳು. ಮನೆಯ ಹಿಂದಿನ ವರಾಂಡಾ ಸೇರಿದಾಗ ಒಮ್ಮೆಲೇ ಅರಬ್ಬೀ ಸಮುದ್ರದ ವಿಶಾಲ ಹರಹು, ಅಲೆಗಳ ಸೌಮ್ಯ ಮೊರೆತದ ಜೋಗುಳ, ಇವು ನಮ್ಮ ಕಣ್ಣು, ಕಿವಿಗಳನ್ನು ತುಂಬಿದವು. ಬೆಂಗಳೂರಿನ ಕಿಷ್ಕಿಂಧೆಯಿಂದ ಬಂದವರ ಕಣ್ಣಿಗೆ ಇದೊಂದು ಅಪೂರ್ವ ಹಬ್ಬ. ಮನೆಯ ಕೇರ್‌ಟೇಕರ್ ಪುರುಷೋತ್ತಮ್ ನಮಗೆ ಎಳನೀರು ತಂದುಕೊಟ್ಟ. ಕೂತು ಪಟ್ಟಾಗಿ ಹರಟೆ ಹೊಡೆಯಲು ಬಂದವರು ಹರಟೆಯನ್ನೇ ಮರೆತು ಪ್ರಕೃತಿಯಲ್ಲಿ ತಲ್ಲೀನರಾದೆವು.

ಅಂದು ಸಂಜೆ ಜೆರೋಮ್ ತಲವು ತುರ್ತು ಕೇಸುಗಳನ್ನು ನೋಡಲು ಮುಲ್ಕಿಗೆ ಹೋಗಿಬರುತ್ತೇನೆಂದು ಹೇಳಿ ಹೊರಟ. ಶರಲೇಖ ಮತ್ತು ನಾನು ವಾಯುವಿಹಾರಕ್ಕೆಂದು ಮನೆಯ ಮುಂದೆ ಹಾದುಹೋಗುತ್ತಿದ್ದ ಮುಖ್ಯಬೀದಿಯಲ್ಲಿ ಹೊರಟೆವು. ಕೈಪುಂಜಾಲು ತೀರ ಸಣ್ಣ ಹಳ್ಳಿಯಾದರೂ ಎಷ್ಟು ಅಚ್ಚುಕಟ್ಟು ಅಂತೀರಿ. ಶುಭ್ರವಾಗಿ ಗುಡಿಸಿ ಸಾರಿಸಿದ ಮನೆಗಳು. ಪ್ರತಿಯೊಂದು ಮನೆಗೂ ಒಂದು ಹೂದೋಟ. ತೋಟದ ಮಧ್ಯೆ ಒಂದು ಬೃಂದಾವನ. ಹತ್ತು ಹೆಜ್ಜೆ ನಡೆಯುವಷ್ಟರಲ್ಲಿ ಒಂದು ಮಂದಿರ ಕಾಣಿಸಿತು. ''ಪಟ್ಟಾಭಿರಾಮ ಭಜನಾಮಂದಿರ'' ಅಂತ ಅದರ ಮೇಲೆ ಫಲಕ. ಪರವಾಗಿಲ್ಲ ಇದೊಂದು ಆಸ್ತಿಕ ಸಮಾಜ ಅಂದುಕೊಂಡೆ. ಇನ್ನು ಒಂದು ಕಿಲೋಮೀಟರ್ ನಡೆಯುಕ್ಕಿಲ್ಲ, ಇನ್ನೊಂದು ಭಜನಾ ಮಂದಿರ. ಇದರ ಹೆಸರು ''ಶ್ರೀಮಾರುತಿ ಭಜನಾಮಂದಿರ ಹಾಗೂ ವ್ಯಾಯಾಮಶಾಲೆ.'' ಅರೆ, ದೇಹ ಮತ್ತು ಮನಸ್ಸುಗಳ ಆರೋಗ್ಯಕ್ಕೆ ಎಷ್ಟು ಚೆನ್ನಾದ ಸಿಂಗಲ್ ವಿಂಡೋ ಔಟ್‌ಲೆಟ್ ಇದು ಅಂತ ಅನಿಸಿತು. ಸಂಜೆ ಇನ್ನೂ ಆರು ಗಂಟೆಯಾಗಿದ್ದರಿಂದ ಇಲ್ಲಿ ಯಾವ ರೀತಿಯ ಭಜನೆಯೂ ನಡೆಯುತ್ತಿರಲಿಲ್ಲ. ಗ್ರಿಲ್ ಹಾಕಿದ್ದ ಬಾಗಿಲಿನ ಮೂಲಕ ಇಣುಕಿ ನೋಡಿದೆವು. ಮಂದಿರದ ಮುಂಭಾಗದಲ್ಲಿ ವ್ಯಾಯಾಮದ ಉಪಕರಣಗಳಿದ್ದು, ಹಿಂದೆ ಒಂದು ವೇದಿಕೆಯ ಮೇಲೆ ಮಾರುತಿ ದೇವರ ಸುಂದರ ವಿಗ್ರಹ ಕಂಗೊಳಿಸುತ್ತಿತ್ತು.

ವಾಕಿಂಗ್ ಮುಗಿಸಿ ಮನೆ ಸೇರಿದಾಗ ಏಳೂವರೆ. ಜೆರೋಮ್ ಮುಲ್ಕಿಯಿಂದ ಹಿಂತಿರುಗಿದ್ದ. ಅವನೊಂದಿಗೆ ಅವನ ತಮ್ಮ ವಿಲ್ಸನ್ ಕೂಡಾ ನಮ್ಮನ್ನು ನೋಡಲು ಬಂದಿದ್ದ. ವಿಲ್ಸನ್ ಮುಲ್ಕಿಯಲ್ಲಿನ ಬ್ಯಾಂಕ್ ಒಂದರಲ್ಲಿ ಛೀಫ್ ಮ್ಯಾನೇಜರ್. ಅವನಿಗೆ ಶರಲೇಖನೆಂದರೆ ಅಚ್ಚುಮೆಚ್ಚು. ಅವನ ಸಾಹಸಗಾಥೆಗಳನ್ನು ಕೇಳುವುದೇ ಅವನಿಗೊಂದು ಮೋಜು. ಆ ಸಂಜೆಯೆಲ್ಲಾ ನಮ್ಮ ಹಳೆಯ ಅನುಭವಗಳನ್ನು ಹಂಚಿಕೊಳ್ಳುವುದರಲ್ಲೇ ಕಳೆದುಹೋಯಿತು. ಊಟವಾದನಂತರ ವಿಲ್ಸನ್ ಊರಿಗೆ ಹಿಂತಿರುಗಿದ. ಚಿಲ್ಲರೆಗಾಗಿ ಕಾದು ನಿಂತ ಗ್ರಾಹಕರನ್ನು ಮಾರನೆಯ ಬೆಳಗ್ಗೆ ನಿಭಾಯಿಸಬೇಕಲ್ಲಾ.

ಮಾರನೆಯ ಬೆಳಗ್ಗೆ ಎಂದಿನಂತೆ ಶರಲೇಖನೊಂದಿಗೆ ನಾನು ವಾಕಿಂಗ್ ಹೊರಟೆ. ಶ್ರೀಮಾರುತಿ ಭಜನಾಮಂದಿರದ ಹತ್ತಿರ ಜನಸಂದಣಿ ದಟ್ಟವಾಗಿತ್ತು. ಬೀದಿಯಲ್ಲೆಲ್ಲಾ ಜನ ತುಂಬಿ ತುಳುಕುತ್ತಿದ್ದರು. ಹತ್ತಿರದಲ್ಲಿ ನಿಂತಿದ್ದ ಒಬ್ಬನನ್ನು ವಿಚಾರಿಸಿದೆ. ಆತ, ''ನಿನ್ನೆ ರಾತ್ರಿ ಇಲ್ಲೊಂದು ಪವಾಡ ನಡೆಯಿತು ಮಾರಾಯ್ರೇ. ರಾತ್ರಿ ಸುಮಾರು ಒಂದೂ-ಒಂದೂವರೆಗೆ ಅಲ್ಲೇ ಹತ್ತಿರದ ಮನೆಯ ಶಂಭು, ಭಜನಾಮಂದಿರದಲ್ಲಿ ದೀಪ

ಉರೀತಾ ಇದ್ದುದನ್ನು ಕಿಟಕಿಯಿಂದ ನೋಡಿದ ಅಂತೆ. ಅವ ನೋಡ್ತಾ ಇದ್ದಹಾಗೆ ಹಿಮ್ಮುಖವಾಗಿದ್ದ ಮಾರುತಿಯ ವಿಗ್ರಹ ಮೆಲ್ಲ ಈಚೆ ತಿರುಗಿ ಇವನಿಗೆ ಮುಖಮಾಡಿತಂತೆ. ಅವ ಭಾವಪರವಶತೆಯಿಂದ ಪವಾಡವನ್ನು ನೋಡಲು ಎಲ್ಲರನ್ನು ಕೂಗಿದ ಅಂತೆ. ಜನ ಸೇರಿದರು. ಅರ್ಚಕರು ಅಖಂಡ ಪೂಜೆ ಶುರು ಮಾಡಿಯೇ ಬಿಟ್ರು. ಇನ್ನೂ ಜನ ಬರ್ತಾನೆ ಇದ್ದಾರೆ. ಎಂಥ ಪವಾಡ ಮಾರಾಯ್ರೆ! ಭಯಂಕರ!'' ಅಂದ ಆತ. ಶರಲೇಖನಿಗೆ ಒಳಗೆ ಹೋಗಿ ನೋಡುವ ಕುತೂಹಲ. ಆದರೆ ಆ ದಟ್ಟ ಜನಸಂದಣಿಯಲ್ಲಿ ಅದೆಲ್ಲಾ ಸಾಧ್ಯವೇ. ನಾವು ಮನೆಗೆ ಹಿಂತಿರುಗಿದೆವು. ಜೆರೋಮ್ ಆಗತಾನೇ ಎದ್ದು ವರಾಂಡಾದಲ್ಲಿ ಕುಳಿತು ಕಾಫಿ ಕುಡಿಯುತ್ತಿದ್ದ. ನಾನು ಅವನಿಗೆ ಮಾರುತಿಮಂದಿರದ ಪವಾಡದ ವಿಷಯ ಹೇಳಿದೆ. ಅವ ನಮಗೆ ಆ ಮಂದಿರದ ವಿವರ ನೀಡಿದ. ''ಅದನ್ನ ಕಟ್ಟಿಸಿದ್ದು ಪದ್ಮನಾಭ ಶೆಟ್ಟಿ ಅವರು. ಅವರು ಊರಿನ ಮುಖಂಡರು. ಪಂಚಾಯಿತಿ ಛೇರ್ಮನ್. ಅವರೇ ತಮ್ಮ ಶಿಷ್ಯಂದಿರಿಗಾಗಿ ವ್ಯಾಯಾಮಶಾಲೆ ನಡೆಸುತ್ತಿದ್ದಾರೆ. ರಾಜಕಾರಣಿ ಎಂದ ಮೇಲೆ ಒಂದು ದಂಡು ಇರಲೇ ಬೇಕಲ್ಲಾ. ಈ ಪವಾಡ ನಡೆದಿರೋದು ನಿಜವಾದರೆ ಅದು ಅವರ ವರ್ಚಸ್ಸನ್ನು ಹೆಚ್ಚಿಸೋದು ಖಂಡಿತ'' ಎಂದ ಜೆರೋಮ್. ಅವನು ಮಾತನಾಡುತ್ತಿದ್ದಂತೆಯೇ ಒಂದು ಪೋಲೀಸ್ ಜೀಪ್ ವೇಗದಿಂದ ಬಂದು ನಮ್ಮ ಮನೆಯಮುಂದೆಯೇ ನಿಂತಿತು. ಜೀಪಿನಿಂದ ಒಬ್ಬ ಪೋಲೀಸ್ ಆಫೀಸರ್ ಮತ್ತು ವಿಲ್ಸನ್ ಇಳಿದರು. ವಿಲ್ಸನ್ನನ ಮುಖ ಕಳೆಗುಂದಿತ್ತು. ಯಾವುದೋ ಒಂದು ಭಾರಿ ಆತಂಕ ಅವನನ್ನು ಕಾಡುತ್ತಿದ್ದಂತೆ ಕಂಡಿತು. ಇಬ್ಬರೂ ಬಂದು ವರಾಂಡದಲ್ಲಿ ಕುಳಿತೊಡನೆಯೇ ವಿಲ್ಸನ್ ಪ್ರಾರಂಭಿಸಿದ. ''ನಿನ್ನೆ ಇಲ್ಲಿಂದ ಊಟ ಮುಗಿಸಿ ಮನೆಗೆ ಹೊರಟೆನಲ್ಲಾ. ಮನೆ ಸೇರಿದ ಹತ್ತು ನಿಮಿಷಕ್ಕೆ ಬ್ಯಾಂಕಿನಿಂದ ಕಾಲ್ ಬಂತು. ಅರ್ಜೆಂಟಾಗಿ ಅಲ್ಲಿಗೆ ಹೋದೆ. ಜನಗಳಿಗೆ ಕ್ಯಾಷ್ ಕೊಡಬೇಕಾದ್ದರಿಂದ ನಾವು ಎಂಟು ಗಂಟೆವರೆಗೂ ಬ್ಯಾಂಕ್ ತೆಗೆದೇ ಇರುತ್ತೇವೆ. ಬ್ಯಾಂಕ್ ಮುಚ್ಚಿದ ನಂತರ ನಮ್ಮ ಸಿಬ್ಬಂದಿಗಳು ಕ್ಯಾಷ್ ಬ್ಯಾಲೆನ್ಸ್ ಸರಿಯಾಗಿದೆಯೇ ಅಂತ ಟ್ಯಾಲಿ ಮಾಡುತ್ತಾರೆ. ನಿನ್ನ ರಾತ್ರಿ ಇಪ್ಪತ್ತು ಲಕ್ಷ ಕಡಿಮೆ ಬಂದಿತ್ತು. ಎರಡು ಸಾವಿರದ ನೋಟುಗಳ ಒಂದು ಕಾರ್ಟನ್ನೇ ನಾಪತ್ತೆಯಾಗಿದ್ದು ಗೊತ್ತಾಯಿತು. ತಕ್ಷಣ ನಾನು ಇನ್ಸ್‌ಪೆಕ್ಟರ್ ಸುರೇಶ್‌ಗೆ ಫೋನ್ ಮಾಡಿ ಅವರನ್ನ ಕರೆಸಿಕೊಂಡೆ. ಅವರೂ ಎಲ್ಲ ತಪಾಸಣೆ ನಡೆಸಿದರು. ಆಗ ನನಗೆ ನೀವು ಇಲ್ಲಿರುವುದು ನೆನಪಿಗೆ ಬಂತು. ಸುರೇಶ್‌ಗೆ ನೀವಿಲ್ಲಿರೋದನ್ನ ಹೇಳಿದೆ. ಅವರು ನಿಮ್ಮ ಸಲಹೆ ಕೇಳಲು ಕಾತರರಾಗಿರೋದ್ರಿಂದ ಅವರನ್ನೇ ಇಲ್ಲಿಗೆ ಕರೆತಂದೆ'' ಅಂತ ವಿಲ್ಸನ್ ಹೇಳಿದ.

ಈಗ ಮಾತನಾಡುವುದು ಸುರೇಶನ ಸರದಿ. ''ಮಾನ್ಯ ಶರಲೇಖ ಅವರೇ, ನಿಮ್ಮ ಬಗ್ಗೆ ನನಗೆ ಇರೋ ಅತೀವ ಗೌರವಾನ್ನ ತಿಳಿಸೋದಕ್ಕೆ ಈಗ ಸಮಯ ಇಲ್ಲ. ಆಗಿರೋದು ಇಷ್ಟು. ಆ ಕ್ಯಾಷ್ ಕಾರ್ಟನ್ ಹೆಡ್ ಆಫೀಸಿನಿಂದ ಇವರ ಬ್ಯಾಂಕಿಗೆ ಬಂದದ್ದು ನಿನ್ನೆ ಮಧ್ಯಾಹ್ನ ಮೂರುಗಂಟೆಗೆ. ಇದಕ್ಕೆ ಪುರಾವೆ ಇದೆ. ನಾಲ್ಕು ಗಂಟೆ ಹೊತ್ತಿಗೆ ಇವರ ಬ್ಯಾಂಕಿನ ಅಸಿಸ್ಟೆಂಟ್ ಮ್ಯಾನೇಜರ್ ನಟರಾಜನ್ ತಲೆನೋವು ಅಂತ ರಜೆ ಹಾಕಿ ಹೋದವರು ಇನ್ನೂ ಪತ್ತೆ ಇಲ್ಲ. ಅವರ ಮನೆ ಇರುವುದು ಇದೇ ಕೈಪುಂಜಾಲಿನಲ್ಲಿ. ಮನೆ ಬೀಗ ಹಾಕಿದೆ. ಎರಡು ದಿನ ಮುಂಚೆಯೇ ಮನೆಯವರೆಲ್ಲಾ ಊರಿಗೆ ಹೋದರಂತೆ. ಇವರೊಬ್ಬರೇ ಇಲ್ಲಿ

ಇದ್ದದ್ದು. ನಮ್ಮ ಮುಖ್ಯ ಸಂಶಯ ಈ ನಟರಾಜನ್ ಮೇಲೆ. ಏಕೆಂದರೆ ಮಿಕ್ಕ ಎಲ್ಲ ಸಿಬ್ಬಂದಿಗಳನ್ನು ಪರಿಶೀಲಿಸಿದ್ದಾಗಿದೆ. ಮುಂದಿನ ಹಾದಿಯ ಬಗ್ಗೆ ನಿಮ್ಮ ಸಲಹೆ ನಮಗೆ ಅಗತ್ಯ'' ಎಂದು ಚಿಕ್ಕದಾಗಿ, ಚೊಕ್ಕವಾಗಿ ತನ್ನ ಅಹವಾಲನ್ನು ಮಂಡಿಸಿದ.

ಶರಲೇಖ ಎದ್ದು ನಿಂತ. ''ಪರಿಸ್ಥಿತಿ ಗಂಭೀರವಾಗಿದೆ. ಆ ಕ್ಯಾಶ್ ಪತ್ತೆ ಹಚ್ಚೋದು ಅತಿ ಮುಖ್ಯ. ನಡೆಯಿರಿ ಹೊರಡೋಣ'' ಎನ್ನುತ್ತಾ ಶರಲೇಖ ಜೀಪ್ ಹತ್ತಿದ. ವಿಲ್ಸನ್ ಮತ್ತು ಸುರೇಶ್ ಕೂಡ ಹತ್ತಿದನಂತರ ಜೀಪ್ ಹೊರಟಿತು. ''ನಿಜವಾಗ್ಲೂ ಶರಲೇಖ ಮತ್ತು ನೀನು ನನ್ನ ಜೊತೆ ಬಂದದ್ದು ದೈವ ನಿಯಾಮಕ ಅಂತ ಕಾಣುತ್ತೆ. ವಿಲ್ಸನ್‌ಗೆ ಅಂತಹ ತುರ್ತು ಬಂದಾಗ ಸಹಾಯಕ್ಕೆ ನಾಡಿನ ಖ್ಯಾತ ಪತ್ತೇದಾರ ಸಿಕ್ಕಿರೋದೇ ಒಂದು ಪವಾಡ'' ಅಂತ ಜೆರೋಮ್ ಹೇಳಿದ. ಸಮುದ್ರ ನೋಡುತ್ತಾ ವರಾಂಡಾದಲ್ಲೇ ಕುಳಿತೆವು.

ಮಧ್ಯಾಹ್ನ ಒಂದರ ಹೊತ್ತಿಗೆ ಜೀಪು ಪುನಃ ಬಂದಿತು. ಡ್ರೈವರ್ ಜೀಪು ನಿಲ್ಲಿಸಿ ನಮ್ಮಲ್ಲಿಗೆ ಬಂದ. ''ನಿಮ್ಮನ್ನ ಕರೆದುತರಲು ಇನ್‌ಸ್ಪೆಕ್ಟರ್ ಹೇಳಿರುವರು. ಬನ್ನಿ ಹೋಗುವ'' ಎಂದ ಆ ಡ್ರೈವರ್. ಜೀಪು ನೇರವಾಗಿ ಶ್ರೀಮಾರುತಿ ಭಜನಾ ಮಂದಿರಕ್ಕೆ ಹೋಯಿತು. ಮಂದಿರದ ಹೊರಗೆ ಪೋಲೀಸ್ ಬಿಟ್ಟು ಇನ್ನಾರೂ ಇರಲಿಲ್ಲ. ಬೆಳಗಿನ ಜನಜಂಗುಳಿಯೆಲ್ಲಾ ಕರಗಿಹೋಗಿತ್ತು. ಜೆರೋಮ್‌ನೊಂದಿಗೆ ನಾನು ಒಳಕ್ಕೆ ಹೋದೆ. ಒಳಗೆ ಶರಲೇಖ, ವಿಲ್ಸನ್ ಮತ್ತು ಸುರೇಶ್ ಇದ್ದರು ಅವರೊಂದಿಗೆ ಒಬ್ಬ ಶ್ವೇತವಸ್ತ್ರ ಧರಿಸಿದ್ದ ಸಂಭಾವಿತರಂತೆ ಕಾಣುತ್ತಿದ್ದ ಹಿರಿಯರೊಬ್ಬರು ಇದ್ದರು. ಅವರ ಮುಖ ಸಪ್ಪಗಿದ್ದುದನ್ನು ನಾನು ಗಮನಿಸಿದೆ. ''ಕಳ್ಳತನದ ಸುಳಿವು ಸಿಕ್ಕಿದೆ. ಸಾಕ್ಷಿಗಳಿರಲಿ ಅಂತ ನಿಮ್ಮನ್ನು ಇಲ್ಲಿಗೆ ಕರೆಸಿದೆ.. ಇವರೇ ಪದ್ಮನಾಭ ಶೆಟ್ಟಿ. ಈ ಮಂದಿರದ ಮಾಲಿಕರು'' ಎಂದು ಸುರೇಶ್ ಹೇಳಿ, ಶೆಟ್ಟರನ್ನು ಉದ್ದೇಶಿಸಿ, ''ಈಗ ನೆಲಮಾಳಿಗೆ ತೋರಿಸಿ'' ಅಂತ ಆಜ್ಞಾಪಿಸಿದ. ಶೆಟ್ಟರು, ಮಾರುತಿಯ ವಿಗ್ರಹದ ಬಲಕ್ಕೆ ಹೋಗಿ ನಾಲ್ಕು ಅಡಿ ಮುಂದೆ ನೆಲಕ್ಕೆ ಹರಡಿದ್ದ ರತ್ನಗಂಬಳಿಯನ್ನು ಪಕ್ಕಕ್ಕೆ ಸರಿಸಿದರು. ಅಲ್ಲೊಂದು ನೆಲಮಾಳಿಗೆಯ ದ್ವಾರ. ಇಳಿಯಲು ಮೆಟ್ಟಲುಗಳು. ಶೆಟ್ಟರು ಇಳಿಯುತ್ತಿದ್ದಂತೆ ನಾವೆಲ್ಲರೂ ಅವರನ್ನು ಹಿಂಬಾಲಿಸಿದೆವು. ಕೆಳಗಿನ ಕೋಣೆ ದೀಪಗಳಿಂದ ಪ್ರಕಾಶಮಾನವಾಗಿ ಬೆಳಗುತ್ತಿತ್ತು. ಸುತ್ತಲೂ ಅಲ್ಮಾರಾಗಳು. ಒಂದು ಮೂಲೆಯಲ್ಲಿ ಒಂದು ವ್ಯಕ್ತಿ ಕಳಿತಿತ್ತು. ''ಅವನೇ ನಟರಾಜನ್'' ಅಂತ ಶೆಟ್ಟಿ ಹೇಳಿದ್ದು ಕೇಳಿ ಆತ ಎದ್ದು ನಿಂತ. ಸುರೇಶ್ ಆತನತ್ತ ಸಾಗಿ ಅವನಿಗೆ ಕೈಕೋಳ ತೊಡಿಸಿದ. ಹತ್ತಿರದಲ್ಲೇ ಇದ್ದ ಕ್ಯಾಶ್ ಕಾರ್ಟನನ್ನು ಪ್ಯಾದೆಯೊಬ್ಬನ ಕೈಲಿ ಹೊರಿಸಿಕೊಂಡು, ನಾವೆಲ್ಲರೂ ಮೆಟ್ಟಲು ಹತ್ತಿ ಮೇಲೆ ಬಂದನಂತರ ಶೆಟ್ಟರು ಮಾರುತಿ ವಿಗ್ರಹದ ಪೀಠವನ್ನು ಎರಡೂ ಕೈಯ್ಯಲ್ಲಿ ಹಿಡಿದು ಬಲಕ್ಕೆ ತಿರುಗಿಸಿದರು. ವಿಗ್ರಹ ತನ್ನ ಮೊದಲಿನ ದಿಕ್ಕಿಗೆ ತಿರುಗುತ್ತಿದ್ದಂತೆ ನೆಲಮಾಳಿಗೆಯ ಬಾಗಿಲು ಮುಚ್ಚಿಕೊಂಡಿತು. ಇನ್‌ಸ್ಪೆಕ್ಟರ್ ಸುರೇಶ್ ಎಲ್ಲರನ್ನೂ ಜೀಪಿನಲ್ಲಿ ಕೂರಿಸಿಕೊಂಡು ಸ್ಟೇಶನಿನತ್ತ ಹೊರಟ. ಜೆರೋಮ್‌ನೊಂದಿಗೆ ಶರಲೇಖ ಮತ್ತು ನಾನು ಮನೆಯತ್ತ ನಡೆಯುತ್ತಲೇ ಹೋದೆವು. ದಾರಿಯಲ್ಲಿ ಶರಲೇಖ ತನ್ನ ವಿವರಣೆ ಪ್ರಾರಂಭಿಸಿದ.

''ಸುರೇಶ್ ಬಹು ಸ್ಪಷ್ಟವಾಗಿ ಸಮಸ್ಯೆಯನ್ನು ನನ್ನ ಮುಂದಿಟ್ಟನಂತರ, ನನಗೆ ಹೊಳೆದ ಮುಖ್ಯ ಅಂಶ ಅಂದರೆ ನಟರಾಜನ ಸೈಕಾಲಜಿ ಅರ್ಥಮಾಡಿಕೊಳ್ಳೋದು. ಅಂತಹ ಭಾರೀಮೊತ್ತದ ಕಾರ್ಟನನ್ನ ಅವನು ಕದಿಯಬೇಕಾದರೆ ಯಾರಾದರೂ ಭಾರೀ ಕುಳಗಳ

ಕುಮ್ಮಕ್ಕಿಲ್ಲದೇ ಸಾಧ್ಯವಿಲ್ಲ. ಕದ್ದನಂತರ ಅದನ್ನ ಮರೆಸಿಡೋದು ಅತಿ ಮುಖ್ಯ. ಅಂತಹ ಹಣಾನ ಮರೆಸಿಡೋಕ್ಕೆ ಅತ್ಯಂತ ಸುರಕ್ಷಿತ ಜಾಗ ಯಾವುದಿರಬಹುದು ಅಂತ ಯೋಚಿಸಿದೆ. ಮನೆಯಲ್ಲಿಟ್ಟರೆ ಪೋಲೀಸ್ ತನಿಖೆ ಬಹು ಸುಲಭ. ಭಾರಿ ಮೊತ್ತದ ಹಣದ ಅಗತ್ಯ ಇದ್ದು, ಅದನ್ನು ಸುರಕ್ಷಿತವಾಗಿ ಮರೆಸಿಡುವ ಜಾಗ ತನ್ನ ನಿಯಂತ್ರಣದಲ್ಲಿ ಇದ್ದೋರಿಗೇ ಇಂತಹ ಕಳ್ಳತನಾನ್ನ ಅರಗಿಸಿಕೊಳ್ಳೋದು ಸಾಧ್ಯ ಅನಿಸಿತು. ಈ ನಟರಾಜನ್ ಸ್ನೇಹವಲಯದಲ್ಲಿ ಪದ್ಮನಾಭ ಶೆಟ್ಟಿ ಇದ್ದದ್ದು ಸುರೇಶನಿಂದ ತಿಳಿಯಿತು. ಅವನ ಮಾರುತಿಭಜನಾ ಮಂದಿರದ ವಿಶ್ವಸ್ಥ ಮಂಡಳಿಯಲ್ಲಿ ನಟರಾಜನ್ ಕಾರ್ಯದರ್ಶಿಯಂತೆ. ಹಾಗಾದರೆ ಪದ್ಮನಾಭಶೆಟ್ಟಿಯ ಪರವಾಗಿ ಈ ಕಳ್ಳತನ ಆಗಿರಬಹುದೇ ಅಂತ ಯೋಚಿಸಿದೆ. ಹಾಗಿದ್ದಲ್ಲಿ ಹಣ ಮರೆಸಿಡೋಕ್ಕೆ ಈ ಮಂದಿರವನ್ನು ಬಳಸಿರಬಹುದೇ? ನೆಲಮಾಳಿಗೆಯೊಂದರಲ್ಲಿ ಹಣ ಬಚ್ಚಿಟ್ಟು ಆ ಮಾಳಿಗೆಯ ಬಾಗಿಲನ್ನ ವಿಗ್ರಹ ತಿರುಗಿಸುವ ಮೂಲಕ ತೆರೆಯುವಂತಾದರೆ, ಯಾವ ಪೋಲೀಸಿನವನೂ ವಿಗ್ರಹವನ್ನು ಮುಟ್ಟುವ ಸಾಹಸ ಮಾಡಲಾರ ಅಲ್ಲವೇ. ಆದರೆ ಹಣ ಬಚ್ಚಿಡುವ ಉದ್ದೇಶದಿಂದ ವಿಗ್ರಹವನ್ನು ತಿರುಗಿಸುತ್ತಿದ್ದಾಗ ಅಕಸ್ಮಾತ್ ಆ ಚಲನೆ ಅಮಾಯಕನೊಬ್ಬನ ಕಣ್ಣಿಗೆ ಬಿದ್ದರೆ ಆತನ ಭಾವತರಂಗಗಳೇ ಬೇರೆಯಾಗಿರುತ್ತೆ. ಅವನ ದೃಷ್ಟಿಯಲ್ಲಿ ಆ ತಿರುಗುವಿಕೆ ಮಾರುತಿಯ ಅನುಗ್ರಹವಾಗಿರುತ್ತೆ. ಇಷ್ಟು ತರ್ಕವನ್ನು ಸುರೇಶನೊಂದಿಗೆ ಹಂಚಿಕೊಂಡೆ. ಆತ ಬಹು ಬುದ್ಧಿವಂತಿಕೆಯಿಂದ ಎಕೆ 47 ಗನ್‌ಗಳನ್ನು ಹೊಂದಿರುವ ಆತಂಕವಾದಿಯೊಬ್ಬನು ಕೈಪುಂಜಾಲಿನಲ್ಲಿ ಅವಿತಿದ್ದಾನೆ. ಅವನನ್ನು ಹುಡುಕಿ ಸೆರೆಹಿಡಿಯಲು ಊರಿನ ಎಲ್ಲರ ಸಹಕಾರ ಬೇಕಾಗುತ್ತದೆ. ಎಲ್ಲರೂ ತಮ್ಮ ತಮ್ಮ ಮನೆಗಳನ್ನು ತಕ್ಷಣ ಸೇರಿಕೊಂಡರೆ ಆತಂಕವಾದಿಯನ್ನು ಹುಡುಕುವ ಕೆಲಸ ಸುಲಭವಾಗುತ್ತದೆ ಎಂದು ಶ್ರೀಮಾರುತಿ ಮಂದಿರದಲ್ಲಿ ಘೋಷಣೆ ಮಾಡಿಸಿದ. ನೆರೆದಿದ್ದ ಜನಸಂದಣಿ ಎದ್ದನೋ ಬಿದ್ದನೋ ಅಂತ ಓಡಿಹೋಯಿತು. ಪದ್ಮನಾಭ ಶೆಟ್ಟಿಯನ್ನು ಅರೆಸ್ಟ್ ವಾರೆಂಟ್ ಸಹಾಯದಿಂದ ಸೆರೆಹಿಡಿದು ಅವನ ಬಾಯಿ ಬಿಡಿಸಿದ ಸುರೇಶ್. ನಟರಾಜನ್ ಮಾರುತಿಯ ವಿಗ್ರಹವನ್ನು ತಿರುಗಿಸಿ ನೆಲಮಾಳಿಗೆಯ ಬಾಗಿಲನ್ನು ತೆಗೆದು ಹಣದ ಕಾರ್ಟನನ್ನು ಒಳಗೆ ಇಡುತ್ತಿರುವಾಗಲೇ ಶಂಭು ತನ್ನ ಕಹಳೆ ಊದಿದ್ದನಂತೆ. ಬರುತ್ತಿದ ಜನರ ಗಲಾಟೆಯಲ್ಲಿ ನಟರಾಜನ್ ಹೊರಕ್ಕೆ ಬರವುದೇ ಸಾಧ್ಯವಾಗಲಿಲ್ಲ. ಜನಸಂದಣಿ ಕರಗಿದಮೇಲೆ ಪೋಲೀಸರ ಬಂದೋಬಸ್ತು ಇದ್ದದ್ದರಿಂದ ಆತ ಹೆದರಿ ಒಳಗೇ ಅಡಗಿ ಕೂತಿದ್ದ. ಮಿಕ್ಕದ್ದೆಲ್ಲಾ ನಿಮಗೆ ತಿಳಿದೇ ಇದೆ'' ಎಂದ ಶರಲೇಖ.

''ಅದು ಹೇಗೆ ಈ ವಿಗ್ರಹದ ಪವಾಡವನ್ನು ಬ್ಯಾಂಕ್ ಕಳ್ಳತನಕ್ಕೆ ತಾಳೆ ಹಾಕಿ ನಮ್ಮ ಸಮಸ್ಯೆಯನ್ನ ಪರಿಹರಿಸಿದಿರಿ?'' ಅಂತ ಜೆರೋಮ್ ಕೇಳಿದ. ''ಅದನ್ನೇ ಪತ್ತೇದಾರಿ ಕೆಲಸ ಅನ್ನೋದು'' ಅಂತ ಉತ್ತರಿಸಿದ ಶರಲೇಖ.

**ಹೊಸ ವರ್ಷದ ಈ ಸಂಚಿಕೆಯಿಂದ ಪ್ರಾರಂಭವಾಗಿರುವ ಹೊಸ ಅಂಕಣಗಳಾದ ವ್ಯಂಗ್ಯ ಮೆಲುಕು (ಪುಟ 22), ದಶಶಿರ (ಪುಟ 23) ಮತ್ತು ಪಂಚ್‌ಪದ್ಯಗಳು (ಪುಟ 30) ಇವುಗಳತ್ತ ಅಪರಂಜಿ ಓದುಗರು ಗಮನ ಹರಿಸಿ ಎಂದು ವಿನಂತಿ**

# ದಾಂಪತ್ಯದ ಇನ್ನೊಂದು ಹೊಸಪರಿ

**- ಎಸ್.ಆರ್. ವಿಜಯಶಂಕರ**

ಕೆಲವೊಮ್ಮೆ ಸ್ನೇಹಿತರ ಜೊತೆ ಹರಟೆ ಹೊಡೆಯುವಾಗ ವಿಚಾರ, ವಿಮರ್ಶೆ, ಚರ್ಚೆ, ಭಿನ್ನಾಭಿಪ್ರಾಯಗಳೆಲ್ಲಾ ಸೇರಿ ಎಲ್ಲಿಂದ ಎಲ್ಲಿಗೆ ಹೋಗಿರುತ್ತೇವೆ ಎಂಬುದೇ ತಿಳಿಯುವುದಿಲ್ಲ. ಅದರಲ್ಲೂ ನಮ್ಮ ಹೈಸ್ಕೂಲಿನ ಹಳೆ ಸ್ನೇಹಿತರು ಸೇರಿದಾಗ ಅದರ ರಂಗೇ ಬೇರೆ. ಮಾರನೆಯ ದಿನವೇ ಕೇಳಿದರೂ ಮಾತನಾಡಿದ್ದರಲ್ಲಿ ಹೆಚ್ಚಿನದು ನೆನಪಿನಲ್ಲಿರುವುದಿಲ್ಲ. ಮಾತಿನ ಸಂತೋಷ ಮಾತ್ರ ಉಳಿದಿರುತ್ತದೆ. ಅಲ್ಲಿ ಅಪರೂಪಕ್ಕೆ ಸುಳಿಯುವ ಸಾಹಿತ್ಯದ ಹರಟೆಯ ಸ್ವಾರಸ್ಯಗಳು ಕೆಲವೊಮ್ಮೆ ಸ್ವಲ್ಪ ಕಾಲ ತಲೆಯಲ್ಲಿ ಇರುತ್ತವೆ. ಈಗ ಹೇಳುತ್ತಿರುವುದು ಅಂತಹವುಗಳಲ್ಲಿ ಒಂದು.

ಸ್ನೇಹಿತರಾದ ಅದ್ರಾಮ ಮತ್ತು ಪೊಮ್ಮೆಚ್ಚ ಭಾನುವಾರ ಬೆಳಗ್ಗೆ ಜೊತೆಯಲ್ಲಿ ವಾಕಿಂಗ್ ಹೋಗೋಣ ಎಂದು ಜಂಟಿ ಆಹ್ವಾನ ನೀಡಿದರು. ಪೊಮ್ಮೆಚ್ಚನ ಆಫೀಸಿಗೆ ಅಕಸ್ಮಾತ್ತಾಗಿ ಹೋಗಿದ್ದ ಅದ್ರಾಮನ ಐಡಿಯಾ ಎಂದು ಪೊಮ್ಮೆಚ್ಚ ತಕ್ಷಣ ಒಪ್ಪಿಸಲು ತುಸು ಪ್ರಭಾವ ಬೀರಿದ. ಅದರ ಅರ್ಥ, ವಾಕಿಂಗ್ ಆಗಿ ಅಲ್ಲೇ ಸಮೀಪದ ಒಂದು ಹೋಟೆಲ್‌ನಲ್ಲಿ ಬೆಳಗಿನ ಬ್ರೇಕ್‌ಫಾಸ್ಟ್ ಮುಗಿಸಿ ಹತ್ತಿರದ ಪಾರ್ಕಿನ ಕಲ್ಲು ಬೆಂಚಿನಲ್ಲಿ ಮತ್ತೆ ಅರ್ಧಗಂಟೆ ಕೂತು ಇನ್ನೊಂದು ಸಲ ಬೈಟೂ ಕಾಫಿ ಕುಡಿದು ನಮ್ಮ ನಮ್ಮ ಸ್ಕೂಟರ್ ಹತ್ತಿ ಮನೆಗೆ ಹೋಗುವುದು.

ಈ ಅದ್ರಾಮ ಎಂಬ ಹೆಸರು ಅಬ್ದುಲ್ ರಹಮಾನದ ಸಂಕ್ಷಿಪ್ತ ರೂಪ ಎಂಬುದೂ ಈಗ ನಮಗೆ ಮರೆತುಹೋಗಿದೆ. ಪದ್ಮನಾಭನಿಗೆ ಪೊಮ್ಮ ಎಂಬ ಹೆಸರು ಹೇಗೆ ಬಂತು ಮತ್ತು ಅದು ಯಾಕೆ ಪೊಮ್ಮೆಚ್ಚ ಆಯಿತು ಎಂಬುದೂ ಈಗ ನೆನಪಿಲ್ಲ. ಹೈಸ್ಕೂಲಿನಲ್ಲಿದ್ದಾಗ ಅವೆಲ್ಲಾ ನಮ್ಮ ಹರಟೆಯ ಭಾಗವಾಗಿ ಭಾಷಾಶಾಸ್ತ್ರ ಬಹಳ ದೊಡ್ಡವಿಚಾರ ಎಂಬ ನಿರ್ಣಯಕ್ಕೆ ಬಂದು ಅಲ್ಲಿಗೇ ಅದನ್ನು ಬಿಟ್ಟಿದ್ದೆವು. ಆಮೇಲೆ ಉದ್ಯೋಗಕ್ಕೆ ಸೇರಿದ ಬಳಿಕ ಎಲ್ಲರಂತೆ ನಾವೂ ಕೂಡಾ ಕಂಡಾಗ ಅದು ಇದು ಮಾತನಾಡುತ್ತಾ ಸೈಟು ಮನೆ ಶೇರು ವ್ಯವಹಾರ, ಯಾವ ಬ್ಯಾಂಕಲ್ಲಿ ಎಷ್ಟು ಮನೆ ಸಾಲದ ಬಡ್ಡಿ ಇತ್ಯಾದಿ ಮಾತು ಹೆಚ್ಚು ಇರುತ್ತಿತ್ತು. ಆದರೆ ಅದ್ರಾಮ ಒಬ್ಬ, ಆಗ ಈಗ ತಾನು ಓದಿದ ಹೊಸ ಪುಸ್ತಕ, ಯಾವುದೋ ಪತ್ರಿಕೆಯಲ್ಲಿ ಓದಿದ ಲೇಖನದ ವಿಚಾರ ಹೀಗೆ ನಾವು ಕೇಳಲಿ ಬಿಡಲಿ ತನ್ನ ಶಂಖ ಊದುತ್ತಿದ್ದ. ಈಗ ಹೇಳಹೊರಟಿರುವುದು ಅವ ಹೇಳಿದ ಅಂತ ಒಂದು ಕತೆ.

ನಮ್ಮ ಪೊಮ್ಮೆಚ್ಚನಿಗೆ ಮಾತು ಸಿಕ್ಕರೆ ಮಾರು ಹೊಲ ಸಿಕ್ಕಂತೆ. ಸಂತೋಷವಾಗಿ ಮಾತನಾಡುತ್ತಾ ನೆನಪಿಗೆ ಬಂದದ್ದು ಬಾರದ್ದು ಎಲ್ಲಾ ಸೇರಿಸಿ ಹೇಳುತ್ತಿರುತ್ತಾನೆ. ಸ್ವಾರಸ್ಯವಾಗಿ ಮಾತನಾಡಬಲ್ಲವ ಬೇರೆ. ಭಾನುವಾರ ನಾವು ದೋಸೆ ತಿಂದು ಮರದ ಕೆಳಗೆ ಕಲ್ಲು ಬೆಂಚಿನಲ್ಲಿ ಕುಳಿತಿರುವಾಗ ಪೊಮ್ಮೆಚ್ಚನ ಮಾತಿನ ಲಹರಿ ಅನ್ಯೋನ್ಯ ದಾಂಪತ್ಯದ ಕಡೆಗೆ ಹರಿಯಿತು.

ಪೊಮ್ಮೆಚ್ಚ ಆಗಾಗ ವಾಕಿಂಗ್ ಹೋಗುವ ಮನೆ ಬಳಿಯ ರಸ್ತೆಯಲ್ಲಿ ನಡು ವಯಸ್ಸಿನ ದಂಪತಿಗಳ ಜೋಡಿಯೊಂದು ವಾಕಿಂಗ್ ಹೋಗುತ್ತಿರುತ್ತದಂತೆ. ಅವರಲ್ಲಿ ಹೆಂಡತಿಗೆ

ಮಾತಿನ ಪ್ರೀತಿ. ಅವಳ ಗಂಡನಿಗೆ ಅದನ್ನು ಕೇಳುವುದರಲ್ಲಿ ಖುಷಿ. ತುಸು ಗಿಡ್ಡದ ಹೆಂಗಸು ಎತ್ತರದ ಗಂಡನಿಗೆ ಸರಿಯಾಗಿ ಕೇಳಲೋ ಏನೋ ತುಸು ಗಟ್ಟಿಯಾಗಿಯೇ ಮಾತನಾಡುತ್ತಿದ್ದಳು. ಅವರ ಹಿಂದೆ ನಾಲ್ಕು ಮಾರು ದೂರದಲ್ಲೇ ನಡೆಯುತ್ತಿದ್ದ ಪೊಮ್ಮೆಚ್ಚನಿಗೆ ಸ್ಪಷ್ಟವಾಗಿ ಕೇಳುತ್ತಿತ್ತು.

ರೀ..

ಏನು?

ಅದೇ ನಿಮ್ಮ ಚಿಕ್ಕಮ್ಮನ ಮಗ ರಾಮು ಇದಾರಲ್ಲ

ಹೌದು

ಅವರ ಮಗ ಮನೆಗೆ ಬಂದಿದ್ದಾ ರೀ - ಮಹೇಶ

ಓ ಏನಂತೆ?

ಅವ ಬಂದಿದ್ದಾಗ ನಾನೇನ್ ಮಾಡ್ತಿದ್ದೆ ಗೊತ್ತೇನ್ರಿ

ಏನ್ ಮಾಡ್ತಿದ್ದೆ?

ದೋಸೆ ಮಾಡ್ತಾ ಇದ್ದೆ ರೀ.... ಹಾಗೇ ಎದ್ದ್ ಹೋಗಿ ಬಾಗಿಲು ತೆಗೆದೆ ರೀ

ಏನಂದೆ?

ದೋಸೆ ತಿಂತೀಯಾ ಅಂತ ಕೇಳ್ದೆ

ಹೂಂ ಅಂದ. ಬಿಸಿಬಿಸಿಯಾಗಿ ಒಂದು ದೋಸೆ ಚಟ್ನಿ ಕೊಟ್ಟೆ ರೀ

ಹೂಂ

ಚೆನ್ನಾಗಿದೆ ಅಂದಾರೀ

ಓಹೋ

ಇನ್ನೊಂದು ಬೇಕಾ ಅಂದೇರೀ

ಹೂಂ

ಬೇಕು ಅಂದಾರೀ

ಹೂಂ

ಬಿಸಿಬಿಸಿಯಾಗಿ ಮತ್ತೊಂದು ದೋಸೆ , ಚಟ್ನಿ ಕೊಟ್ಟೇರೀ

ಆಮೇಲೆ...

ಚೆನ್ನಾಗಿದೆ ಅಂದಾರೀ

ಹೌದಾ

ಮತ್ತೊಂದು ಬೇಕಾ ಅಂತ ಕೇಳ್ದೇರೀ

ಹೂಂ

ಇಲ್ಲಿ ಚೆನ್ನಾಗಿದೆ ಅಂದ ರೀ

ಮತ್ತೆ

ಮತ್ತೊಂದು ದೋಸೆ ಗರಿಗರಿಯಾಗಿ ಎರೆದು ಕೊಟ್ಟೆ ರೀ

ಹೀಗೆ ಆ ಮಹೇಶ ಎಂಬ ಮಹರಾಯ ಏಳು ದೋಸೆಗಳನ್ನು ತಿಂದುದನ್ನು ಬಿಡಿಬಿಡಿಯಾಗಿ ಪ್ರತ್ಯೇಕವಾಗಿ ದೋಸೆ ಬದಿಗೆ, ಪ್ಲೇಟಿನ ತುದಿಗೆ ಚಟ್ನಿ ಹಾಕಿದುದನ್ನೆಲ್ಲಾ ವಿವರವಾಗಿ ಅವಳು ವಿವರಿಸಿದ್ದನ್ನು ಅವನು ಸಂತೋಷದಿಂದ ಕೇಳಿದ, ಎಂದು ಪೊಮ್ಮೆಚ್ಚ ವರ್ಣಿಸಿದ.

ಸಂತೋಷದಿಂದ ಎಂದು ಹೇಗೆ ಹೇಳುತ್ತಿ? ಎಂದು ನಾನು ಕೊಂಕು ತೆಗೆದೆ. ಸಂತೋಷ ಅಲ್ಲದೆ ಮತ್ತಿನ್ನೇನು? ತಾನು ಸರಿಯಾಗಿ ಲೆಕ್ಕ ಹಾಕಿದುದಾಗಿಯೂ ಅವಳು ಏಳು ಸಲ ದೋಸೆ ಎರೆದುದನ್ನು ವಿವರಿಸಿದಾಗಲೂ ಅವನು ಅಷ್ಟು ಆಸ್ತೆಯಿಂದ, ಹೌದೆ, ಮತ್ತೆ, ಹಾಗೇನು, ಅಲ್ವೆ ಮತ್ತೆ, ನಿಜವಾಗ್ಲೂ, ದೋಸೆ ಅಷ್ಟು ಚೆನ್ನಾಗಿತ್ತೇನೆ – ಇತ್ಯಾದಿ ಹೇಳುತ್ತಾ ಅವಳ ಮಾತುಗಳನ್ನು ಸವಿಯುತ್ತಿದ್ದ ಅಂದರೆ ನಿಂದೇನೋ ಕೊಂಕು. ಎಲ್ರೂ ನಿನ್ನ ಹಾಗೇನ? ತಾಳ್ಮೆ ಇರಬೇಕಪ್ಪ . ಸಂಸಾರ ಮತ್ತಿನ್ನೇನು ಎಂದು ಒಂದಿಷ್ಟು ಫ್ರೀ ಅಡ್ವೈಸ್ ಕೊಟ್ಟ.

ಇಷ್ಟು ಹೊತ್ತು ಸುಮ್ಮನಿದ್ದ ಅದ್ರಾಮ ಇದೀಗ ಬಾಯಿ ಬಿಟ್ಟ. ಅವಳು ಮಾತನಾಡುತ್ತಿದ್ದರೆ ಅವನಿಗೆ ಕೇಳುವ ಮನಸ್ಸು ಎಂಬುದೇ ಅವರ ಸಂತೋಷಕ್ಕೆ ಸಾಕ್ಷಿ. ಮಾಸ್ತಿಯವರೇ ದಾಂಪತ್ಯದ ಅನ್ಯೋನ್ಯತೆಗೆ ಅದು ಸಾಕ್ಷಿ ಎಂದಿದ್ದಾರೆ ಎಂದು ಪುರಾವೆ ನೀಡಿದ. ಜ್ಞಾನಪೀಠ ಪ್ರಶಸ್ತಿ ವಿಜೇತ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರೇ ಹೇಳಿದ್ದಾರೆ ಎಂದ ಮೇಲೆ ಏನೋ ಸತ್ಯ ಇರಬೇಕು ಅಂದುಕೊಂಡೆ. ಆದರೂ ಪಟ್ಟು ಬಿಡದೆ ಎಲ್ಲೋ? ಏನು ಹೇಳಿದ್ದಾರೆ? ಎಂದು ಕೇಳಿದೆ. ನೀನೊಬ್ಬ ಹೋಗೋ. ಮಾಸ್ತಿಯವರ ದಾಂಪತ್ಯದ ಹೊಸಪರಿ ಎಂಬ ಕತೆ ಇದೆ. ಓದು ಎಂದ .ಏನೋ ನನಗೆ ತಿಳಿಯದ್ದನ್ನು ಹೇಳಿದ ಅಂತ ಕಸಿವಿಸಿಯಾದರೂ ಓ.ಕೆ. ಓ.ಕೆ. ನೋಡ್ತೇನೆ ಎಂದು ಸಮಜಾಯಿಸಿದೆ.

ಮನೆಗೆ ಬಂದವನೇ ನಮ್ಮ ಬಳಗದ ಮಾಸ್ತಿ ಸ್ಪೆಷಲಿಸ್ಟ್ ವೆಂಕೋಬರಾಯರಿಗೆ ಫೋನಾಯಿಸಿ ಕೇಳಿದಾಗ ಅವರು ದಾಂಪತ್ಯದಲ್ಲಿ ಮಾತಿನ ಬಗ್ಗೆ ಮಾಸ್ತಿ ಹೇಳಿದ ಈ ಮಾತುಗಳನ್ನು ಜ್ಞಾಪಿಸಿದರು.

ನನ್ನ ತಂಗಿ ಜಯಮ್ಮ ಓದಿರುವ ಹುಡುಗಿ. ಕೆಲವು ಕತೆಗಳನ್ನು ಕೂಡಾ ಬರೆದಿದ್ದಾಳೆ. ರಾಮಸ್ವಾಮಿ ಎರಡು ಮೂರು ಪರೀಕ್ಷೆ ಕೊಟ್ಟು ತೇರ್ಗಡೆ ಹೊಂದಿ ಎಂಜಿನಿಯರ್ ಆಗಿದ್ದಾರೆ. ಅವರಿಗೂ ಸಾಹಿತ್ಯದಲ್ಲಿ ರುಚಿ ಉಂಟು. ದೇವರ ದಯೆಯಿಂದ ಇವರ ದಾಂಪತ್ಯ ಬಹು ಚೆನ್ನಾಗಿ ರೂಪುಗೊಂಡಿದೆ. ಜಯ ಸರಸಿ. ಯಾರೂ ಒರಟು ಮಾತು ಆಡದಿದ್ದರೆ ನಗುನಗುತ್ತಾ ಇರುತ್ತಾಳೆ. ಬಾಯಿ ತುಂಬಾ ಮಾತನಾಡುತ್ತಿರುತ್ತಾಳೆ. ರಾಮಸ್ವಾಮಿ ಮಾತನಾಡುವವರಲ್ಲ. ಆದರೆ ಈ ಹುಡುಗಿ ಮಾತನಾಡುತ್ತಿದ್ದರೆ ಆತನಿಗೆ ಕೇಳುವ ಮನಸ್ಸು. ಹೀಗಾಗಿ ಇವರು ಜೊತೆಗೆ ನಡೆಯುತ್ತಿರುವುದನ್ನು ನೋಡುವವರಿಗೆ ಇದೊಂದು ಬಹು ಒಳ್ಳೆಯ ಜೋಡಿ, ಗಂಡು ಹೆಣ್ಣು ಎರಡೂ ಸಂತೋಷವಾಗಿವೆ, ಎನ್ನಿಸುತ್ತದೆ. ಹುಡುಗಿ ನನ್ನ ತಂಗಿ ಆದ್ದರಿಂದ ನನಗೆ ಹೆಮ್ಮೆ.

ಮಾಸ್ತಿಯವರ ದಾಂಪತ್ಯದ ಹೊಸಪರಿ ಕತೆ ಕೇಳಿ ಮೊಸರಿನ ಮಂಗಮ್ಮನಿಂದ ಪ್ರಾರಂಭಿಸಿ ಬಾಳಿನ ಚೌಕಾಬಾರದವರೆಗೆ, ರಂಗನ ಮದುವೆಯಿಂದ ಕೃಷ್ಣಮೂರ್ತಿಯ ಹೆಂಡತಿಯ ತನಕ, ಮೇಲೂರಿನ ಲಕ್ಷ್ಮಮ್ಮನಿಂದ ಮುನೀಶ್ವರನ ಮರ, ಚನ್ನಮ್ಮ - ಹೀಗೆ ದಾಂಪತ್ಯದ ಎಷ್ಟು ವಿಧಗಳನ್ನು ಕಾಣಿಸಿದ್ದಾರಪ್ಪ ಅಂದುಕೊಂಡೆ.

ಮಾರನೆಯ ದಿನ ಬೆಳಗ್ಗೆ ಆಫೀಸಿನ ಬಸ್ಸು ಹಿಡಿಯುವ ಮೊದಲೆ ಬೆಳಗಿನ ವಾಕಿಂಗ್ ಮುಗಿಸಲು ಹೊರಟೆ. ಹೊರಡುವಾಗ ಅವತ್ತಿನ ವಾಕಿಂಗ್‌ನಲ್ಲಿ ಮಾಸ್ತಿಯವರ ಇನ್ಯಾವುದಾದರೂ ಹೊಸ ಕತೆ ನೆನಪಾಗುವಂತಹ ಜೋಡಿ ನೋಡಲು ಸಿಕ್ಕರೆ ಆಫೀಸಿನಿಂದ ಫೋನಾಯಿಸಿ ಅದ್ರಾಮ, ಪೊಮ್ಮೆಚ್ಚ ಇಬ್ಬರಿಗೂ ಹೇಳಿ ಸರ್‌ಪ್ರೈಸ್ ಕೊಡಬೇಕೆಂದು ಯೋಚಿಸಿಕೊಂಡು ಮನೆ ಹೊರಗೆ ಕಾಲಿಟ್ಟೆ.

ಸುಮಾರು ಇಪ್ಪತ್ತು ನಿಮಿಷ ಯಾವ ಜೋಡಿಯೂ ಕಾಣಲಿಲ್ಲ. ಹಿಂತಿರುಗಿ ಇಪ್ಪತ್ತು ನಿಮಿಷ ನಡೆದರೆ ಪುನಃ ಮನೆ ಅಂದುಕೊಂಡು ಹೊರಡುವಾಗ ಅಷ್ಟು ದೂರದಲ್ಲಿ ಗಂಡ ಹೆಂಡತಿ ವಾಕಿಂಗ್ ಹೋಗುವುದು ಕಂಡಿತು. ಆದರೆ ನನ್ನ ದುರಾದೃಷ್ಟಕ್ಕೆ ಹತ್ತಿರ ಹೋದಾಗ ಹೆಂಡತಿ ಮಾತನಾಡುತ್ತಿರಲಿಲ್ಲ. ಗಂಡನೇ ನಿರ್ಣಯಿಸಿದಂತೆ ಹೇಳುತ್ತಿದ್ದ. ಮಾತುಗಳಿಗೆ ಒಪ್ಪಿಗೆ ಸೂಚಿಸುತ್ತಿದ್ದ ಹೆಂಡತಿಯನ್ನು ಕಂಡರೆ ಸ್ತ್ರೀವಾದಿಗಳಿಗೆ ಏನನಿಸುತ್ತಿತ್ತೋ ತಿಳಿಯದು. ನನಗಂತೂ ಅಯ್ಯೋ ಪಾಪ ಅನ್ನಿಸಿತು. ತಲೆ ಆಡಿಸುತ್ತಿದ್ದ ಹೆಂಡತಿಗೆ ಗಂಡ ಹೇಳುತ್ತಿದ್ದ.

ನೀನು ಎಂಟನೇ ಮೇನ್‌ನ ಸ್ಟೇಟ್ ಬ್ಯಾಂಕ್‌ಗೆ ಹೋಗು. ಎಸ್.ಬಿ.ಎಂ. ನಲ್ಲಿ ನಿನ್ನೆ ಕಡಿಮೆ ಕ್ಯೂ ಇತ್ತು ಅಂತ ಪಕ್ಕದ ಮನೆ ಪ್ರದೀಪ್ ಹೇಳಿದ.

ಒಂಭತ್ತೂವರೆಗೆ ಬ್ಯಾಂಕ್ ಪ್ರಾರಂಭ. ನೀನು ಎಂಟೂವರೆಗೇ ಹೋಗು. ನಾನು ಅರ್ಧದಿನ ರಜೆ ಹಾಕಿ ಕಾರ್ಪೊರೇಷನ್ ಬ್ಯಾಂಕ್‌ನ ಕ್ಯೂನಲ್ಲಿ ನಿಲ್ಲುತ್ತೇನೆ. ಪುಟ್ಟಿ ಕಾಲೇಜಿಗೆ ಮುಂಚೆ ಐ.ಸಿ.ಐ.ಸಿ.ಐ. ಬ್ಯಾಂಕಲ್ಲಿ ಟ್ರೈ ಮಾಡಿ ಹೋಗಲಿ. ನಿನ್ನ ಮಗರಾಯ ಸೂರ್ಯವಂಶಿನ ಇವತ್ತು ಸ್ವಲ್ಪ ಬೇಗ ಎಬ್ಬಿಸು. ಅವ ಮೂರನೆಯ ಮೇನ್‌ನಲ್ಲಿರುವ ಸಿಂಡಿಕೇಟ್ ಬ್ಯಾಂಕ್‌ನಲ್ಲಿ ನಿಂತುಕೊಳ್ಳಲಿ. ಈ ವಾರದ ಕೊನೆಗೆ, ಮನೆ ಕಟ್ಟುವಾಗ ಹತ್ತರ ಬಡ್ಡಿಯಲ್ಲಿ ಕೈ ಸಾಲ ಪಡೆದಿದ್ದೆವಲ್ಲ, ಅವನಿಗೆ ಇಪ್ಪತ್ತು ಸಾವಿರ ಕೊಡಬೇಕು. ಒಂದು ದಿನ ತಡವಾದರೆ ಮತ್ತೆ ಎರಡು ಸಾವಿರ ಕೊಯ್ದು ಬಿಡ್ತಾನೆ. ಸೋಮವಾರ ಪುಟ್ಟಿ ಕಾಲೇಜು, ಪರೀಕ್ಷೆ ಫೀಸು ಎಂದು ಹದಿನೇಳು ಸಾವಿರ ಬೇಕು. ಹಾಲಿನವಳಿಗೆ ಎರಡು ಸಾವಿರದ ಇನ್ನೂರು. ಮನೆ ಕೆಲಸದವಳಿಗೆ ಪುಣ್ಯಕ್ಕೆ ಕೊಟ್ಟು ಆಗಿದೆ. ಸಂಬಳ ಬಂದ ದಿನ ಪ್ರತಿತಿಂಗಳೂ ಮಾಡುವಂತೆ ಐನೂರು ಸಾವಿರದ ನೋಟುಗಳನ್ನೇ ತಂದಿದ್ದೇನೆ. ಸರಕಾರ ಇವನ್ನೆಲ್ಲಾ ರದ್ದು ಮಾಡುತ್ತೆ ಅಂತ ಯಾರಿಗೆ ಗೊತ್ತು? ನಿನ್ನೇನೇ ಹಾಲಿನವಳಿಗೆ ಕೊಡಬಹುದಾಗಿತ್ತು. ಒಂದು ದಿನ ಮೊದ್ಲು ಕೊಟ್ರೆ ಅದೇ ಅಭ್ಯಾಸ ಆಗುತ್ತೆ ಅಂತ ನಾಳೆ ತೆಗೆದಿಡ್ತೀನಿ ಅಂತ ನೀನೇ ಹೇಳ್ದೆ. ಇರ್ಲಿ ಬಿಡು. ನೀನ್ ನಾನ್ ಹೇಳಿದಷ್ಟು ಮಾಡು.

ಬಹುಶಃ ಮಾಸ್ತಿ ಇದ್ದಿದ್ರೆ, ದಾಂಪತ್ಯದ ಇನ್ನೊಂದು ಹೊಸಪರಿ ಅಂತ ಕತೆ ಬರೀತಿದ್ದರೋ ಏನೋ ಅಂದುಕೊಂಡು ನಾನು ಆಫೀಸಿಗೆ ಹೊರಟೆ.

# ಕಪಾಟಿಗೆ ಬಂತು ಕ್ಲೀನಿಂಗ್ ಭಾಗ್ಯ

**- ಆರತಿ ಘಟಿಕಾರ್**

**ಕೆ**ಲವು ಕೆಲಸದಲ್ಲಿ ಮಾತ್ರ ಈ ಸೋಮಾರಿತನ ಎಂಬ ಭೂತನನ್ನನ್ನೇ ಹುಡುಕಿಕೊಂಡು ಬಂದು ನನ್ನಲ್ಲೇ ಝೂಂಡ ಊರಿ ಬಿಡುತ್ತದೆ. ಸೋಮವಾರವೊಂದೇ ಅಲ್ಲದೆ ಉಳಿದ ದಿನಗಳಲ್ಲೂ ನಾನು ಇದರ ವಶೀಕರಣಕ್ಕೆ ಒಳಗಾಗಿ ಬಿಡುವುದು ಮಾಮೂಲು!. ಇದು ನನ್ನ ಯಾವ ತಂತ್ರ ಮಂತ್ರಗಳಿಗೆಲ್ಲ ಜಗ್ಗದೆ ಅದು ಆವರಸಿದ ಹೊತ್ತು ನಾನು ಯಾವುದೋ ಗುಂಗಿನಲ್ಲಿ ಮೈ ಮರೆತು ನನ್ನ ಕೈಗಳು ಯಾವುದಕ್ಕೂ ಅಲ್ಲಾಡದೆ ಇರುವ ಅನುಭವವಾಗುತ್ತದೆ! ಆದರೆ ಈ ಸೋಮಾರಿತನ ಎಲ್ಲಾ ಸಮಯಕ್ಕೂ ಬಾರದೆ ತನಗಿಷ್ಟ ಬಂದಾಗ ಅರ್ಥಾತ್ ನನಗಿಷ್ಟವಿಲ್ಲದ ಕೆಲಸ ಅಂದಾಗ ಮಾತ್ರ ಬರುವ ಜಾಣ ಸೋಮಾರಿತನ (ಜಾಣ ಕಿವುಡನ ತಮ್ಮ ನೋ ತಂಗಿಯೋ ಇರಬಹುದು).

ಉದಾಹರಣೆಗೆ ಬಟ್ಟೆಗಳನ್ನು ಎಷ್ಟು ಸಲ ಬೇಕಾದರೂ (ವಾಶಿಂಗ್ ಮಶೀನಿನಲ್ಲಿ) ಒಗೆಯಬಲ್ಲೆ. ಆದರೆ ಒಣಗಿದ ಬಟ್ಟೆಗಳನ್ನು ಮಡಚುವ ಕೆಲಸಕ್ಕೆ ಸದಾ ಕಾಲವೂ ಸೋಮಾರಿತನವೇ!. ಸ್ವೀಟು ಕುರುಕಲು ತಿಂಡಿಗಳನ್ನು ಎಷ್ಟು ಬೇಕಾದರೂ ತಿನ್ನ ಬಲ್ಲೆ, ಆದರೆ ಅದನ್ನು ಕರಗಿಸಲು ವ್ಯಾಯಾಮ ಮಾಡುವುದೆಂದರೆ ಮತ್ತೆ ಕಾಡುವ ಅದೇ ಹಾಳು ಸೋಮಾರಿತನ! ಹೀಗೆ ಪಟ್ಟಿ ಬೆಳೆಯುತ್ತಾ ಹೋಗಬಹುದು, ಇರಲಿ.

ನಾನು ಮೊದಲೇ ಹೇಳಿದಂತೆ ಬಟ್ಟೆಗಳನ್ನು ಮಡಚುವುದು, ಅವುಗಳನ್ನು ನನ್ನ ಕಪಾಟಿನಲ್ಲಿ ಒಪ್ಪ ಓರಣವಾಗಿ ಜೋಡಿಸಿ ಅದನ್ನು ಹಾಗೆ ಚೆಂದದಿ ಮೈಂಟೈನ್ ಮಾಡುವುದೆಂದರೆ ನನಗೆ ಮೊದಲಿನಿಂದಲೂ ಎಲ್ಲಿಲ್ಲದ ಬೇಸರ! ಹಾಗಾಗಿ ಅವುಗಳು ಸದಾ ನನ್ನ ಮೂಡಿಗನುಸಾರವಾಗಿ ಕೈಕಾಲು ಮಡಚಿಕೊಂಡು ಕಪಾಟು ಸೇರುತ್ತಿದ್ದವು. ಇಲ್ಲದಿದ್ದರೆ ಅವು ಗುಂಪಾಗಿ ಮೂಟೆ ಹಾಗಾಗಿ ನನ್ನ ಕಪಾಟುಕ್ಲೀನಿಂಗ್ ಭಾಗ್ಯಕ್ಕಾಗಿ ಉಸಿರುಗಟ್ಟಿ ಒಡಲ ತುಂಬೆಲ್ಲಾ ಬಟ್ಟೆ ತುರುಕಿಕೊಂಡು ಎದುರು ನೋಡುತ್ತಿತ್ತು!

ಅಂದು ಭಾನುವಾರ ಮುಂಜಾನೇ ಅಚಾನಕ್ಕಾಗಿ ಮಿಶನ್ ವಾರ್ಡ್ ರೋಬ್ ಕ್ಲೀನಿಂಗಿಗೆ ಕೈ ಹಾಕಿದ್ದೆ. ಅದು ಕೂಡ ಹಾಕಲೇ ಬೇಕಾದ ಪರಿಸ್ಥಿತಿ ಎದುರಾಗಿತ್ತು. ಯಾವುದೋ ಚೂಡಿದಾರಿಗೆ ಮ್ಯಾಚಿಂಗ್ ದುಪಟ್ಟಾ ಹುಡುಕುವ ಸಲುವಾಗಿ ಕಪಾಟಿನ ಬಟ್ಟೆಗಳನ್ನೆಲ್ಲ ತಡಕಾಡಿ ಸಿಗದಾಗ ಆವೇಶದಲ್ಲಿ ಎಲ್ಲ ಬಟ್ಟೆಗಳನ್ನು ಕೆಳಗೆ ಹಾಕಿ ದೊಪ್ಪೆ ಎಂದು ಕುಳಿತಿದ್ದೆ!

ಬೃಹತ್ ಬೆಂಗಳೂರಿನ ಕಸದಂತೆ ನನ್ನ ಬಟ್ಟೆ ರಾಶಿ ದಿನೆ ದಿನೆ ಗುಡ್ಡೆಯೇರಿದಾಗ ತಲೆ ಕೆಟ್ಟು ಈ ಕ್ಲೀನಿಂಗ್ ಕೆಲಸವನ್ನು ಎತ್ತಿಕೊಳ್ಳುವುದು ನನಗೆ ಅಭ್ಯಾಸ! ಇನ್ನು ನನ್ನ ಈ ಕಪಾಟು ಸ್ವಚ್ಛತಾ ಅಭಿಯಾನ ಶುರುವಾದರೆ ಸಾಕು ಇದು ಸತತವಾಗಿ ಸಂಜೆಯವರೆಗೂ ಕೆಲವು ಬಾರಿ ಓವರ್ ಟೈಮ್ನಲ್ಲಿ (ದಿನಗಳ ಲೆಕ್ಕದಲ್ಲಿ) ಕೂಡಾ ನಡೆಯುತ್ತಿದ್ದದ್ದುಂಟು! (ಕ್ಲೀನಿಂಗ್ ಕಾರ್ಯವನ್ನು ನಾನು ಇನ್ಸ್ಟಾಲ್ಮೆಂಟ್ ರೀತಿಯಲ್ಲಿ ಕೈಗೆತ್ತಿಕೊಳ್ಳುವುದರಿಂದ ಇದು ಟೀವಿ ಸೇರಿಯಲ್ಗಳಂತೆ ಹಿಗ್ಗುತ್ತಿತ್ತು!)

ಸರಿ ಆಗಷ್ಟೇ ರೂಮಿಗೆ ಎಂಟ್ರಿ ಕೊಟ್ಟ ಮಗರಾಯ ನಾನು ರಾಶಿ ಬಟ್ಟೆಗಳ ಮಧ್ಯ ಮುಳುಗಿರುವುದನ್ನು ಕಂಡು ಪಕ ಪಕ ನಗುತ್ತ ''ಅಮ್ಮ ಎಷ್ಟು ಒಳ್ಳೆ ಪೋಸ್! ಹಾಗೆ ಇರು ಒಂದು ಫೋಟೋ ತೆಗೆದು ನಿನ್ನ ಫೇಸ್ಬುಕ್ಕಿಗೆ ಅಪ್ಲೋಡ್ ಮಾಡಿ ಕ್ಲೀನಿಂಗ್ ವಾರ್ಡ್ರೋಬ್ ಅಂತ ಸ್ಟೇಟಸ್ ಹಾಕ್ತೀನಿ ಎಂದು ನನ್ನ ಕೈ ಕಾಲು ನಡುಗಿಸಿದ!

ಏನೇ ಆಗಲಿ ಇಂದು ಅಮ್ಮ ಇಷ್ಟೊಂದು ರಾಶಿ ಬಟ್ಟೆ ಹರವಿ ಕುಳಿತಿದ್ದಾಳೆ ಎಂದರೆ ಅಡುಗೆಗೆ ಚಕ್ಕರ್ ಎಂದೇ ಲೆಕ್ಕ..! ಹೋಟಲಿನ ಊಟದ ಜೊತೆ, ತನ್ನ ಅಚ್ಚುಮೆಚ್ಚಿನ ಗೋಬಿ ಮಂಚೂರಿ ಸಿಗುವುದು ಗ್ಯಾರೆಂಟಿ ಎಂದು ಎಣಿಕೆ ಹಾಕುತ್ತ ಖುಷಿಯಿಂದ ಜಿಂಕೆ ಮರಿಯಂತೆ ಹೊರಗೋಡಿದ.

ನನಗೋ ಇವುಗಳನ್ನು ಮಡಚಲು ಶುರು ಮಾಡಿ ಗಂಟೆಗಳೆ ಕಳೆದು ನನ್ನ ಕೈಗಳು ಸೋತು ಹೋಗಿದ್ದವು! ಕೃಷ್ಣಾ! ನೀನಾದರೂ ಸ್ವಲ್ಪ ಸಹಾಯ ಮಾಡಬಾರದೆ? ಎಂದು ಎರಡೂ ಕೈ ಮೇಲೆತ್ತಿದೆ!

''ದೇವಿ! ನಾನು ವಸ್ತ್ರಾಪಹರಣವಾದ ಸಂದರ್ಭದಲ್ಲಿ ಸಹಾಯಕ್ಕೆ ಆಗಮಿಸಿದ್ದು. ಆದರೆ ನೀನು ಅತಿಯಾದ ವಸ್ತ್ರಗಳನ್ನು ಪೇರೈಸಿಕೊಂಡು ಕಷ್ಟ ಅನುಭವಿಸುತ್ತಿರುವೆ ಇನ್ನು ಮುಂದಾದರೂ ಕಡಿಮೆ ಮಾಡು'' ಎನ್ನುವ ಅಶರೀರವಾಣಿ ಕೇಳಿಸಿದಂತಾಯಿತು!

''ಆಗಲಿ ಮಹಾ ಪ್ರಭು ಮುಂದಿನ ವರ್ಷಕ್ಕೆ ಇದೆ ನನ್ನ ರೆಸೆಲ್ಯೂಶನ್'' ಎಂದು ಭಯ ಭಕ್ತಿಯಿಂದ ಕುಳಿತಲ್ಲೇ ಕೈ ಮುಗಿದೆ! ಯಾರೋ ಜೋರಾಗಿ ನಗುವ ಸದ್ದು! ಭಗವಂತ ನನ್ನ ಮಾತಿಗೆ ಅಲ್ಲ ಜೋಕಿಗೆ ನಕ್ಕ ಪರಿಣಾಮ ನನ್ನ ದೇವರು ಮನೆಯ ಬಾಗಿಲು ಪಟಪಟನೆ ಬಡಿದುಕೊಂಡು ನಾ ಹಾಕಿದ ಪುಟ್ಟ ಘಂಟೆಗಳೂ ಕೂಡ ಜೋರಾಗಿ ಸದ್ದು ಮಾಡಿದವು!

ನಾನು ಅಸಹಾಯಕಳಾಗಿ ನಿಟ್ಟುಸಿರು ಬಿಟ್ಟೆ! ರಾಶಿ ಬಟ್ಟೆಗಳ ಮಧ್ಯೆ ಕುಳಿತು ನಾವೆಲ್ಲರೂ ಅಂತರಂಗ ಶುದ್ಧಿ ಮಾಡ್ತೀವೋ ಇಲ್ವೋ ಆದರೆ ಬಹಿರಂಗ ಬೀರುವಿನ ಶುದ್ಧಿ ಮಾಡದೆ ಮುಕ್ತಿಯಿಲ್ಲ ಎಂಬ ಅಲೌಕಿಕ ತತ್ವಜ್ಞಾನವನ್ನು ಆ ಬಟ್ಟೆ ರಾಶಿಯಲ್ಲೇ ಕಂಡುಕೊಂಡು (ಮಡಚುವ) ಕರ್ಮ ಯೋಗಿಯಾದೆ!

ಅಷ್ಟರಲ್ಲಿ ನಮ್ಮ ಎಜಮಾನರು ನನ್ನಂತಾ ವಟ ವಟ ಸಾವಿತ್ರಿ ಅಕ್ಕ ಪಕ್ಕ ಕಾಣಿಸದೆ ಮನೆಯೆಲ್ಲ ನಿಶಬ್ಧವಾಗಿರುವುದು ಅವರಿಗೆ ನಿಧಾನವಾಗಿ ಗೋಚರವಾಗಿರಬೇಕು. ಸೀದಾ ನನ್ನ ರೂಮಿಗೆ ಬಂದು ನಾನು ಮಾಮೂಲಿನಂತೆ ನನ್ನ ಬಟ್ಟೆ ಸಮುದ್ರದಲ್ಲಿ ಮುಳುಗಿ ಹೋಗಿರುವ ಕರುಣಾಜನಕ ದೃಶ್ಯಕ್ಕೆ ಕನಿಕರದಿಂದ ''ಅಯ್ಯೋ ವಾಣಿ ಇನ್ನು ಮುಗಿದಿಲ್ವಾ ನಿನ್ನ ಕೆಲಸ. ಇಷ್ಟು ರಾಶಿ ಬಟ್ಟೆ ಇದ್ರೂ ಮತ್ತೆ ಹೊಸದು ಖರೀದಿ ಮಾಡೋದು ಬಿಡಲ್ಲ ನೀನು, ಇಷ್ಟಿದ್ರು ಹೊರಗೆಲ್ಲಾದರು ಹೊರಟು ನಿಂತಾಗ ನಿನ್ನ ಮಾಮೂಲಿ ಕಂಪ್ಲೈಂಟು ತೊಡಲು (ಸರಿಯಾದ) ಬಟ್ಟೆ ಇಲ್ಲ. ಇಂಥ ದೊಡ್ಡ ಕಪಾಟಿದ್ದರೂ ಇಡಲು ಜಾಗ ಇಲ್ಲ! ಅಂತ ಗೊಣಗೋದು ಮಾತ್ರ ತಪ್ಪಲ್ಲ. ಆ ಬ್ರಹ್ಮಾನೆ ಬಂದರು ನಿನ್ನ ಕ್ಲೀನಿಂಗ್ ಇವತ್ತು ಮುಗಿಯಲ್ಲ ಕಣೆ ''ಎಂದು ಶುರುವಿನಲ್ಲಿದ್ದ ಅವರ ಕನಿಕರ ರೇಗಾಟಕ್ಕೆ ಗೇರು ಬದಲಿಸಿಕೊಂಡಿತು. ಅಷ್ಟಕ್ಕೆ ಸುಮ್ಮನಿರದೆ ನನ್ನ ರಾಶಿ ವಸ್ತ್ರಗಳನ್ನು ಕಣ್ಣಲ್ಲೆ ಸ್ಕ್ಯಾನ್ ಮಾಡುತ್ತಾ ಅಂದ ಹಾಗೆ ಈ (ಬಟ್ಟೆ) ಸಮುದ್ರ ಮಂಥನದಲ್ಲಿ ನನ್ನ ಹೊಸ ನೀಲಿ ಜುಬ್ಬಾ

ಏನಾದರೂ ಸಿಕ್ಕಿತಾ?'' ಎಂದು ಕುತೂಹಲದಿಂದ ಕೇಳಿದಾಗ. ಈ ಮಹಾ ಕಾವ್ಯವನ್ನು ಹಿಡಿದು ಕೂತ ನನಗೆ ಸಿಟ್ಟಿನಿಂದ ಮೈ ಪರಚುವಂತಾಯಿತು.

''ಅಯ್ಯೋ ಆ ದೇವರುಗಳಿಗೆ (ಹೆಂಡತಿಯರಿಗೆ) ನಮ್ಮ ಹಾಗೆ ಫಾರ್ಮಲ್ ವೇರ್, ಕಾಶುವಲ್ ವೇರ್, ಪಾರ್ಟಿ ವೇರ್ ಅನ್ನೋ ನಿಯಮ ಇದ್ದಿದ್ದರೆ ಆಗ ಗೊತ್ತಾಗ್ತಾ ಇತ್ತು. ಇಲ್ಲಿ ನಿಮ್ಮ ನೀಲಿ ಜುಬ್ಬಾನೂ ಇಲ್ಲ ನನ್ನ ಪೀಲಿ ದುಪಟ್ಟಾನೂ ಸಿಗಲಿಲ್ಲ, ಹಾಳಾದ್ದು ಎಲ್ಲಿ ಇಟ್ಟಿದ್ದೀನೋ ಏನೋ'' ಎಂದು ದೇವಾನುದೇವತೆಗಳ ಮೇಲೆಲ್ಲಾ ರೇಗಿದಾಗ ಇವರು ಮುಖದಲ್ಲಿ XL (ಬಟ್ಟೆ) ಸೈಜಿನ ನಗು.

ನಂತರ ಏನೋ ಹೊಳೆದವರಂತೆ ಒಳನಡೆದು ಗೋಣಿಚೀಲ ಗಾತ್ರದ ದೊಡ್ಡ ಕವರ್ ತಂದು ''ವಾಣಿ! ನೀನು ಹಾಕಿಕೊಳ್ಳದೆ ಇರುವ ಡ್ರೆಸ್‌ಗಳನ್ನೆಲ್ಲಾ ಇದರಲ್ಲಿ ಹಾಕು... ಈ ರೀತಿ ನೀನು ಕ್ಲೀನಿಂಗ್ ಅಂತ ದಿನವಿಡೀ (ಅಡುಗೆ ಕೆಲಸ ತಪ್ಪಿಸಿಕೊಂಡು) ಕೂಡೋದು ನಾನ್ ನೋಡಲಾರೆ ಮಾರಾಯ್ತಿ. ಗೋವಿಗೆ ಕರೆದಂತೆ ಗೋಗರೆದರು. ಮೇಲೆ ಹೋದ ವಸ್ತುಗಳು ಕೆಳಗೆ ಬರಲೇಬೇಕೆಂಬ ಗುರುತ್ವಾಕರ್ಷಣೆ ನಿಯಮದಂತೆ ನಾ ಹೊರ ಹಾಕಿದ ಎಲ್ಲಾ ಬಟ್ಟೆಗಳು ಮತ್ತೆ ಗುಂಪಾಗಿ ಒಳ ಸೇರುವುವು ಎಂದು ಗೊತ್ತಿದ್ದರೂ ಇವರು ಈ ಕಿವಿ ಮಾತನ್ನು ನನ್ನ ಕಿವಿಗೆ ಹಾಕುವುದು ಮಾತ್ರ ಬಿಡುವುದಿಲ್ಲ.

ನನ್ನ ಈ ಕಪಾಟು ಕ್ಲೀನಿಂಗ ನೆಪದಲ್ಲಿ ಒಮ್ಮೊಮ್ಮೆ ಬಟ್ಟೆಗಳ ಕ್ಲಿಯರೆನ್ಸ್ ಕೂಡ ನಡೆಯುತ್ತಿತ್ತು. ಆಗಾಗ ಚಾರಿಟಿಗೆ ಎಂದು ಹಾಕದೆ ಉಳಿದ ಬಟ್ಟೆಗಳನ್ನು ಪರೀಕ್ಷಿಸಿ ಕೊಟ್ಟರೂ ಹೇಗೋ ಇವು ಮತ್ತೆ ಅಕ್ಷಯವಾಗಿ ಬಿಡುತ್ತಿದ್ದವು. ಮದುವೆ ವಾರ್ಷಿಕೋತ್ಸವ, ಹಬ್ಬ ಹರಿದಿನಗಳು ನೆಪವಾಗಿ ಹೊಸ ವಸ್ತ್ರಗಳು ನನ್ನ ವಾರ್ಡ್ರೋಬಿಗೆ ತಂಡೋಪತಂಡವಾಗಿ ಗೃಹಪ್ರವೇಶ ಮಾಡುತ್ತಿದ್ದವು, (ಒಮ್ಮೊಮ್ಮೆ ನಮ್ಮ ಎಜಮಾನರ ಹುಟ್ಟು ಹಬ್ಬಕ್ಕೆ ನಾನೂ ಬಟ್ಟೆ ಖರೀದಿಸುತ್ತಿದ್ದೆ ಅಯ್ಯೋ! ತಪ್ಪು ತಿಳಿಬೇಡಿ... ನಾನಷ್ಟು ಸ್ವಾರ್ಥಿಯಲ್ಲ, ಇವರು ತಮಗೆ ಕೊಂಡ ನಂತರವೇ). ಇನ್ನು ಬಟ್ಟೆ ಸೇಲ್ ಎಂದಗಲ್ಲೆಲ್ಲಾ ತಪ್ಪದೆ ಹಾಜರಾಗುತ್ತಿದ್ದ ಪರಿಣಾಮವೂ ಇದಿರಬಹುದು.

ಹುಟ್ಟಿದ ಹಬ್ಬ. ಇನ್ನು ಒಂದು ಸಮೀಕ್ಷೆಯ ಪ್ರಕಾರ ಹೆಣ್ಣು ಮಕ್ಕಳು ತಾವು ಕೊಂಡ ಅರ್ಧಕ್ಕರ್ಧ ಬಟ್ಟೆಗಳನ್ನು ಧರಿಸುವುದೇ ಇಲ್ಲವಂತೆ. ನನ್ನಲ್ಲೂ ಹಾಗೆಯೇ ಕೆಲವು ಉಡುಪುಗಳು ಬೆಂಚಿನ ಮೇಲೆ ಕುಳಿತ ಡಮ್ಮಿ ಆಟಗಾರನಂತೆ ತನ್ನೊಡತಿಯನ್ನು ಅಲಂಕರಿಸಿರುವ ಭಾಗ್ಯ ತಮಗೆಂದು ಬರುವುದೋ ಎಂದು ಕಾಯುತ್ತಿದ್ದವು.

ಬೇಡದ ಬಟ್ಟೆಗಳನ್ನೆಲ್ಲಾ ಇದರಲ್ಲಿ ಹಾಕು ಎಂದು ಕೈಯಲ್ಲಿ ದೊಡ್ಡ ಕವರ್ ಹಿಡಿದು ಇನ್ನು ಅಲ್ಲೇ ನಿಂತ ಇವರನ್ನು ಕಂಡು ನನಗೆ ಎಲ್ಲಿಲ್ಲದ ಆಘಾತವಾಗಿ ''ಅಯ್ಯೋ ಇವೆಲ್ಲಾ ನನ್ನ ಅಚ್ಚುಮೆಚ್ಚಿನ ಬೆಲೆ ಬಾಳುವ (ಹಳೆ) ಉಡುಪುಗಳು. ಇವುಗಳನ್ನ ಬಿಸಾಕು ಅಂತೀರಲ್ಲ, ಒಂದು ವರ್ಷದ ಕೆಳಗೆ ಎಲ್ಲ ಎಷ್ಟು ಚೆಂದ ಫಿಟ್ ಆಗ್ತಿದ್ದವು! ಏನೋ ಈಗ ಸ್ವಲ್ಪ ತೂಕ ಏರಿ ತೂರುತ್ತಾ ಇಲ್ಲ ಅಷ್ಟೇ. ಆದರೆ ಡಯೆಟ್ ವಾಕಿಂಗ್ ಶುರು ಮಾಡಿದೀನಲ್ಲ... ಅಚ್ಚೆದಿನ್ ಆಯೇಂಗೆ! ವಿಶ್ವಾಸದ ದನಿಯಲ್ಲಿ ಹೇಳಿದೆ. ನನ್ನ ಹೇಳಿಕೆಗೆ ಸರ್ವತೋಮುಖವಾಗಿ (ತೂಕದಲ್ಲಿ) ಬೆಳೆಯುತ್ತಿರುವ ನನ್ನನ್ನು ನೋಡಿ ಇವರು ಪ್ರಾಣೇಶ್ ಅವರ ಜೋಕು ಕೇಳಿದಂತೆ ಜೋರಾಗಿ ನಕ್ಕು ನನ್ನ ಸಿಟ್ಟೇರಿಸಿದರು.

ಯಾರೇ ನಗಲಿ ಏನೇ ರೇಗಿಸಲಿ, ಬಟ್ಟೆ ರಾಶಿಯಲ್ಲಿ ಕುಳಿತು ನನ್ನ ಅಚ್ಚು ಮೆಚ್ಚಿನ ಧಿರಸುಗಳಲ್ಲಿ ತೂರುವಷ್ಟು ಸ್ಲಿಮ್ಮಾದಂತೆ ಕಲ್ಪಿಸಿಕೊಂಡು ಕನಸು ಕಟ್ಟೋದಂತೂ ನಾ ಬಿಡಲಾರೆ, ಅಂದುಕೊಂಡಾಗ ನನ್ನ ಮುಖದಲ್ಲೂ ಮಂದಹಾಸ ಮಿನುಗಿತು. ಆದರೆ ಇವರದನ್ನು ಬೇರೆ ರೀತಿಯಲ್ಲಿ ಅರ್ಥೈಸಿಕೊಂಡು ''ವಾಣಿ ಒಂದು ಕೆಲಸ ಮಾಡು, ಮುಂದಿನ ವೀಕೆಂಡು ನಮ್ಮ ಸಫಾ ಪಾರ್ಕಿನಲ್ಲಿ ಹಳೆ ವಸ್ತುಗಳ ಜಾತ್ರೆ ಇರುತ್ತಲ್ಲ ಅಲ್ಲಿ ನೀನೂ ನಡಿ'' ಎಂದರು. ಏನ್ರಿ ಅದು ಹಳೆ ವಸ್ತು, ಅಂದು ಬಿಟ್ಟು ನೀನೂ ನಡಿ ಅಂತೀರಲ್ಲ ''ನಾನು ಸಿಟ್ಟಿನಿಂದ ರೇಗಿದೆ. ಪತಿರಾಯರು ನಗುತ್ತಾ'' ಹಾಗಲ್ಲ ಕಣೆ, ಅಲ್ಲಿ ನಿನ್ನ ಎಲ್ಲ ಹಳೆ ಸೀರೆಗಳನ್ನೆಲ್ಲ ತೊಗೊಂಡು ನಡಿ, ಸೇಲ್ಗಿಟ್ಟರಾಯಿತು ಅಂದೆ ''ಎಂದು ಈ ವಿಷಯದಲ್ಲೂ ತಮ್ಮ ವ್ಯಾಪಾರೀ ಬುದ್ಧಿ ಪ್ರದರ್ಶಿಸಿದರು.''

''ರೀ ನೀವು ನನ್ನನ್ನು ಅಲ್ಲಿ ಕರ್ಕೊಂಡ್ ಹೋದರೆ ಅಲ್ಲಿದ್ದ ಹಳೆ ಸಾಮಾನುಗಳನ್ನು ಖರೀದಿ ಮಾಡ್ಕೊಂಡು ಬರ್ತೀನಿ ಅಷ್ಟೇ'' ನನ್ನ ತಿರುಗು ಬಾಣಕ್ಕೆ ಹೆದರಿ ಇವರು ಜಾಗ ಖಾಲಿ ಮಾಡಿದರು.

ಏನೇ ಅನ್ನಿ ಮನೆಯ ಇತರ ಕೆಲಸಗಳನ್ನು ಬೇಸರವಿಲ್ಲದೆ ನಿಭಾಯಿಸುವ ನನಗೆ ಈ ವಾಡ್ರೋಬಿನಲ್ಲಿ ಬಟ್ಟೆಗಳನ್ನು ಸುಂದರವಾಗಿ ಜೋಡಿಸಿಡುವುದೆಂದರೆ ಮೊದಲಿನಿಂದಲೂ ಮಹಾ ಬೋರು. ಈ ಕೆಲಸವನ್ನು ಸಾಫ್ಟ್ವೇರ್ ಕಂಪನಿಯವರು ಔಟ್ಸೋರ್ಸಿಂಗ್ ಕೊಡುವ ರೀತಿ ನಾನು ಕೊಡುವಂತಿದ್ದರೆ ಎಷ್ಟು ಚೆನ್ನಾಗಿತ್ತು ಎಂದು ಒಮ್ಮೊಮ್ಮೆ ಅನಿಸಿದುಂಟು. ಈ ಮನೆಗೆ ಬಂದ ಹೊಸತರಲ್ಲಿ ನಾನು ಹಾಗೂ ಪತಿರಾಯರು ಏಳು ಬಾಗಿಲುಗಳುಳ್ಳ ಬೃಹತ್ ಕಪಾಟನ್ನು ಸಮನಾಗಿ ಹಂಚಿಕೊಂಡು ಯಾರೇ ವಲಸಿಗರು ಬಂದರೂ ಅಡ್ಜಸ್ಟ್ ಮಾಡಿಕೊಂಡು ಬಾಳುವ ಕನ್ನಡಿಗರಂತೆ ಶಾಂತಿಯಿಂದ ಇದ್ದೆವು.

ಅವರು ಶಿಸ್ತಾಗಿ ತಮ್ಮ ಬಟ್ಟೆ ಇಟ್ಟುಕೊಳ್ಳುತ್ತಿದ್ದ ರೀತಿಗೆ ವಿಧಿಯಿಲ್ಲದೇ ನಾನು ಕೂಡ ತಕ್ಕ ಮಟ್ಟಿಗೆ ನನ್ನ ವಸ್ತ್ರಗಳನ್ನು ಒಪ್ಪ ಓರಣವಾಗಿ ಅವರ ಕಾಕ ದೃಷ್ಟಿ ಇತ್ತ ಬಿದ್ದರೂ ನನ್ನ ಬಟ್ಟೆ ಜೋಡಿಸಿಟ್ಟ ರೀತಿಗೆ ಹೌಹಾರದಂತೆ ಇಟ್ಟುಕೊಂಡಿದ್ದೆ.

ಆದರೆ ಹೊಸ ಮನೆಗೆ ಬಂದಾಗಿನಿಂದ ಅವರು ನಮ್ಮ ಕಾಮನ್ ವಾಡ್ರೋಬಿನಿಂದ ತುಂಬು ಸಂಸಾರದಿಂದ ಬೇರೆ ನಡೆವ ಮಗ ಸೊಸೆಯಂತೆ ಬೇರಾದರು. ಅರ್ಥಾತ್ ತಮಗೊಂದು ಹೊಸ ಕಪಾಟು ಖರೀದಿಸಿದರು. ಆಗಿನಿಂದ ನನ್ನೊಳಗಿನ ಸೋಮಾರಿತನ ಜಾಗೃತವಾಗಿ ತಾಂಡವಾಡಲು ಶುರು ಮಾಡಿತ್ತು.

ಒಮ್ಮೊಮ್ಮೆ ಮೂಡಿದ್ದರೆ ಸುಂದರವಾಗಿ ನನ್ನ ಕಣ್ಣೆದೃಷ್ಟಿ ತಾಗುವಂತೆ ಜೋಡಿಸಿ ಕೊಳ್ಳುತ್ತಿದ್ದ ಬಟ್ಟೆ ಧಿರಸುಗಳು ಕೆಲವೇ ದಿನಗಳಲ್ಲಿ ಮತ್ತೆ ಯಥಾ (ಕೆಟ್ಟ) ಸ್ಥಿತಿಗೆ ಮರಳುತ್ತಿದ್ದದ್ದು ಹಗಲು ರಾತ್ರಿಯಂತೆ ನಿರಂತರವಾಗಿ ನಡೆಯುವ ಪ್ರಕ್ರಿಯೆಗಳು.

ನನ್ನ ವಾರ್ಡ್‌ರೋಬಿನಲ್ಲಿ ಬಟ್ಟೆಗಳಷ್ಟೇ ಅಲ್ಲದೆ ಕೆಲವು ಗೃಹಪಯೋಗಿ ವಸ್ತುಗಳು, ಚಿಲ್ಲರೆ ಸಾಮಾನುಗಳೂ ಮನೆ ಮಾಡಿಕೊಂಡು ಒಂದನ್ನು ಎತ್ತಿದರೆ ಇನ್ನೊಂದು ಮುಗ್ಗರಿಸಿ ಬೀಳುವಂತೆ ಒತ್ತಾಗಿ ಕುಳಿತಿದ್ದವು.

ಒಮ್ಮೊಮ್ಮೆ ಏನೋ ಹುಡುಕುವಾಗ ಕಳೆದೆ ಹೋಯಿತು ಎಂದು ನಿಟ್ಟುಸಿರಿನಿಂದ ಎಳ್ಳು ನೀರು ಬಿಟ್ಟ ವಸ್ತುಗಳು ಕೂಡ ನನಗಿಲ್ಲಿ ಕ್ಲೀನಿಂಗ್ ಅಭಿಯಾನದಲ್ಲಿ ದಕ್ಕಿದ್ದವು. ಇನ್ನು ಈ ಕಪಾಟು ನಿರ್ವಹಣೆ ಕಾರ್ಯ ನನಗೆ ಬೋರ್ ಆಗದಿರಲಿ ಎಂಬ ಕಾರಣಕ್ಕೆ ಆಗಾಗ ಬಟ್ಟೆಗಳನ್ನು ನಾನಾ ವಿನ್ಯಾಸದಲ್ಲಿ ಜೋಡಿಸುತ್ತಿದ್ದರೂ ಈ ಯೋಜನೆ ಕೆಲವೇ ದಿನಕ್ಕೆ ಮುಕ್ತಾಯವಾಗಿ ಸೋಮಾರಿ ರಾಗದಲ್ಲಿ ಮಂಗಳ ಹಾಡಿ ಬಿಡುತ್ತಿತ್ತು.

ಅನ್ನದಾನ, ರಕ್ತದಾನ ಅದು ಬಿಡಿ ನನ್ನ ಬೊಜ್ಜು ದಾನಕ್ಕು ನಾನು ಸದಾ ತಯಾರಿದ್ದೇನೆ, ಆದರೆ ಈ ವಿಷಯದಲ್ಲಿ ನನ್ನ ಶ್ರಮ ದಾನವನ್ನೇ ಬೇಡುವ ಇದು ನಿಜಕ್ಕೂ ನಿಷ್ಕರುಣಿ ಎಂದೇ ನನ್ನ ಭಾವನೆ.

ಇನ್ನು ಅಚ್ಚುಕಟ್ಟಾಗಿ ಶೋರೂಮಿನಲ್ಲಿ ನೇತುಹಾಕಿದಂತೆ ಬಣ್ಣ ಬಣ್ಣದ ಬಟ್ಟೆಗಳನ್ನು ಹ್ಯಾಂಗರಿನಿಂದ ನವಿರಾಗಿ ತೆಗೆಯುವುದೆಂದರೆ ನನಗೆ ಬಹಳ ಪ್ರೀತಿ. ಆದರೆ ನನ್ನ ಕಪಾಟಿನಲ್ಲಿ ಪಾಪ! ನನ್ನ ಹ್ಯಾಂಗರುಗಳು ಮಾತ್ರ ಕಂಠಮಟ್ಟವಸ್ತ್ರಗಳ ತೊಟ್ಟು ಹ್ಯಾಂಗ ಓರ್ವನಿಂದ ಬ್ಯಾಲೆನ್ಸ್ ಮಾಡಲು ಶ್ರಮ ಪಡುತ್ತಿದ್ದವು. ತುಂಬಿ ತುಳುಕುತ್ತಿದ್ದ ನನ್ನ ಕಪಾಟಿನ ಬಾಗಿಲುಗಳನ್ನು ಮುಚ್ಚಿ ಕೀಲಿ ಜಡಿಯಲು ಒಮ್ಮೊಮ್ಮೆ ನನ್ನ ಶಕ್ತಿ ಪ್ರದರ್ಶನವನ್ನು ಒರೆಗೆ ಹಚ್ಚುತ್ತಿದ್ದದ್ದುಂಟು.

ಆ ಕತ್ತಲೆ ಕೋಣೆಯೊಳಗೆ ಸೇರಿ ಇವೆಲ್ಲಾ ನನ್ನ ಬಗ್ಗೆಯೇ ಆಡಿಕೊಂಡು ಮುಸಿ ಮುಸಿ ನಕ್ಕಂತೆ ನನಗೆ ಒಮ್ಮೊಮ್ಮೆ ಭಾಸವಾಗುತ್ತಿತ್ತು. ಹಾಗಾಗಿಯೆ ನಾನು ಕ್ಲೀನಿಂಗ್ ಎಂಬ ಯುದ್ಧ ಸಾರಿ ಅವುಗಳನ್ನೆಲ್ಲ ಹೊರಕ್ಕೆಳೆದು ಕೈ ಕಾಲು ಸುತ್ತಿಡುವ ಯೋಜನೆ ಮಾಡುತ್ತಿದ್ದದ್ದು. ಆದರೆ ಈಗೀಗ ನನ್ನ ಸ್ವಚ್ಛ ಕಪಾಟು ಅಭಿಯಾನಕ್ಕಾಗಿ ನಮ್ಮ ಯಜಮಾನರ ಅಪೇಕ್ಷೆಯಂತೆ ವೀಕೆಂಡಿನ ಬದಲು ಬೇರೆ ದಿನವನ್ನು ಆರಿಸಿಕೊಂಡು ಅಡುಗೆ ತಿಂಡಿ (ಆರ್ಡರ್) ಮಾಡಿಯೇ ಕೂರುವ ರೂಢಿ ಇಟ್ಟುಕೊಂಡಿದ್ದೇನೆ. ಇದನ್ನ ನೀವು ಮಾತ್ರ ಅವರಿಗೆ ಹೇಳಬೇಡಿ.


**ಅಪರಂಜಿ ಚಂದಾದಾರರ ಸಂಖ್ಯೆಯನ್ನು ಇಮ್ಮಡಿಗೊಳಿಸಿ!**

**ಅದು ಸುಲಭ, ನೀವೇ ಮಾಡಬಹುದು!**

ಹೇಗೆ?

ಇನ್ನೊಬ್ಬ ಚಂದಾದಾರರನ್ನು ಹುಡುಕಿಕೊಡಿ

ನಿಮ್ಮ ಸ್ನೇಹಿತರನ್ನು ಅಪರಂಜಿ ಓದುಗರನ್ನಾಗಿ ಮಾಡಿ

**ಅಷ್ಟು ಸುಲಭ!**

ವಾರ್ಷಿಕ ಚಂದಾ: ರೂ. 100/-

ಆಜೀವ ಸದಸ್ಯತ್ವ: ರೂ. 750/-

**ಇಂದೇ ಈ ಕೆಲಸ ಪ್ರಾರಂಭಿಸಿ**

# ಕಪ್ಪು-ಬಿಳಿಪು ಕಣ್ಣು ಮುಚ್ಚಾಲೆ

**- ಇ.ಆರ್. ರಾಮಚಂದ್ರನ್**

**ಅ**ಜ್ಜಿ ಅಶ್ವತ್ಥ ಕಟ್ಟೆಯಲ್ಲಿ ಕೂತು ಬತ್ತಿ ಮಾಡುತ್ತಿದ್ದರೂ ಏನೋ ಯೋಚಿಸ್ತಿದ್ದರು. 'ಮೋದಿಯವರ ಈ ಡೀಮನಿಸೈಸೇಷನ್‌ನಿಂದ ಬಹಳ ಬದಲಾವಣೆ ಆಗುತ್ತೆ ನೋಡ್ಕೊ' ಎಂದರು.

'ಡೀಮನಿಸೈಸೇಷನ್ ಅಲ್ಲ ಅಜ್ಜಿ! ಡೀಮಾನಿಟೈಸೇಷನ್! ದೊಡ್ಡ ಮೊತ್ತದ ನೋಟುಗಳ ದಿಢೀರ್ ರದ್ದು ಮಾಡುವಿಕೆ.'

'ಏನೋ ಸುಡುಗಾಡು!'

'ಇನ್ನು ಮುಂದೆ ಮದುವೇಲಿ ಹೆಂಗಸರು ಮೈಯೆಲ್ಲಾ ಚಿನ್ನ, ಬೆಳ್ಳಿ ಹೇರ್ಕೊಂಡು ಓಡಾಡೊಕ್ಕೆ ಆಗಲ್ಲ ಅಜ್ಜಿ! ಅದನ್ನೂ ಐನೂರು ಗ್ರಾಮ್ಗೆ ಇಳ್ಸೀದಾರೆ ಮೋದಿ.'

'ಸರಿ ಬಿಡು. ಈ ಚಿಲ್ರೆ 500 ಗ್ರಾಂನಲ್ಲಿ ಬರೋ ಸರಾನ ಒಂದು ಕಡ್ಡಿ ಪೆಟ್ಟಿಗೆಯಲ್ಲೋ ಇಲ್ಲ ನಶ್ಯದ ಡಬ್ಬಿಯಲ್ಲಿ ಹಾಕಿಟ್ಟರೆ ಮುಗೀತು ಕಥೆ. ಲಾಕರ್-ಪಾಕರ್ ಬೇಕಿಲ್ಲ.'

'ಅಜ್ಜಿ, ಯಾರ ಹತ್ರ ಐನೂರು ಸಾವಿರ ಹಳೇ ನೋಟು ಇದೆಯೋ ಅವರು ಬ್ಯಾಂಕಿಗೆ ಹೋಗಿ ಆಧಾರ್ ಕಾರ್ಡನ್ನು ತೋರಿಸಿ ಹಣವನ್ನು ಬದಲಾವಣೆ ಮಾಡಿಕೋಬಹುದು. ನೀನೇನಾದ್ರೂ ಕಳ್ಳ ನೋಟಿಟ್ಟಿದ್ರೆ ಆಧಾರ್ ಕಾರ್ಡು ತೊಗೊಂಡು ಹೋಗಿ ಬದಲಾಯಿಸ್ಕೊಂಡು ಬಾ.'

'ಮನೆಹಾಳ! ನನ್ನ ಹತ್ರ ಎಲ್ಲಿ ಬರುತ್ತೋ ಆ ನೋಟಿಗಳು! ಆಧಾರ್ ಅಂದ್ರೆ, ನೀಲಕೇಣಿ ಮಾಡಿದ ಕಾರ್ಡಲ್ವಾ? ನೀನು ಬೆಳಿಗ್ಗೆ ನಾಲ್ಕು ಘಂಟೆಗೆ ನನ್ನನ್ನು ಅರ್ಧ ನಿದ್ರೆಯಿಂದ ಎಬ್ಬಿಸಿ ಕರೆದುಕೊಂಡು ಮಾಡಿಸಿ ಕೊಟ್ಟೆಯಲ್ಲಾ ಅದಾ? ನನ್ನ ಮೂಗು, ಕಣ್ಣು, ಪ್ರತಿ ಬೆಟ್ಟು ಫೋಟೋ ಹಿಡಿದಿರಲ್ಲಾ ಅದೇನಾ?'

'ಅದೇ! ಪರವಾಗಿಲ್ಲ ಅಜ್ಜಿ! ಈಗ್ಲೂ ಜ್ಞಾಪಕವಿದೆ ನಿನಗೆ!'

'ಯಾಕಿಲ್ಲ? ನನಗೆ ಎಲ್ಲಾ ಕಾರ್ಡೂ ಜ್ಞಾಪಕವಿದೆ. ಮೊದಲು ಬಂದಿದ್ದು ರೇಶನ್ ಕಾರ್ಡು.... ಅದರಿಂದ, ಕಟ್ಟಿಗೆ, ಬಂಗಾರದ ಸಣ್ಣ ರತ್ನ ಚೂಡಿ ಅಕ್ಕಿ, ಧಾರಾಪುರ ತುಪ್ಪ ಎಲ್ಲಾ ತರ್ತಿದ್ವಿ. ಆಮೇಲೆ ಶೇಷನ್ ಕಾರ್ಡ್ ಅಂದ್ರೆ ಎಲೆಕ್ಷನ್ ಕಾರ್ಡು ಬಂತು... ವೋಟು ಮಾಡುವುದಕ್ಕೆ ಹೋದಾಗ ಪಿಶಾಚಿಯಂತಿದ್ದ ನನ್ನ ಫೋಟೋ ನೋಡಿ, ನಾನೇ ಎಂದು ಗುರ್ತಿಸಿ ಬೆಟ್ಟಿನ ಹಿಂದೆ ಮೈಸೂರಿನ ಇಂಕ್ ಹೊಡೆಯೊವ್ರು... ಈಗ ನಂದನ್ ಕಾರ್ಡ್ ಅಂದ್ರೆ ಆಧಾರ್ ಕಾರ್ಡು... ಎಲ್ಲಾ ಕೆಲಸಕ್ಕೂ ಅದು ಬೇಕೇ ಬೇಕೂಂತಾರೆ... ಮುಂದೆ ನಿತ್ಯ ಕೆಲಸ - ಊ, ಮ, ಹೇ ಗೂ ಒಂದೊಂದು ಕಾರ್ಡು ಬರಬಹುದು...'

'ಅಜ್ಜಿ! ಥೂ! ಎಲ್ಲಿಂದ ಎಲ್ಲಗೆ ಹೋಗ್ತ್ಯಾ?'

'ಈ ಮದ್ಯೆ, ಹೊಸಾ ನೋಟು -2000 ಸಾವಿರ ನೋಟುಗಳನ್ನು ಹೊಡೀತಿದಾರಲ್ಲೋ... ಅದರಲ್ಲೂ ನಮ್ಮ ಕರ್ನಾಟಕ ಕಾವೇರಿ ನೀರಾವರಿ ನಿಗಮದವನು

ಹೊಡ್ದ ಅಂತ ಪೇಪರ್ನಲ್ಲಿ ಹಾಕಿದೆ. ಎಲ್ಲಾರೂ ಕ್ಯೂಲಿ ನಿಂತು ದುಡ್ಡಿಗೆ ಪರದಾಡ್ತಿದ್ರೆ ಈತ ಕೋಟಿಗಟ್ಟಲೆ ಹೊಸಾ ನೋಟು ಹೊಡೆದ್ನಲ್ಲೊ... ನಾಚಿಕ್ಗೇಡು..'

'ಈ ವರ್ಷ ಮಳೇನೇ ಇಲ್ದೆ, ಕಾವೇರಿ ನೀರಿಲ್ದೆ ಎಲ್ಲಾರೂ ಒದ್ದಾಡಿದ್ವಿ... ನಿಗಮದವನು ಹಣಾನ ನೀರಿಗಾಗಿ ಹಾಗೆ ಹೊಡ್ದ!'

'ಇದಕ್ಕೆ ನೀರಿಲ್ದೆ ಕ್ಷವರ ಅಂತ ಕರೀತಾರೋ ಏನೋ! ಆವನ್ನ ಜೈಲಿಗೆ ತಳ್ಬೇಕು! ರಾಮು, ಇನ್ನೊಂದು ಮಾತು...'

'ಹೇಳು ಅಜ್ಜಿ'

'ನಮಗೆ ಇಷ್ಟು ವರ್ಷ ಇದ್ದ ಪ್ರಧಾನಿ ಅರ್ಥಶಾಸ್ತ್ರವನ್ನು ಅರೆದು ಕುಡಿದು ಜೀರ್ಣಿಸಿಕೊಂಡ ಮೇಧಾವಿ. ಹಾಗಿದ್ದವರು ಕಪ್ಪು ಹಣ ತಡೆಯುವುದರಲ್ಲಿ ಪ್ರಧಾನಿಯಾಗಿಯೂ ಏನು ಮಾಡಲಿಲ್ಲ. ಅವರ ಮಿನಿಸ್ಟರುಗಳು ಅವರ ಕಣ್ಣಿನ ಮುಂದೇನೇ ದುಡ್ಡು ಹೊಡೀತಿದ್ರೂ... ಭ್ರಷ್ಟಾಚಾರಿಗಳೂಂತ ಹೆಸರೂ ತೊಗೊಂಡ್ರೂ.... ನೋಡಿಯೂ ನೋಡ್ದೆ ಇರೋ ಹಾಗೆ ಸುಮ್ನೆ ಕೂತಿದ್ರು ಆಸಾಮಿ... ಚಾಯ್ ಮಾರೋವ್ನು ಅಂತ ಅವಹೇಳನಕ್ಕೆ ಗುರಿಯಾದ ಮೋದಿಯವರು ಇಷ್ಟೆಲ್ಲಾ ಮಾಡ್ತಿದಾರಲ್ಲೋ..!'

'ಅಜ್ಜಿ! ನೀನು ಕೇಳಿದಿಯೆಲ್ಲ ಗಾದೆ 'ಓದಿ ಓದಿ ಮರುಳಾದ ಕೂಚಂ ಭಟ್ಟಾಂತ?' ಆ ಕೇಸೇ ಇದು!'

❋

## ಯಾರು ನಾನು?

ನನ್ನನ್ನು ಅನೇಕರು ತಪ್ಪಾಗಿ ಗುರುತಿಸುತ್ತಾ ಇರುತ್ತಾರೆ.

ಒಮ್ಮೆ ನಾನು ಏರ್‌ಪೋರ್ಟಿನಲ್ಲಿ ಕುಳಿತಿದ್ದಾಗ ಯುವತಿಯೊಬ್ಬಳು ಬಂದು **'ತಾವು ಬೇಜಾನ್ ದಾರುವಾಲ ಅಲ್ಲವೆ?'** ಎಂದು ಕೇಳಿದಳು. ದಾರುವಾಲ ಒಬ್ಬ ಖ್ಯಾತ ಜ್ಯೋತಿಷಿ.

ನನಗೆ ಖುಷಿಯಾಯಿತು. ಆದರೆ **'ಸಾರಿ ಮೇಡಂ ನಾನು ಅವರಲ್ಲ. ಆದರೆ ಅವರಂತೆ ನಾನೂ ಭವಿಷ್ಯ ಹೇಳಬಲ್ಲೆ. ಹೇಳಲೆ?'** ಎಂದೆ.

ಆಕೆ **'ಸಾರಿ, ತಪ್ಪಾಗಿ ತಿಳಿದೆ'** ಎಂದು ಹೋದಳು.

ಒಂದು ತಾಸು ಕಳೆಯಿತು. ಒಬ್ಬ ತಾಯಿ ಮಗನೊಡನೆ ನನ್ನ ಬಳಿ ಬಂದಳು. 'ನನ್ನ ಮಗನಿಗೆ ನಿಮ್ಮ ಪುಸ್ತಕ ಪಠ್ಯ ಪುಸ್ತಕವಾಗಿದೆ. ಅವನಿಗೆ ನಿಮ್ಮ ಆಟೋಗ್ರಾಫ್ ಕೊಡುವಿರಾ? ಎಂದು ಮನವಿ ಮಾಡಿದಳು.

ನನಗೆ ಬಹಳ ಸಂತಸವಾಯಿತು. 'ನೀನು ನನ್ನ ಯಾವ ಪುಸ್ತಕ ಓದುತ್ತಿದ್ದೀಯ ಮಗು?' ಎಂದು ಪ್ರೀತಿಯಿಂದ ಕೇಳಿದೆ.

**'ಟಾಮ್ ಸಾಯರ್'** ಎಂದ.

ನಾನು ಒಂದು ಚೀಟಿಯ ಮೇಲೆ ಮಾರ್ಕ್ ಟ್ವೇನ್ ಎಂದು ಸಹಿ ಮಾಡಿ ಕೊಟ್ಟೆ. ತಾಯಿ ಮಗ ಖುಷಿಯಿಂದ ಹೋದರು.

ನನ್ನನ್ನು ರಸ್ಕಿನ್ ಬಾಂಡ್ ಎಂದು ಜನ ಮಿಸ್ಟೇಕ್ ಮಾಡಿಕೊಳ್ಳುವ ದಿನವೂ ಬರಲಿದೆ.

*– ರಸ್ಕಿನ್ ಬಾಂಡ್*

# ಆಸನಾ(ವಿ)ಯೋಗ

**- ನಳಿನಿ ಸೂರ್ಯಪ್ರಕಾಶ್**

**ಅಂ**ದು ಸಂಜೆ ಆಫೀಸು ಮುಗಿಸಿ ಮನೆಯ ದಾರಿ ಹಿಡಿದಿದ್ದ ನಾನು ಬಸ್ಸಿನಲ್ಲಿ ಕಂಡ ಒಂದೇ ಒಂದು ಖಾಲಿ ಸೀಟನ್ನು ನಿರಾಸೆಯಿಂದಲೇ ಆಕ್ರಮಿಸಿದೆ. ಇನ್ನು ಕೇವಲ ಎರಡೇ ಸ್ಟಾಪು.. ಬಕ್ಕ ತಲೆಯ ಆಸಾಮಿ ನಾ ಕೂತ ಸೀಟಿನ ಬಳಿ ಬರ್‍ತಿದ್ದಂಗೆ, ಮೂಲವ್ಯಾಧಿಗೆ ತುತ್ತಾದವಳ ಹಾಗೆ ಎದ್ದು ಬಿಡಬೇಕು. ಛೆ! ಕೈಗೆ ಬಂದ ತುತ್ತು ಬಾಯಿಗೆ ಬರಲ್ವಲ್ಲಾಂತ ಚಡಪಡಿಸಿದೆ. ಏಕೆಂದರೆ ನಾನು ಕೂತದ್ದು ಪುರುಷ ಹಿರಿಯ ನಾಗರಿಕರಿಗೆ ಮೀಸಲಿಟ್ಟ ಸೀಟಿನಲ್ಲಿ. ನಾನಾದರೋ, ಎರಡೂ ಅಲ್ಲದ ಮಹಿಳಾ ಕಿರಿಯ ನಾಗರಿಕಳು!

**ಬದುಕೆಂಬ ಸುದೀರ್ಘ ಪ್ರಯಾಣದಲ್ಲಿ ದಿನನಿತ್ಯದ ಸಣ್ಣ ಪುಟ್ಟ ಪಯಣಗಳೂ ಸಹ ಪಾಠ ಕಲಿಸಿಬಿಡುತ್ತವೆ**

ಎರಡು ಸ್ಟಾಪುಗಳು ಸರಿದು ಹೋದರೂ, ಆ ಆಸಾಮಿಯ ಪತ್ತೆ ಇಲ್ಲ. ಇನ್ನು ಇಳಿಯುವವರೆಗೆ ನನಗೆ ಸುಖಾಸನ ಹೆಚ್ಚು ಕಮ್ಮಿ ಖಾತ್ರಿಯಾಗ್ತಿದ್ದಂಗೆ, ಬಕ್ಕ ತಲೆಯ ಆ ಹಿರಿಯ ತಮ್ಮ ಹಕ್ಕು ಚಲಾಯಿಸುವುದರ ಬಗ್ಗೆ ಮಚ್ಚುಗೆಯೆನಿಸತೊಡಗತು! ನಾನಾಗಿದ್ರೂ ಅದೇ ತಾನೆ ಮಾಡ್ತಿದ್ದೆ... ಸ್ತ್ರೀಯರಿಗೆ ಮೀಸಲಾದ ಸೀಟಿನಲ್ಲಿ ಯಾವ (ಅನರ್ಹ) ಆಸಾಮಿ ಕೂತಿದ್ದರೂ ಮೀನ ಮೇಷ ಎಣಿಸದೆ, ವೃಶ್ಚಿಕದಂತೆ ''ಲೇಡೀಸ್ ಸೀಟ್ ಬಿಡಿ'' ಎಂದು ಮಾತಿನಲ್ಲೇ ಕುಟುಕಿದರೆ, ಕೂತ ಆಸಾಮಿ, ಪೃಷ್ಠಕ್ಕೇ ಕುಟುಕಿದಂತಾಗಿ ಥಟ್ಟನೆದ್ದುಬಿಡಬೇಕು!

ಬದುಕೆಂಬ ಸುದೀರ್ಘ ಪ್ರಯಾಣದಲ್ಲಿ ನಮ್ಮ ನ್ಯಾಯೋಚಿತವಾದ ಹಕ್ಕನ್ನು ನಿರ್ಭಿಡೆಯಿಂದ ಚಲಾಯಿಸುವ ಪಾಠವನ್ನು ದಿನನಿತ್ಯದ ಈ ಸಣ್ಣ ಪುಟ್ಟ ಪಯಣಗಳೂ ಕಲಿಸಿಬಿಡುತ್ತವೆ. ಈ ಕಾರಣಕ್ಕಾಗಿ ಬೆಂಗಳೂರಿನ ಸಿಟಿ ಬಸ್ಸುಗಳಿಗೆ ನಾನು ಚಿರಋಣಿ. ಒಮ್ಮೊಮ್ಮೆ ಜನರಿಂದ ತುಂಬಿ ಬಸಿರಾದ ಬಸ್ಸಿನಲ್ಲಿ ನಿಂತು ಹೊಯ್ದಾಡಿಕೊಂಡು ಪ್ರಯಾಣಿಸಬೇಕಾಗಿ ಬಂದಾಗ, ಎಲ್ಲಾ ಸದ್ದುಗದ್ದಲದಲ್ಲಿಯೂ, ಸುತ್ತ ಮುತ್ತ ಹತ್ತು ಹಲವು ಮುಖಗಳ ಮಧ್ಯೆಯೂ ಅಂತರ್ಮುಖಿಯಾಗಿ ನನ್ನದೇ ಚಿಂತೆ ಚಿಂತನೆಗಳಲ್ಲಿ ಮುಳುಗಿ ಹೋಗುವ ಕಲೆ ಕರಗತವಾದದ್ದೂ ನಮ್ಮ ಸಿಟಿ ಬಸ್ಸುಗಳಲ್ಲೇ. ಈ ಕಾರಣಕ್ಕಾಗಿಯೂ ಇವುಗಳಿಗೆ ನಾನು ಆಭಾರಿ.

ಈಗ ಮತ್ತೆ ಆಸನಾವಿಯೋಗದ ಮಾತಿಗೆ ಬರೋಣ. ಒಮ್ಮೊಮ್ಮೆ ಸಂಪೂರ್ಣ ಅರ್ಹಳಾಗಿ, ''ಸ್ತ್ರೀ''ಯರ ಆಸನವೊಂದ್ರಲ್ಲಿ ಆಸೀನಳಾಗಿದ್ರೂ, ಈ ಆಸನಾವಿಯೋಗದ ಆತಂಕ ಆಗೊಮ್ಮೆ ಈಗೊಮ್ಮೆ ಸ್ಟಾಪುಗಳಲ್ಲಿ ಕಾಡುವುದಂತೂ ನಿಜ. ಏಕೆಂದರೆ ನನ್ನ ಈ ನ್ಯಾಯೋಚಿತವಾದ ಸೀಟಿಗೂ ಕುತ್ತು ತರುವಂಥ ಬಸುರಿಯೋ ಇಲ್ಲಾ ಕಂಕುಳಲ್ಲಿ ಮಗುವನ್ನೆತ್ತಿಕೊಂಡ ಹೆಂಗಸೋ ಎಲ್ಲಿ ವಕ್ಕರಿಸಿಯಾಳೋ ಅಂತ!

ಒಂದು ವೇಳೆ ಹೊಟ್ಟೆ ಹೊತ್ತ ಬಸುರಿಯೇನಾದ್ರೂ ಹತ್ತಿಬಿಟ್ರೆ, ನನ್ನ ಸ್ವಗತಕ್ಕೆ ಚಾಲನೆ ಸಿಕ್ಕ ಹಾಗೆ .... ''ಇದೇ ನಾನು ಹೊಟ್ಟೆ ಹೊತ್ತು ಸಿಟಿ ಬಸ್ಸು ಹತ್ತಿದಾಗೆಲ್ಲಾ ಯಾವ ಹೆಂಗಸು

ತಾನೆ ಎದ್ದು ಸೀಟು ಬಿಟ್ಟುಕೊಟ್ಟಿದ್ಲು? ಎಲ್ರೂ ಅಶೋಕವನದಲ್ಲಿ ಸೀತೆಯ ಸುತ್ತ ಕೂತಿರ್ತಿದ್ದ ನಿಷ್ಕರುಣಿ ರಕ್ಕಸಿಯರ ಹಾಗೆ ಕಂಡು ಬರೋರು. ಈಗ ಎದುರಿಗೆ ಮೊಬೈಲು ನೋಡ್ತಾ ಕೂತ ಆ ಕಾಲೇಜು ಮಳ್ಳಿಗೆ ಏಳೋಕ್ಕೇನು ಧಾಡಿ? ಕಿಟಕಿ ಪಕ್ಕ ಕೂತ ಹೆಂಗಸಿಗೆ ನಿಜವಾಗ್ಲೂ ಮಂಪರು ಹತ್ತಿದ್ಯಾ? ಇನ್ನು ನೆರೆಗೂದಲ ಇಬ್ರು ಹೆಂಗಸ್ರನ್ನಂತೂ ಮಾತಾಡ್ಸೋಹಾಗೇ ಇಲ್ಲ. ಪಕ್ಕದ ಸಾಲಲ್ಲಿ ಕೂತ ಇಬ್ಬರು ಈ ಬಸುರಿ ಹತ್ತಿದ್ದು ನೋಡ್ಲೇ ಇಲ್ಲವೆಂಬಂತೆ ಮಾತಿನಲ್ಲಿ ತಲ್ಲೀನರಾಗಿದ್ದಾರೆ.''

ಬಸುರಿ ಸೀಟು ಸಿಕ್ಕೀತೆ ಎಂದು ಅತ್ತ-ಇತ್ತ ಕಣ್ಣಾಡಿಸ್ತಿದ್ರೆ, ಹಾಳಾದ್ದು ಅಯ್ಯೋ ಪಾಪ ಅನ್ನಿಸೋಕ್ಕೆ ಶುರುವಾಗಿ, ಸೀಟು ಬಿಟ್ಟು ಎದ್ದು ಬಿಡ್ಲೇ ಬೇಡ್ವೇ ಎಂಬ ಇಬ್ಬಗೆ ನನ್ನ ಹಿಗ್ಗಾ ಮುಗ್ಗಾ ಎಳೆಯುತ್ತೆ. ಸರಿ, ಇನ್ನು ಯಾರೂ ಸೀಟು ಬಿಟ್ಟೇಳುವ ಸೂಚನೆ ಕಂಡು ಬರದಿದ್ದಾಗ, ಕೊನೆಗೆ ನಾನೇ ಎದ್ದು ನಿಟ್ಟುಸಿರು ಬಿಟ್ಟು, ಬಸುರಿ ನಾ ಕೂತಿದ್ದ ಸೀಟಿನಲ್ಲಿ ಕೂರುವುದರೊಂದಿಗೆ (ಡ್ರಾಮಾ) ಪರಿಸಮಾಪ್ತಿಯಾಗುತ್ತೆ. ಕಾಲೇಜು ಮಳ್ಳಿ ಮೊಬೈಲಿನಿಂದ ಕಣ್ಕಿತ್ತು ಕತ್ತೆತ್ತುತ್ತಾಳೆ. ಕಿಟಕಿ ಪಕ್ಕದ ಹೆಂಗಸು ಮಂಪರಿನಿಂದ ಎಚ್ಚರವಾದಂಗೆ ಕಣ್ ಬಿಟ್ಟು ಸುತ್ತ ನೋಡ್ತಾಳೆ. ಎಡಬಿಡದೆ ಮಾತಾಡ್ತಿದ್ದ ಹೆಂಗಸ್ರು ಇದ್ದಕ್ಕಿದ್ದ ಹಾಗೆ ಬಾಯಿನೋವು ಬಂದಂಗೆ ತೆಪ್ಪಗಾಗ್ತಾರೆ. ಇವೆಲ್ಲದರ ಮಧ್ಯೆ, ಕೂತ ಬಸುರಿ ಒಂದು ''ಥ್ಯಾಂಕ್ಸ್'' ಹೇಳಿದ್ರೆ ಕೊಂಚ ಸಮಾಧಾನ.... ಇಲ್ಲದಿದ್ರೆ ಮತ್ತೊಂದು ನಿಟ್ಟುಸಿರು!

ಇವಳ ಜಾಗದಲ್ಲಿ ಕಂಕುಳಲ್ಲಿ ಮಗುವನ್ನೆತ್ತಿಕೊಂಡು ಬಂದ ಹೆಂಗಸಾದ್ರೆ, ನನ್ನ ಸೀಟುಳಿಸಿಕೊಳ್ಳಲು ಇರುವ ಒಂದೇ ಒಂದು ಉಪಾಯವೆಂದರೆ, ಮಗೂನ ನನ್ನ ತೊಡೆಯ ಮೇಲೆ ಇಲ್ಲಾ ನನ್ನ ಪಕ್ಕ ಸ್ವಲ್ಪ ಜಾಗ ಮಾಡಿ ಕೂರಿಸಿಕೊಂಡುಬಿಡುವುದು! ಇದಕ್ಕೇಂತ ಆಸನಾವಿಯೋಗದ ಆತಂಕ, ಮಗು ಬಂದೀತೆ ಎಂಬ ಸಂಶಯ, ಎರಡೂ ಬೆರೆತ ನಸುನಗೆ ತಂದ್ಕೊಂಡು ಮಗುವಿನತ್ತ ಕೈಚಾಚುವುದು. ಅದು ಬಂದ್ರೆ ನನ್ನ ಪುಣ್ಯ. ಇಲ್ದಿದ್ರೆ ಮಗು ಮುಖ ನೋಡಿ ಎದ್ದು ಬಿಡುವುದು. ಅದು ತಿರುಗಿ ನಕ್ಕರೆ ಬಿಟ್ಟುಕೊಟ್ಟ ಸೀಟಿಗೆ ವಜಾ! ಇಲ್ದಿದ್ರೆ ಇದ್ದೇ ಇದೆ.... ಅದೇ ನಿಟ್ಟುಸಿರು!

ಹಾಗಂತ ಪ್ರತಿ ಬಾರಿ ನನಗೇ ಆಸನಾವಿಯೋಗವಾಗತ್ತೆ ಅಂತ ಹೇಳೋದು ಅಪ್ಪಟ ಸುಳ್ಳಾಗತ್ತೆ ಬಿಡಿ. ನನ್ನ ಮನಸ್ಸಿಗಿಂತ ದೊಡ್ಡ ಮನಸ್ಸು ಮಾಡಿ, ಹೆಚ್ಚು ಅವಶ್ಯಕತೆಯಿರುವವರಿಗೆ ಥಟ್ಟನೆದ್ದು ಸೀಟು ಬಿಟ್ಟುಕೊಟ್ಟ ಎಷ್ಟೋ ಹೆಂಗೆಳೆಯರನ್ನ ಕಂಡಿದ್ದೀನಿ. ಇಂಥವರ ಸಂಖ್ಯೆ ನೂರುಪಟ್ಟಾಗಲಿ ಎಂಬೋದೇ ನನ್ನ ಆಶಯ.

ಒಮ್ಮೆ ಕೊಡಗಿನ ಸೋಮವಾರಪೇಟೆ ಸುತ್ತ ಮುತ್ತ ನೋಡೋಣವೆಂದು ಸರ್ಕಾರಿ ಬಸ್ಸಿನಲ್ಲಿ ಮುಂಗಡವಾಗಿ ಸೀಟು ಕಾಯ್ದಿರಿಸಿದೆವು. ರಾತ್ರಿ ಪ್ರಯಾಣಕ್ಕೆಂದು ಡ್ರೈವರ ಹಿಂದೆ ಕಾಲು ಚಾಚುವುದಕ್ಕೆ ಸಾಕಷ್ಟು ಸ್ಥಳಾವಕಾಶವಿದ್ದ ಸೀಟುಗಳು. ಅಂದು ಶನಿವಾರ ರಾತ್ರಿ ಲಗ್ಗೇಜು ಹೊತ್ತು ಸೀಟಿನ ಬಳಿ ಹೋದವರೇ ಹೌಹಾರಿದೆವು! ನಮ್ಮ ಸೀಟಿನಲ್ಲಾಗಲೇ ಯಾರೋ ದಂಪತಿ ರಾಜಾರೋಷವಾಗಿ ಕೂತಿದ್ರೆ, ಕಾಲ ಬಳಿಯ ಜಾಗದಲ್ಲಿ ನಾಯಿಯೊಂದು ಪವಡಿಸಿತ್ತು! ಏರಿದ ದನಿಯಲ್ಲೇ ಸೀಟು ಬಿಟ್ಟೇಳಲು ಕೇಳಿದೆವು. ಆತ ಅಷ್ಟೇ ವಿನಮ್ರನಾಗಿ, ''ದಯವಿಟ್ಟು ಸ್ವಲ್ಪ ಅಡ್ಜೆಸ್ಟ್ ಮಾಡ್ಕೊಳ್ಳಿ. ಈ ಮೂಕಪ್ರಾಣೀನ


ಮನೇಲಿ ಒಂಟಿಯಾಗಿ ಬಿಟ್ಟು ಬರೋ ಹಾಗಿಲ್ಲ. ಕಾರಲ್ಲಿ ಹೋಗೋ ಶಕ್ತಿಯೂ ನಮ್ಗಿಲ್ಲ....''

ಅದೇ ಸಮಯಕ್ಕೆ ಬಂದ ಕಂಡಕ್ಟರ್, ಪ್ರಾಣಿ ದಯಾಸಂಘದ ಅಧ್ಯಕ್ಷನಂತೆ, ನಮ್ಮೆಜಮಾನ್ರಿಗೆ, '' ಏನೋ ನೋಡಿ ಸಾರ್, ಪಾಪ... ಮೂಕಪ್ರಾಣಿ.... ಅದ್ರ ಮುಖ ನೋಡಿ ಸಾರ್... ನಿಮ್ಮಂಗೆ ಅಲ್ವ ಅದೂನೂ...'' ಅಂದ! ನಾನು ಒಮ್ಮೆ ನಾಯಿಯ ಮುಖವನ್ನೂ, ಒಮ್ಮೆ ಯಜಮಾನರ ಮುಖವನ್ನೂ ನೋಡಿದೆ.......

ಯಜಮಾನ್ರು, ''ಛೆ! ಇದೊಳ್ಳೆ ರಾಮಾಯಣ!'' ಅಂತ ಗೊಣಗಿದರಷ್ಟೇ. ಆ ನಿರ್ವಾಹಕ ತೋರಿಸಿದ ಸೀಟಿನಲ್ಲಿ ನಿರ್ವಾಹವಿಲ್ಲದೇ ಕೂತೆವು. ಅದಾವ ಘಳಿಗೆಯಲ್ಲಿ ಸೀಟು ಕಾಯ್ದಿರಿಸಿದೆವೋ! ನಮ್ಮ ಆಸನಾಯೋಗದಲ್ಲಿ ಶ್ವಾನದೋಷವುಂಟಾದ ಪರಿಣಾಮವೋ ಏನೋ, ಕಾಯ್ದಿರಿಸಿದ ಸೀಟಿನಿಂದ ವಂಚಿತರಾದೆವು. ನಿರಾಸೆಯಾಗಿ, ಹೇಗೋ ಶನಿವಾರ ರಾತ್ರಿ ಪ್ರಯಾಣಿಸಿ, ಭಾನುವಾರ ಬೆಳಿಗ್ಗೆ ಅಂತೂ ಸೋಮವಾರಪೇಟೆ ತಲುಪಿದೆವು.

❋

---


ಬೇಲೂರು ರಾಮಮೂರ್ತಿಯವರು ರಚಿಸಿರುವ
ಬೀChi ಬದುಕು ಮತ್ತು ಬರಹಗಳನ್ನು ಆಧರಿಸಿದ

**ಬೊಂಬಾಟ್ ಬೀChi – ಹಾಸ್ಯ ನಾಟಕ**

ಇತ್ತೀಚೆಗೆ ಬಿಡುಗಡೆಯಾಗಿದೆ. ಹೊಸ ನಾಟಕ ಬಯಸುವ ತಂಡಗಳು ಇತ್ತ ಗಮನ ಹರಿಸಬಹುದು. 6 ಅಂಕಗಳ (90 ನಿಮಿಷದಲ್ಲ ಆಡಬಹುದಾದ) ಈ ನಾಟಕದಲ್ಲ ಬೀಚಿಯವರ ಬದುಕು, ಬದುಕಿನ ಪಾತ್ರಗಳು, ತಿಮ್ಮ, ಸಹೋದ್ಯೋಗಿಗಳು, ಪತ್ನಿ ಎಲ್ಲರೂ ಕಾಣಿಸುತ್ತಾರೆ.

ನಾಟಕ ಕೃತಿಗೆ ಸಂಪರ್ಕ:

ಉಲ್ಲಾಸ್ ರಾಯಸಂ
ಬಿChi ಪ್ರಕಾಶನ, ಸಹಕಾರ ನಗರ, ಬೆಂಗಳೂರು 92
ದೂ. 9845264304
ಮಿಂಚಂಚೆ : admin@beechi.in, / beechividyakendra@yahoo.com

# ವ್ಯಂಗ್ಯ ಮೆಲುಕು

- ಪ್ರಕಾಶ್ ಶೆಟ್ಟಿ

ಮೂವತ್ತೈದು ವರ್ಷಗಳ ಹಿಂದಿನ ಕೌಟುಂಬಿಕ ವ್ಯಂಗ್ಯಚಿತ್ರಗಳನ್ನು ನೋಡುವುದೇ ಒಂದು ಖುಷಿ. ಅಂದಿನ 'ಫ್ಯಾಮಿಲಿ ಮ್ಯಾಟ್ರು' ಪ್ರಸನ್ನ, ರಘು, ರಾವ್‌ಬೈಲ್ ಮತ್ತು ನಾಡಿಗ್ ಕೈಯಲ್ಲಿ ಹೇಗೆ ರೂಪುಗೊಂಡಿದೆ ನೋಡಿ !



ಲೋ ಮುಠಾಳ...ಈಗಲೇ ಹೋಗಿ 1ಮೂಟೆ ಸಣ್ಣಕ್ಕಿ,50ಕೆಜಿ ಬೇಳೆ, 25ಕೆಜಿ ಬಿಳಿ ಬೆಲ್ಲ, 2ಕೆಜಿ ಹಸನ್ ಬೆಣ್ಣೆ,1ಕೆಜಿ ಎಣ್ಣೆ ತಂದು ಬಿಸಾಕೋ! ಶೆಟ್ರು ಸಾಲ ಕೊಟ್ರೆ...



'ಕೋಪ ಅನರ್ಥ ಸಾಧನ' ಎಂದೆಲ್ಲಾ ಧರ್ಮೋಪದೇಶ ಕೊಡ್ತೀರಿ.. ಈಗ ಸಾಂಬಾರಿಗೆ ಉಪ್ಪು ಹಾಕದ್ದಕ್ಕೆ ಇಷ್ಟು ಕೋಪ ಮಾಡುತ್ತೀರಲ್ಲಾ!



ಮಕ್ಕಳೇ! ಇವತ್ತು ಟೊಮೆಟೋ ತಿಳಿಸಾರು... ನಿನ್ನೆಯ ಸಭೆಯಲ್ಲಿ ನಿಮ್ಮಪ್ಪನ ಮೇಲೆ ಟೊಮೆಟೋ ಎಸೆದಿದ್ದರು...



ಅಂತರರಾಷ್ಟ್ರೀಯ ಮಕ್ಕಳ ವರ್ಷಕ್ಕೆ ಇದು ನನ್ನ ಹನ್ನೆರಡನೇಯ ಕೊಡುಗೆ ಕಣಯ್ಯ.....




ಇಷ್ಟು ತಿಳಿದವರಾಗಿ ನೀವು ಹೀಗೆ ಮಾಡಬಹುದೇ... ಅದೂ ಕೆಟ್ಟ ನಕ್ಷತ್ರದಲ್ಲಿ...!

# ದಶಶಿರ

- ವೈ.ವಿ. ಗುಂಡೂರಾವ್

ನನ್ನ ಗೆಳೆಯರೊಬ್ಬರು ಹೀಗೆ ಚರ್ಚೆ ಮಾಡುವಾಗ. ನೋಡಿ, ರಾಮಾಯಣ, ಮಹಾಭಾರತ ಮುಂತಾದ ಗ್ರಂಥಗಳೆಲ್ಲಾ ಇವೆಯಲ್ಲಾ? ಅವಲ್ಲಿ ನೀತಿ, ಸಂದೇಶ, ಪಾಠ, ಮಾರ್ಗದರ್ಶನ, ಇವೆಲ್ಲಾ ಇರಬಹುದು. ಆದರೆ, ಕಥನಶೈಲಿ ಇದೆಯಲ್ಲಾ? ಉದಾಹರಣೆಗಳಿವೆಯಲ್ಲಾ? ಅವು ಸ್ವಲ್ಪ ಅವಾಸ್ತವ ಅನ್ನಿಸೋದಿಲ್ಲವಾ? ಫ್ಯಾಂಟಸಿ ಅನ್ನಿಸೋದಿಲ್ಲವಾ? ಕಲ್ಪನೆ ಅನ್ನಿಸೋದಿಲ್ಲವಾ? ಎಂದು ಕೇಳಿದರು.

'ಯಾಕೆ ಹಾಗನ್ನಿಸುತ್ತೆ ಸ್ವಾಮಿ ನಿಮಗೆ? ಅಂದೆ.

**ಹೊರಗಿನ ರೂಪವನ್ನು ಮಾತ್ರ ಗಮನಿಸಿ ಒಳಗಿನ ಹೂರಣ ಮರೆತಾಗ..**

ಅದಕ್ಕವರು, ಉದಾಹರಣೆಗೆ ರಾವಣನ್ನ ತೊಗೊಂಡರು.

ಅವನಿಗೆ ಹತ್ತು ತಲೆ ಅನ್ನುತ್ತೆ ನಮ್ಮ ಪುರಾಣ. ಹತ್ತು ಅನ್ನೋದು ಸಮಸಂಖ್ಯೆ - ಈವನ್ ನಂಬರ್. ಈ ಈವನ್ನೇ ಆಡ್ ಅನ್ನಿಸುತ್ತೆ ನನಗೆ. ಹಾಗೇ ಕಲ್ಪಿಸಿಕೊಳ್ಳಿ ಆ ರೂಪಾನ. ಹತ್ತು ತಲೇನ ಹೇಗೆ ಫಿಕ್ಸ್ ಮಾಡೋದು? ಒಂದು ಕಡೆ ಆರು, ಇನ್ನೊಂದುಕಡೆ ನಾಲ್ಕು. ಹೇಗೆ ಬ್ಯಾಲನ್ಸ್ ಆಗುತ್ತೆ, ನೀವೇ ಹೇಳಿ. ರಾವಣ (ಶ್ರೀ)ಲಂಕಾದಲ್ಲಿದ್ದ. ಬಚಾವಾದ. ಬೆಂಗಳೂರಿನಲ್ಲಿದ್ದಿದ್ದರೆ, ತುಂಬಾ ಕಷ್ಟವಾಗುತ್ತಿತ್ತು. ಹೇಗೇಂತೀರಾ? ಇಲ್ಲಿ ಹೆಲ್ಮೆಟ್ ಕಡ್ಡಾಯ. ಹತ್ತುತಲೆಗೆ ಹತ್ತು ಹೆಲ್ಮೆಟ್. ಕಲ್ಪನೆ ಮಾಡಿಕೊಂಡರೇ ವಿಚಿತ್ರ ಅನ್ನಿಸುತ್ತೆ ಅಲ್ಲವಾ? ಸ್ವಲ್ಪ ತಲೆ ಕೆರೆದುಕೊಂಡು ಯೋಚನೆ ಮಾಡಿ. ಇದು ತಲೆ ಕತೆಯಾದರೆ, ಇನ್ನು ಅವನ ಬಾಹುಗಳು! ಇಪ್ಪತ್ತು ಬಾಹುಗಳಂತೆ, ಈಗವನು ಯಾವ ರಿಸ್ಟ್‌ಗೆ ಗಡಿಯಾರ ಕಟ್ಟಿಕೊಳ್ಳೋ ರಿಸ್ಕ್ ತೊಗೋತಾನೆ? ಇನ್ನು, ಅವನು ರಸ್ತೆಯಲ್ಲಿ ಹೋಗಬೇಕಾದರೆ, ಡಬಲ್ ರೋಡಲ್ಲೇ ಹೋಗಬೇಕು. ರಸ್ತೆ ಮಧ್ಯದಲ್ಲೇ ಹೋಗಬೇಕು. ಇಡೀ ರಸ್ತೇನ ಅವನೊಬ್ಬನೇ ಆಕ್ರಮಿಸಿಕೊಂಡಿರುತ್ತಾನೆ. ಅದಕ್ಕೇ ಹೇಳಿದ್ದು, ಇದೆಲ್ಲಾ ಫ್ಯಾಂಟಸಿ, ಕಲ್ಪನೆ, ವಾಸ್ತವಕ್ಕೆ ದೂರ, ಅಂತ. ಆದರಿಂದಾನೇ ರಾಮಾಯಣ, ಮಹಾಭಾರತದಂಥ ಗ್ರಂಥಗಳನ್ನ ನಕಾರಾತ್ಮಕವಾಗಿ ನೋಡುವ ಬು..ಜೀವಿಗಳು ಜಾಸ್ತಿಯಾಗ್ತಾ ಇರೋದು, ಅಂದರು.

ನಾನು ನಕ್ಕು, ಅವರ ಕೈಗೆ ಮಂಕುತಿಮ್ಮನ ಕಗ್ಗ ಕೊಟ್ಟೆ. ನೋಡಿ ಈ ಪದ್ಯ ಅಂದೆ. ಅವರು ಗಟ್ಟಿಯಾಗಿ ನಾ ತೋರಿಸಿದ ಪದ್ಯ ಓದಿದರು–

*ರಾವಣನ ದಶಶಿರವದೇನ್ ಮಾನವನು ಶತಶಿರನು*
*ಸಾವಿರಾಸ್ಯಗಳ ಒಂದರೊಳಗಡಗಿಸಿಹನು*
*ಹಾವಾಗಿ, ಹುಲಿಯಾಗಿ, ಕಪ್ಪೆ, ಹುಲ್ಲೆಯುಮಾಗಿ,*
*ಭೂವ್ಯೋಮಕತಿಶಯನು ಮಂಕುತಿಮ್ಮ*

‘ನೋಡಿದಿರಾ? ನಮ್ಮ ಎಲೆಯಲ್ಲಿ ಹೆಗ್ಗಣ ಬಿದ್ದಿರುವಾಗ, ಪಕ್ಕದವರ ಎಲೆಯಲ್ಲಿ ನೊಣ ಬಿದ್ದಿದೆ ಅಂತೀವಲ್ಲಾ! ಸಾವಿರಾಸ್ಯಗಳಿರುವ ಮನುಷ್ಯ ಹತ್ತು ಆಸ್ಯಗಳಿರುವವನ್ನು ಹಾಸ್ಯ ಮಾಡಿದರೆ ಹೇಗೆ? ಹತ್ತು ಹೆಲ್ಮೆಟ್ಟು, ಡಬಲ್ ರೋಡು, ರಿಸ್ಟ್ ವಾಚಿನ ರಿಸ್ಕ್ ಅಂತೆಲ್ಲಾ ಮಾತಾಡುತ್ತೀವಲ್ಲಾ? ಸಾವಿರಾಸ್ಯಗಳನೊಂದರೊಳಗೆ ಅಡಗಿಸಿಕೊಂಡಿಲ್ಲವಾ ನಾವು? ಹೇಳಿ ಸ್ವಾಮಿ! ಎಂದು ವಾದಿಸಿದೆ.

ನಂತರ ಮುಂದುವರೆಸಿದೆ: ಕೆಲವು ಸಾರಿ ನಾವಾಡುವ ಮಾತುಗಳನ್ನು ನೆನಪಿಸಿಕೊಳ್ಳಿ. ಯಾವ ಮುಖ ಇಟ್ಟುಕೊಂಡು ಅವನನ್ನ ಮಾತಾಡಿಸಲಿ? ಅವನ ನಿಜವಾದ ಮುಖ ಗೊತ್ತಾಯಿತು. ಅವನ ಇನ್ನೊಂದು ಮುಖದ ಪರಿಚಯ ಆಯಿತು ಅವರದ್ದು ಬಹುಮುಖ ಪ್ರತಿಭೆ. ಇತ್ಯಾದಿ, ಇತ್ಯಾದಿ ಅಲ್ಲವಾ? ಹಾಗೆ ಹೇಳಿಲ್ಲವಾ? ಹಾಗೆ ಹೇಳಿಲ್ಲವಾ? ಹೇಳಿ, ಈಗ ದೂರದರ್ಶನದಲ್ಲಿ ಬಿಗ್ ಬಾಸ್ ಬರುತ್ತಾ ಇದೆಯಲ್ಲಾ ಅದರ ಟ್ಯಾಗ್ ಲೈನ್ ನೆನಪಿಸಿಕೊಳ್ಳಿ – ಕಂಡಮುಖಗಳ ಕಾಣದಮುಖ. ಇದೆಲ್ಲಾ ಏನು ತಿಳಿಸುತ್ತೆ? ರಾವಣ ಸತ್ತಿಲ್ಲ, ಸಾಯುವುದೂ ಇಲ್ಲ. ಹಾವಾಗಿ, ಹುಲಿಯಾಗಿ, ಕಪ್ಪೆ, ಹಲ್ಲೆ, ಅಷ್ಟೇ ಅಲ್ಲದೆ ಇನ್ನೂ ಏನೇನೋ ಆಗಿ ಎಂದೆಂದೂ ಇರುತ್ತಾನೆ ಅನ್ನಿಸೋದಿಲ್ಲವಾ?

ಅವರು ಸುಮ್ಮನೆ ಕೇಳುತ್ತಿದ್ದರು.

ಅಸಲು, ಹಾವು ಎಂದರೇನು? ಗುಪ್ತವಾಗಿ ಬಂದು ಕೈಕೊಡುವುದು, ವಿಷ ಕಾರುವುದು, ದ್ವೇಷ ಸಾಧಿಸುವುದು, ಎರಡು ನಾಲಿಗೆ ಅಂದರೆ ಬೂಟಾಟಿಕೆ, ಡಬಲ್ ಸ್ಟ್ಯಾಂಡರ್ಡ್ ವ್ಯಕ್ತಿತ್ವ ಹೊಂದಿರುವುದು ಇಂತಹ ಮನುಷ್ಯರು ಈಗಿಲ್ಲವಾ? ಫ್ಯಾಂಟಸಿ ಹೇಗಾಗುತ್ತೆ?

ಇನ್ನು ಹುಲಿ ತೊಗೊಳ್ಳಿ. ಹುಲಿ ಅಂದರೇನು? ಆಕ್ರಮಣಕಾರಿ ವ್ಯಕ್ತಿತ್ವ. ದಬ್ಬಾಳಿಕೆಗುಣ. (ಗುಣನಾ ಅದು? ದೋಷ). ದಾಳಿ ಮಾಡುವ ಪ್ರವೃತ್ತಿ. ಶೋಷಣೆ ಮಾಡುವಚಿಂತನೆ. ಹಿಂಸಾಪ್ರವೃತ್ತಿ ಮತ್ತು ವೃತ್ತಿ. ಇಲ್ಲವಾ ಇಂತಹ ಮನುಷ್ಯರು? ಫ್ಯಾಂಟಸಿ ಎಲ್ಲಿ ಬಂತು ರಾಮಾಯಣದ ರಾವಣನ ಚಿತ್ರಣದಲ್ಲಿ?

ಈಗ ಕಪ್ಪೆ ವಿಷಯಕ್ಕೆ ಬಂದರೆ.. ಹೇಳಿದ್ದನ್ನೇ ಹೇಳುತಾ, ಹೇಳುತಾ, ಹೇಳುತಾ ಇರೋದು. ಬದಲಾವಣೆ ವಿರೋಧಿಸೋದು. ಯಾವಾಗಲೂ ಗೊಣಗುತಾ ಇರೋದು (ವಟಗುಟ್ಟುತಾ ಇರೋದು). ಯಾವುದೇ ರೀತಿಯ ಪ್ರಗತಿಗೆ ಅಡ್ಡವಾಗಿ, ತಮ್ಮನ್ನ, ಸಮಾಜವನ್ನ, ದೇಶವನ್ನ, ಮುಂದುವರೆಯೋದಕ್ಕೆ ಬಿಡದೆ, ಯಾವಾಗಲೂ ಹಿಂದೆ ಇರೋದಕ್ಕೇ, ಇಟ್ಟಿರೋದಕ್ಕೇ ಇಷ್ಟಪಡೋರು ಕಾಣೋದಿಲ್ಲವೇ ಸ್ವಾಮಿ ಇಂತಹ ಮನಸ್ಸುಗಳು, ನಮ್ಮ ಸುತ್ತು ಮುತ್ತಾ? ಮತ್ತೆ ರಾಮಾಯಣದ ಪಾತ್ರದ ಚಿತ್ರಣ ಮಾತ್ರ ಫ್ಯಾಂಟಸಿ ಅಂತೀರಲ್ಲಾ ಅಂದೆ.

ಮತ್ತೆ ಮುಂದುವರೆಯಿತು ನನ್ನ ವಿಶ್ಲೇಷಣೆ. ಈಗ ಹಲ್ಲೆ ನೋಡೋಣ. ಹಲ್ಲೆ ಅಂದರೆ ಆಸೆ, ಚಂಚಲತೆ. ಸ್ಥಿರವಾಗಿ ಒಂದು ಕಡೆ ನಿಲ್ಲದಿರೋದು. ಒಂದು ವಿಚಾರ, ಒಂದು ದೃಢ ನಿರ್ಧಾರ ಇಲ್ಲದಿರೋದು. ಸಮಸ್ಯೆ ಬಂದಾಗ ಎದುರಿಸದೆ ಎಸ್ಕೇಪಾಗುವುದು. ಯಾವಾಗಲೂ ಅನವಶ್ಯಕ ಭಯದಲ್ಲೇ ಇರೋದು. ಏನು

ಪ್ರಯೋಜನ ಸ್ವಾಮಿ, ಈ ರೀತಿ ಬದುಕೋದರಿಂದ? ಇದು ಮನುಷ್ಯನ ಹಲವಾರು ಮುಖಗಳಲ್ಲಿ ಒಂದು ಅಂತಾರೆ ಡಿವಿಜಿ ಅವರು. ನಮ್ಮ ಅಕ್ಕಪಕ್ಕದಲ್ಲಿ ಇಂತಹವರು ಹೇರಳವಾಗಿ ಕಾಣಿಸೋದರಿಂದ, ರಾವಣನ ದಶಶಿರ ಫ್ಯಾಂಟಸಿ ಹೇಗಾಗುತ್ತೆ?

ಪ್ರತಿ ಮನುಷ್ಯನೂ ಸಾಮಾನ್ಯವಾಗಿ ತ್ರಿಗುಣಗಳಲ್ಲಿ ಬಂದಿಯಾಗಿರುತ್ತಾನೆ-ಸತ್ವ, ರಜಸ್ ಮತ್ತು ತಮಸ್. ಒಂದೊಂದು ಗುಣಕ್ಕೆ ಅನೇಕ ಸಬ್-ಮುಖಗಳು ಚಿಂತನೆ, ಭಾವನೆ, ವರ್ತನೆ. ಇದನ್ನೆಲ್ಲಾ ಸಂಗ್ರಹಿಸಿ ರಾವಣನ ಪಾತ್ರವನ್ನು ಸಾಂಕೇತಿಕವಾಗಿ ಹತ್ತು ತಲೆ, ಇಪ್ಪತ್ತು ಬಾಹುಗಳು ಅಂತ ಚಿತ್ರಿಸಿದ್ದಾರೆ, ಆದಿ ಕವಿ ವಾಲ್ಮಿಕಿ. ಆದರೆ ನಾವು ಅದರಲ್ಲಿರುವ ಗೂಢಾರ್ಥವನ್ನ ಬಿಟ್ಟು, ಸಂಕೇತಾರ್ಥವನ್ನ ಮರೆತು, ರಾವಣ, ಮುಂತಾದವರ ಹೊರಗಿನ ರೂಪಾನ ಮಾತ್ರ ಗಮನಿಸಿ, ಒಳಗಿನ ಹೂರಣ ಮರೆಯುತ್ತೇವೆ.

ನಾವು ನಮ್ಮ ಮನಸ್ಸಿನ ಕನ್ನಡಿ ನೋಡಿಕೊಂಡು, ಯಾವ ಗುಣ ನಮ್ಮನ್ನ ಆಳುತಾ ಇದೆ, ಯಾವ ಗುಣ ನಮ್ಮ ಮೇಲೆ ಪ್ರಭಾವ ಬೀರುತಾ ಇದೆ ಅನ್ನೋದನ್ನ ಗಮನಿಸಿ, ನಮ್ಮ ವ್ಯಕ್ತಿತ್ವವನ್ನ ಮಾರ್ಪಾಡು ಮಾಡಿಕೊಳ್ಳಬೇಕು ಅನ್ನೋ ಸೂಕ್ಷ್ಮ ತಿಳಿಸೋದಕ್ಕೆ ಈ ಕಥನ ಮಾರ್ಗ ಅಥವಾ ನೀವು ಹೇಳೋ ಹಾಗೆ ಫ್ಯಾಂಟಸಿ ಮಾರ್ಗ ಆರಿಸಿಕೊಂಡರು, ನಮ್ಮ ಋಷಿಗಳು. ನಮ್ಮೆಲ್ಲಾ ಭಾವನೆಗಳು ವ್ಯಕ್ತವಾಗೋದು ಮುಖದ ಮೂಲಕವೇ ಆದ್ದರಿಂದ ದಶಶಿರ ಅಂದರು ಎಂದೆ.

ಮುಗಿಸುವ ಮುನ್ನ:

***ಯಾರಾದೂ ಬೆರಳನ್ನು ಆಕಾಶದ ಕಡೆ ತೋರಿದಾಗ, ನಾವು ಆಕಾಶವನ್ನು ನೋಡಬೇಕೇ ವಿನಹ ಬೆರಳನ್ನಲ್ಲ.***

---

## ಗೊಂದಲೇಶ್ವರ

ರಾವಣನ ಬಗೆಗೆ ಇರುವ ಗೊಂದಲಗಳು.

ಅವನಿಗೆ ಯಾವಾಗಲೂ ಹತ್ತು ತಲೆ ಇರುತ್ತೋ ಇಲ್ಲಾ ಬೇಕಾದಾಗ ಮಾತ್ರ ಬರುತ್ತೋ?

ಹಾಗಾದರೆ ಆ ಒಂಭತ್ತು ತಲೆಯಲ್ಲಿರುವ ಬಾಯಿ, ಬಾಯೊಳಗಿರುವ ಹಲ್ಲುಗಳಗೆ ದಿನಾ ಬ್ರಷ್ ಮಾಡೋದು ಯಾರು?

ಒಂಭತ್ತು ತಲೆಗಳಗೂ ಯಾವುದು ಎಡಪಕ್ಕ ಯಾವುದು ಬಲಪಕ್ಕ ಅಂತ ಮಾರ್ಕ್ ಮಾಡಿರುತ್ತಾರೋ, ಇಲ್ಲಾ ಯಾವ ತಲೆ ಎಲ್ಲಿ ಬೇಕಾದರೂ ಫಿಕ್ಸ್ ಆಗುತ್ತೋ?

ರಾವಣನಿಗೆ ಹತ್ತು ತಲೆಗಳೂ ಅಂಟಿಕೊಂಡಿರುವಾಗ ಒರಿಜಿನಲ್ ತಲೆಯ ಮುಖಭಾವದಂತೆಯೇ, ಅಂದರೆ ಅತ್ತರೆ ಅಳೋದು, ನಕ್ಕರೆ ನಗೋದು, ಸಿಟ್ಟು ಮಾಡೋದು, ಹಲ್ಲು ಕಚ್ಚೋದು ಮುಂತಾದುವುಗಳನ್ನು ಎಲ್ಲಾ ತಲೆಗಳೂ ಮಾಡುತ್ತವೋ – ಅಂದರೆ ಅಂಟಿಕೊಳ್ಳುವ ಒಂಭತ್ತು ತಲೆಗಳು ಒರಿಜಿನಲ್ ತಲೆಯ ಆಜ್ಞಾನುವರ್ತಿಗಳೇ?

ಇನ್ನೂ ಸಾಕಷ್ಟು ಗೊಂದಲಗಳವೆ ಆದರೆ ಈ ಸಂಚಿಕೆಗೆ ಇಷ್ಟು ಸಾಕು.

# ವರ್ಷಕ್ಕೊಂದು ದಿನ?

**- ಜಿ.ವಿ. ನಿರ್ಮಲ**

**ಏ** ವೀರೂ ಎಲ್ಲಿದೀಯೋ? ಎಂದು ಕೂಗುತ್ತಾ ಘನಶ್ಯಾಮ ಕಾರ್ಖಾನೆಯ ಕಾರ್ಮಿಕರ ಕಛೇರಿ ಕೊಟಡಿಗೆ ನುಗ್ಗಿದ. ವೀರಪ್ಪ ಹೆಸರಿನಲ್ಲಿ ಮಾತ್ರ ವೀರಪ್ಪ. ಒಂದು ಸೊಳ್ಳೆಯನ್ನೂ ಹೊಡೆಯಲಾರದ ಸಾತ್ವಿಕ. ನೋಡಲು ನರಪೇತಲ ನಾರಾಯಣ.

ಇಲ್ಲೇ ಇದೀನಲ್ಲೋ ಶ್ಯಾಮ. ಅದ್ಯಾಕೆ ಹಾಗೆ ಅಬ್ಬರಿಸ್ತಿದೀಯಾ? ನಾನೀಗ ಒಂದ್ ದೊಡ್ಡ ಸಮಸ್ಯೇಲಿ ಸಿಕ್ಹಾಕೊಂಡು ಒದ್ದ್ಯಾಡ್ತಿದೀನಿ ವೀರಪ್ಪ ಉತ್ತರಿಸಿದಾಗ ಶ್ಯಾಮನಿಗೆ ಕೇಳಿಸಿದ್ದು ಎಲ್ಲೋ ಬಾವಿ ಒಳಗಿಂದ ಬಂದಂತಿದ್ದ ಆತನ ಧ್ವನಿ ಮಾತ್ರ. ವೀರೂ ಕಾಣ್ಲೇ ಇಲ್ಲ. ಓಹ್ ವೀರೂ ನೀನು ಅದ್ಯಾವ ಸಮಸ್ಯೇಲಿ ಸಿಕ್ಹಾಕೊಂಡು ಇದೀಯೋ ಗೊತ್ತಿಲ್ಲ. ಸದ್ಯಕ್ಕೆ ಸಂದೀಲಿ ಸಿಕ್ಹಾಕೊಂಡಿರೋದಂತೂ ನಿಜ. ಮೊದ್ಲು ಅಲ್ಲಿಂದೆದ್ದು ಆಚೆ ಬಾ. ಆಮೇಲೆ ಇಬ್ಬರೂ ಸೇರಿ ಸಮಸ್ಯೇನ ಬಗೆಹರಿಸೋಣ ಎಂದ ಘನಶ್ಯಾಮ.

**ನಾವು ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಬೋಧಿಸಿದ ಸತ್ಯ, ಧರ್ಮ, ಅಹಿಂಸೆ ಎಲ್ಲ ಮರೆತ್ರೂ ಮುಷ್ಕರ ಮಾತ್ರ ಮರೆತಿಲ್ಲ**

ಅರೆ, ನನಗೆ ಬಂದಿರೋದು ಅಂತಿಂಥ ಸಮಸ್ಯೆ ಅಲ್ವೋ. ವರ್ಷದಲ್ಲಿ ಒಂದು ದಿನ ಆಯ್ಕೆ ಮಾಡಬೇಕಾದ ಸಮಸ್ಯೆ ಎದುರಾಗಿದೆ.

ಏನು ವರ್ಷದ ಮುನ್ನೂರರವತ್ತೈದು ದಿನಗಳಲ್ಲಿ ಒಂದಿನ ಆಯ್ಕೆ ಮಾಡ್ಕೊಳ್ಳೋದು ದೊಡ್ಡ ಸಮಸ್ಯೇನಾ? ವಾರ್ಷಿಕೋತ್ಸವ, ಕೈಗಾರಿಕಾ ಕಾರ್ಮಿಕರ ದಿನ ಅಂತ ಏನಾದರೂ ಕಾರ್ಯಕ್ರಮ ಮಾಡ್ಬೇಕಾ?

ನೋಡು ಶ್ಯಾಮ ಈಗ ವರ್ಷದಲ್ಲಿ ಕಾರ್ಮಿಕರು. ಮಹಿಳೆಯರು. ಬಾಲಕಾರ್ಮಿಕರು ಇವರಿಗೆಲ್ಲಾ ಒಂದೊಂದು ದಿನ, ಏಡ್ಸ್, ಸಕ್ಕರೆ ಖಾಯಿಲೆ, ಕುಷ್ಟ ರೋಗ ಇತ್ಯಾದಿಗಳಿಗೂ ಒಂದೊಂದು ದಿನ, ಪರಿಸರ ದಿನ, ನೀರಿನ ದಿನ ಹೀಗೆ ನಾನಾ ದಿನಗಳಿವೆ ಅಲ್ವಾ? ಅಂತ ತನ್ನ ವಿಚಾರ ಲಹರೀನ ಹರಿಯಲು ಬಿಟ್ಟ ವೀರು.

ಅಯ್ಯೋ ಅಂತ ದಿನಗಳಿಗೇನು ಕಡಿಮೆ? ವರ್ಷದಲ್ಲಿ ಮುನ್ನೂರರವತ್ತೈದು ದಿನಗಳೂ ಮುಗಿದು, ಮುಂದಿನ ವರ್ಷಕ್ಕೂ ಹರಿದು ಹೋಗತ್ತೆ.'' ಘನಶ್ಯಾಮ ನಿಧಾನವಾಗಿ ನುಡಿದ. ಘನಶ್ಯಾಮನ ನಿರಾಸಕ್ತಿಯ ಉತ್ತರದಿಂದ ವೀರುವಿನ ಕೋಪ ಉಕ್ಕೇರಿತು. ಏನೋ ಘನವಾಗಿ ವಿಷಯ ಮುಂದಿಟ್ಟರೆ, ಸ್ವಲ್ಪವೂ ತಲೆ ಬಿಸಿ ಮಾಡಿಕೊಳ್ಳುವುದಿಲ್ಲವಲ್ಲ ಮಾರಾಯ. ಹಿಂದಿನ ಜನ್ಮದಲ್ಲಿ ಎಮ್ಮೆಯಾಗಿದ್ದನೇನೋ ಎಂದು ಮನಸ್ಸಿನಲ್ಲಿಯೇ ಬೈದುಕೊಂಡ ವೀರಪ್ಪ. ಏರುತ್ತಿದ್ದ ಕೋಪ ನುಂಗಿಕೊಂಡು, ಶ್ಯಾಮ. ಈ ವರ್ಷದ ಕ್ಯಾಲೆಂಡರ್ ನೋಡು. ಹಿಂದೂ, ಮುಸಲ್ಮಾನ, ಕಿರಿಸ್ತಾನ, ಸಿಖ್, ಜೈನ, ಬೌದ್ಧ ಜನಾಂಗದವರ ಹಬ್ಬಗಳಿಗೆ ರಜಗಳಿವೆ ಹೌದೋ ಅಲ್ವೋ? ಅಂತ ಕೀರಲು ಧ್ವನಿಯನ್ನೇ ಎತ್ತರಿಸಿ ಕಿರುಚಿದ.

ಹೌದಯ್ಯಾ ಕ್ಯಾಲೆಂಡರ್ ಇರೋದೇ ಹಬ್ಬ ಹರಿದಿನಗಳನ್ನ ತೋರ್ಸೋಕೆ. ಅನುಮಾನವೇನು? ಶ್ಯಾಮ ಘನವಾಗಿ ಗುಡುಗಿದ.

ನನಗೆ ಕ್ಯಾಲೆಂಡರ್ ಬಗ್ಗೆ ಪಾಠ ಹೇಳು ಅಂತ ಇಲ್ಲಿಗೆ ನಿನ್ನ ನಾನು ಕರೆದ್ನಾ? ಮತ್ತಷ್ಟು ಜೋರಾಗಿ ಗೊಣಗಿದ ವೀರಪ್ಪ.

ಅಯ್ಯೋ ರಾಮ, ಪಾಠ ಹೇಳಬೇಕು ಅಂದ್ರೂ ನಂಗೆ ಬರಲ್ಲ. ನೀನು ಕೇಳಿದ್ದಕ್ಕೆ ನಾನು ಹೇಳ್ದೆ ಅಷ್ಟೆ. ನಿನ್ನ ಸಮಸ್ಯೆ ಏನೂಂತ ಬಿಡ್ಸಿ ಹೇಳು.

ಇತ್ತೀಚಿಗೆ ಇವಿಷ್ಟೆ ಸಾಲ್ದೆಂದು ಪ್ರೇಮಿಗಳ ದಿನ, ಅದೇ ವಾಲೆಂಟೈನ್ ಡೇ ಎಂದು ಫೆಬ್ರವರಿಯಲ್ಲಿ ಆಚರಿಸ್ತಾರೆ ಗೊತ್ತಾ? ವೀರಪ್ಪನ ಪಾಟಿ ಸವಾಲು.

ಈಗ ಶ್ಯಾಮನಿಗೆ ಬಂತು ಫಜೀತಿ. ಗೊತ್ತು ಎಂದರೆ ನೀನು ಆಚರಿಸ್ತೀಯಾ? ಎನ್ನಬಹುದೇ ಈ ವೀರೂ. ಹಾಗೇನಾದ್ರೂ ಆ ದಿನ ಮದುವೆ ಆದವ್ರೂ ಮುಕ್ತವಾಗಿ ಯಾರನ್ನ ಬೇಕಾದರೂ ಪ್ರೇಮಿಸಬಹುದು ಎಂದಿದ್ದಿದ್ದರೆ ಎಷ್ಟು ಚೆನ್ನಿರುತ್ತಿತ್ತು ಅಲ್ವಾ? ಎಂದು ಯೋಚಿಸತೊಡಗಿದ.

ಏ, ಶ್ಯಾಮ ಹಾಗೇಕೆ ಬೆಚ್ಚಿ ಬೀಳ್ತಿದೀಯಾ? ಮೈಗೆ ಹುಷಾರಿಲ್ವಾ? ಎಂದು ಕೇಳುತ್ತಾ ವೀರಪ್ಪ ಕ್ಯಾಲೆಂಡರ್ ಗುಡ್ಡದಿಂದ ಆಚೆ ಬರುವ ಪ್ರಯತ್ನ ಮಾಡ್ದ.

ಆಂ, ಗೊತ್ತಿಲ್ದೆ ಏನು? ಶ್ರೀರಾಮಸೇನೆಯವರು ಇದನ್ನು ಅಡ್ಡಿಪಡಿಸಿದಾಗ ದೊಡ್ಡ ಸುದ್ದಿಯೇ ಆಯಿತಲ್ಲಾ. ಅದಿರ್‍ಲಿ. ನಿನಗೆ ಯಾಕೆ ಬೇಕು ಒಂದು ದಿನ ಅಂತ ಮೊದ್ಲು ಒದರು ಅಂತ ಹೇಳ್ತಾ ಶ್ಯಾಮ ತನ್ನ ಕನಸಿನ ಲೋಕದಿಂದ ಆಚೆ ಬಂದ.

ಶ್ಯಾಮ ನಾನು ಹೇಳೋದನ್ನ ಸರಿಯಾಗಿ ಗಮನ ಇಟ್ಟು ಕೇಳು. ನಾನು ಇಷ್ಟು ಕ್ಯಾಲೆಂಡರ್‌ಗಳನ್ನು ರಾಶಿ ಹಾಕ್ಕೊಂಡಿರುವುದು ಯಾಕೆ ಗೊತ್ತಾ? ವೀರಪ್ಪನ ಮತ್ತೊಂದು ಸವಾಲು.

ನಂಗಂತೂ ಗೊತ್ತಾಗ್ತಾ ಇಲ್ಲ. ನಿನ್ನ ಕಿಂಗ್‌ಫಿಷರ್ ಕ್ಯಾಲೆಂಡರ್ ಕಳೆದು ಹೋಗಿದ್ಯಾ?

ವೀರಪ್ಪನಿಗೆ ವಿಪರೀತ ಕೋಪ ಬಂತು. ನೋಡು, ನೋಡು, ಶ್ಯಾಮ, ನನ್ನ ತಾಳ್ಮೆ ಪರೀಕ್ಷಿಸಬೇಡ. ಅಷ್ಟು ದುಬಾರಿ ಕ್ಯಾಲೆಂಡರ್‌ನ ನನ್ನಂಥ ಬಡ ಕಾರ್ಮಿಕನಿಗೆ ಕೊಡೋವ್ರು ಯಾರು? ಇರಲಿ ಆ ವಿಷ್ಯ ಬಿಡು. ಈ ದಿನಗಳಲ್ಲಿ ಮದರ್ಸ್ ಡೇ, ಫಾದರ್ಸ್ ಡೇ, ಸಿಸ್ಟರ್ಸ್ ಡೇ, ಫ್ರೆಂಡ್ಸ್ ಡೇ ಹೀಗೆ ಡೇ ಬೈ ಡೇ ಎಲ್ಲರಿಗೂ ಒಂದೊಂದು ದಿನ ಗೊತ್ತು ಮಾಡೀದಾರೆ ಗೊತ್ತಾ?

ಓ, ವೀರೂ ಎಲ್ಲರ ಡೇಗಳನ್ನು ಆಚರಿಸಿದರೂ ಮಾರನೆಯ ದಿನ ಅವರೆಲ್ಲರನ್ನೂ ಮೂಲೆಗೆ ತಳ್ಳಿ, ಮೈ ಕೊಡವಿಕೊಂಡು ಮರೆತು ಬಿಡ್ತಾರೆ ಇಂದಿನ ಜನಾಂಗ. ಹಾಗಿರುವಾಗ ನಾವು ಯಾಕೆ ಇದರ ಬಗ್ಗೆ ತಲೆ ಕೆಡಿಸಿಕೊಳ್ಳಬೇಕು? ಎಂದು ಹೇಳಿ ಶ್ಯಾಮ ಮತ್ತೆ ಕಳೆದು ಹೋದ.

ಅಷ್ಟರಲ್ಲಿ ಛಲ ಬಿಡದ ವಿಕ್ರಮಾದಿತ್ಯನಂತೆ ವೀರಪ್ಪ ಶ್ಯಾಮನಿಗೆ ರಾಷ್ಟ್ರೀಯ ಹಬ್ಬಗಳಿಗೆ ಮತ್ತಷ್ಟು ರಜ ಕೊಡ್ತಾರಲ್ಲವೇ? ಮತ್ತೊಂದು ಪ್ರಶ್ನೆ ಹಾಕಿದ.

ಓ ವೀರೂ ನಿನ್ನ ತಲೆ ಕೆಟ್ಟಿದೆಯಾ? ಎಳೆ ಮಕ್ಕಳಿಗೂ ಗೊತ್ತಿರುವ ಈ ವಿಷಯ ಕೇಳಿ ನನ್ನ ತಲೆ ಸರಿ ಇದೆಯಾ ಎಂದು ಪರೀಕ್ಷಿಸುತ್ತಿದೀಯಾ ಹೇಗೆ? ಬಡಬಡಿಸಿದ ಶ್ಯಾಮ ಮತ್ತೆ ಯೋಚನಾ ಪ್ರಪಂಚದೊಳಗೆ ಹೊಕ್ಕ –ಈ ರಜಗಳನ್ನು ಯಾತಕ್ಕಾಗಿ ಕೊಡ್ತಾರೋ? ಇವುಗಳಿಗೆ ಗೌರವ ಕೊಡುವವರ ಸಂಖ್ಯೆ ದಿನೇದಿನೇ ಕಡಿಮೆ ಆಗ್ತಾ ಇದೆ. ಸ್ಕೂಲುಗಳಲ್ಲಿ ಮಕ್ಕಳಿಗೆ ಮಾತ್ರ ಒಂದಷ್ಟು ಸಮಾರಂಭಗಳಿರುತ್ತವೆ. ಮಿಕ್ಕವರು ಅಂದು ಪ್ರವಾಸವೋ, ಪಾರ್ಟೀನೋ, ಸಿನಿಮಾನೋ ಎಂದು ಆಯ್ಕೆ ಮಾಡ್ಕೊಂಡು ಮೋಜು, ಮಸ್ತೀಲಿ ದಿನ ಕಳೀತಾರೆ.

ಶ್ಯಾಮ ಎಲ್ಲಿ ಕಳೆದು ಹೋಗಿದ್ದೀಯಾ? ನನ್ನ ಮಾತು ಕೇಳಿಸ್ತಾ ಇದ್ಯಾ? ವೀರು ಮತ್ತೆ ಅವನನ್ನು ಈ ಲೋಕಕ್ಕೆ ಎಳೆದು ತಂದ.

ಘನಶ್ಯಾಮನ ತಾಳ್ಮೆ ಕೊನೆ ಮುಟ್ಟಿತು. ವೀರು, ನೀನು ಇನ್ನು ಒಂದೇ ಒಂದು ಪ್ರಶ್ನೆ ಕೇಳಿದ್ದೇ ಆದ್ರೆ ನಾನು ಈ ಜನ್ಮದಲ್ಲಿ ನಿನ್ನ ಮುಖ ಮತ್ತೆ ನೋಡಲ್ಲ ಎಂದು ತನ್ನ ಗಟ್ಟಿ ನಿರ್ಧಾರವನ್ನು ಸ್ಪಷ್ಟವಾಗಿ ಹೇಳಿದ.

ಇನ್ನು ಎಳೆದಾಡಿದರೆ ಕೆಲಸ ಕೆಡುವುದೆಂದು ತಿಳಿದ ವೀರಪ್ಪ ಶ್ಯಾಮ, ವರ್ಷಕ್ಕೊಂದು ದಿನ ಎಲ್ಲ ಕ್ಯಾಲೆಂಡರ್‌ಗಳಲ್ಲೂ ಮುಷ್ಕರ ಅಥವಾ ಜಾತಾಗಳಿಗೆ ಅಂತ ಮೊದ್ಲೇ ಗುರುತಿಸಿ ಬಿಟ್ಟರೆ ಒಳ್ಳೇದಲ್ವಾ? ಸುಮ್ಮನೆ ದಿಢೀರ್ ಅಂತ ಸ್ಟ್ರೈಕ್ ಮಾಡಿದ್ರೆ ಬಸ್ ಬರತ್ತೋ, ಇಲ್ವೋ? ರಸ್ತೆ ತಡೆ ಹಾಕ್ತಾರಾ? ಬ್ಯಾಂಕ್‌ಗಳು ಕೆಲಸ ಮಾಡತ್ವಾ? ಅಂತಾ ನಾನಾ ಅನುಮಾನಗಳು.. ಮೊದ್ಲೇ ಟ್ರಾಫಿಕ್ ಜ್ಯಾಮ್‌ಗೋಳಿರುವ ಬೆಂಗಳೂರಲ್ಲಿ ರಸ್ತೆಗಳಲ್ಲಿ ಜಾತಾ ಬಂದರೆ ಮತ್ತಷ್ಟು ಟ್ರಾಫಿಕ್ ಜಾಮ್ ಆಗಿ ತೊಂದರೆಯೋ ತೊಂದರೆ. ಹೀಗೆ ಅನೇಕ ಸಮಸ್ಯೆಗಳು. ಅದ್ರ ಬದಲು ಒಂದು ದಿನ ಮುಷ್ಕರಕ್ಕೆ ಅಂತ ಮೀಸಲಿಟ್ರೆ ಆ ದಿನ ಎಲ್ರೂ ಅವರವ್ರ ಗೋಳ್ನ ಹೇಳ್ಕೋ ಬಹ್ದು. ಯಾವ ಗೋಳು ಇಲ್ದೇ ಇದ್ರೂ ಯಾವುದೋ ಒಂದು ಕಾರಣ ಹುಡುಕಿ ಅಡ್ಜಸ್ಟ್ ಮಾಡಬಹುದ್ದು. ಯಾರಿಗೂ ತೊಂದ್ರೆ ಇರೋದಿಲ್ಲ ಎಂದು ತನ್ನ ಘನವಾದ ಯೋಚನೆಯನ್ನ ಘನಶ್ಯಾಮನೆದುರು ತೆರೆದಿಟ್ಟ ವೀರಾಧಿ ವೀರ ವೀರಪ್ಪ.

ಇಷ್ಟು ಹೇಳುವಲ್ಲಿ ಕ್ಯಾಲೆಂಡರ್ ಗುಡ್ಡದಡಿಯಿಂದ ಆಚೆ ಬಂದಿದ್ದ ವೀರಪ್ಪನನ್ನು ತಬ್ಬಿಕೊಂಡು ವೀರು, ತಲೆ ಅಂದ್ರೆ ನಿಂದೇ ಕಣೋ. ನಾವು ನಮ್ಮ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಬೋಧಿಸಿದ ಸತ್ಯ, ಧರ್ಮ, ಅಹಿಂಸೆ ಎಲ್ಲ ಮರೆತ್ರೂ ಮುಷ್ಕರ ಮಾತ್ರ ಮರ್ತಿಲ್ಲ. ಯಾವ್ದೋ ಒಂದು ಕಾರಣಕ್ಕೆ ಬಾವುಟ ಹಿಡಿದು ಜೈಕಾರ ಹಾಕುತ್ತಿರುವ ಜನಗಳ ಫೋಟೋಗಳು ದಿನನಿತ್ಯ ಪತ್ರಿಕೆಗಳಲ್ಲಿ, ಟಿವೀಲಿ ನೋಡ್ತಾನೇ ಇರ್ತೀವಿ. ಆದ್ರೆ ನಂಗೆ ಒಂದು ಅನುಮಾನ. ಹೀಗೆ ಒಂದು ದಿನ ಅಂತ ಮುಂಚೇನೇ ಫಿಕ್ಸ್ ಮಾಡ್ಬಿಟ್ರೆ ಮುಷ್ಕರ ಮಾಡೋವ್ರಿಗೆ ಏನೂ ಥ್ರಿಲ್ ಇರಲ್ಲ ಅಲ್ವಾ? ಹಾಗೇನೆ ಪತ್ರಿಕೆಗಳಿಗೆ, ವಾಹಿನಿಗಳಿಗೆ ಬ್ರೇಕಿಂಗ್ ನ್ಯೂಸ್ ಇರಲ್ವಲ್ಲಾ? ಎಂದು ಘನಶ್ಯಾಮನ ಹೇಳಿದಾಗ, ಅವನ ಘನವಾದ ವಾದ ಕೇಳಿ ವೀರಪ್ಪ ನಿರುತ್ತರನಾದ.

# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**- ದಂನಆ**

- ಸಾವಿರದ ನೋಟು ಎಲ್ಲುಂಟು, ಎಲ್ಲ ನೋಟುಗಳಿಗೂ ಸಾವುಂಟು.
- ಕಾರು ಚೆನ್ನಾಗಿದ್ದರೇನು ರೋಡು ಸರಿಯಾಗಿರಬೇಕಲ್ಲ?
- ಒಳಚರಂಡಿ ಯೋಜನೆಯಲ್ಲಿ ಚರಂಡಿಗೆ ಹೋದ ಹಣ ಎಷ್ಟು?
- ಜಿಸ್ ದೇಶ್ ಮೆ ಗಂಗಾ ಬೆಹ್ತಿ ಹೈ ಉಸ್ ದೇಶ್ ಮೆ ಕುಡಿಯೋಕೆ ನೀರಿಲ್ಲ...
- ಮನಿ ಈಸ್ ನಾಟ್ ಗುಡ್ ಬಟ್ ಬೈ ಗಾಡ್ ಇಟ್ ಈಸ್ ನೊ ಲೆಸ್ ದ್ಯಾನ್ ಗಾಡ್ ಈದರ್.
- ನಿಮಗೆ ಗೊತ್ತಿರುವ ಹಾಡೊಂದನ್ನು ನೆನಪಿಸಿಕೊಳ್ಳಿ, ಅದರ ಅರ್ಥ ಏನು ಎಂದು ನಿಮ್ಮನ್ನೇ ಕೇಳಿಕೊಳ್ಳಿ, ನಿಮಗೆ ಆ ಹಾಡು ಅರ್ಥವಾಗುತ್ತಿದ್ದ ಹಾಗೆ ಆ ಹಾಡು ಸತ್ತೇ ಹೋಗುತ್ತದೆ. ಅರ್ಥ ಬಿಟ್ಟು ಕೊಡದ ಹಾಡು ಸಾಯುವುದಿಲ್ಲ.

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- ಯಶಸ್ಸಿನ ಸಮಯದಲ್ಲಿ ತಲೆ ತಗ್ಗಿರಲಿ; ಸೋಲಿನ ಸಮಯದಲ್ಲಿ ತಲೆ ಎತ್ತಿರಲಿ.
- ನಾಸ್ಟಲ್ಜಿಯ ಈಸ್ ಎ ಸೆಡಕ್ಟಿವ್ ಲಯರ್.
- ಸತ್ತ ಮೇಲೆ ನಾನು ಪುಕ್ಕಟೆ ಸಲಹೆ ನೀಡುವವರು ಇಲ್ಲದಿರುವ ಲೋಕಕ್ಕೆ ಹೋಗಲು ಬಯಸುವೆ.
- ದಕ್ಷತೆಯನ್ನು ತೋರಿಸಲು ಬೇಕಿರುವುದು ವೇಗವಲ್ಲ ಶ್ರದ್ಧೆ.
- ಇಫ್ ಥಿಂಗ್ಸ್ ಗೊ ರಾಂಗ್ ಡೋಂಟ್ ಗೊ ವಿತ್ ದೆಮ್.
- ನೀವು ಹೋಗುತ್ತಿರುವ ರಸ್ತೆಯೇ ತಪ್ಪಾಗಿದ್ದರೆ ಎಷ್ಟು ವೇಗದಲ್ಲಿ ಹೋದರೇನು ಪ್ರಯೋಜನ?
- ದೇಹವೊಂದು ಅದ್ಭುತ ಯಂತ್ರ. ಆದರೆ ಯೂಸರ್ ಮ್ಯಾನುಯಲ್ ಎಲ್ಲಿದೆ?
- ಡೋಂಟ್ ಡು ಮೆ ಎನಿ ಫೇವರ್ - ಇದೇ ನೀನು ನನಗೆ ಮಾಡಬೇಕಿರುವ ಫೇವರ್.
- ಅನೇಕ ವೇಳೆ ಸಮಸ್ಯೆಗಳಿಗೆ ಪರಿಹಾರ ಬೇಕಿರುವುದಿಲ್ಲ. ಬೇಕಿರುವುದು ಅದನ್ನು ಮೀರಿ ನಿಲ್ಲುವ ಪ್ರಬುದ್ಧತೆ.
- ದಿ ಆರ್ಟಿಸ್ಟ್ ಬಿಲಾಂಗ್ಸ್ ಟು ಹಿಸ್ ವರ್ಕ್, ನಾಟ್ ದಿ ವರ್ಕ್ ಟು ದಿ ಆರ್ಟಿಸ್ಟ್.

# ಪಂಚ್ ಪದ್ಯಗಳು

- ಎಚ್. ಡುಂಡಿರಾಜ್

## ಸಂಕ್ರಾಂತಿ

1

ಇರಬಹುದು ಬಾಳ ದಾರಿಯಲ್ಲಿ
ಅಡಿಗಡಿಗೆ ಕಲ್ಲು ಮುಳ್ಳು
ಎದುರಾಗಬಹುದು ಅಲ್ಲಲ್ಲಿ
ಅನ್ಯಾಯ, ಮೋಸ, ಸುಳ್ಳು
ನಗುನಗುತ ಎಲ್ಲ ಮರೆತು
ಹಂಚೋಣ ಬೆಲ್ಲ ಎಳ್ಳು!

2

ಹಬ್ಬ ಆಚರಿಸಿದಳು ತಾಯಿ
ರೇಷ್ಮೆ ಸೀರೆಯುಟ್ಟು
ಹೂ ಮುಡಿದು ಎಳ್ಳು ಬೀರಿ
ಮಗಳು
ಜೀನ್ಸ್ ಪ್ಯಾಂಟ್ ತೊಟ್ಟು
ಬಾಯ್ ಫ್ರೆಂಡ್ಸ್ ಜತೆ
ನಡೆದಳು ಬಾರಿಗೆ
ಗುಂಡು ಬೀರಿ!

3

ಬಹಳಷ್ಟು ಗಂಡಸರ ಹಾಗೆ
ಮಾತನಾಡುವುದಿಲ್ಲ ಈತ
ಹೆಂಡತಿಯ ಎದುರು ಎಂದೂ
ಆದರೂ ನಿನ್ನೆ ಧೈರ್ಯದಿಂದ
ಎರಡು ಒಳ್ಳೇ ಮಾತಾಡಿದ
ಎಳ್ಳು ಬೆಲ್ಲ ತಿಂದು!

4

ಸಂಕ್ರಾಂತಿ ಅಂದರೆ
ಸಣ್ ಕ್ರಾಂತಿ ಅಲ್ಲ
ಅದೊಂದು ದೊಡ್ಡ ಕ್ರಾಂತಿ
ಸೂರ್ಯನ ರಥ
ಬದಲಾಯಿಸುತ್ತದೆ ಪಥ
ಹೀಗಾಗಿ ಅದು Sun ಕ್ರಾಂತಿ!

5

ವರ್ಷದಲ್ಲಿ ಒಂದು ದಿನವಾದರೂ
ಒಳ್ಳೆ ಮಾತಾಡುತ್ತ ಎಳ್ಳು ಬೀರು
ಉಳಿದ ದಿನಗಳಲ್ಲಿ ಇದ್ದೇ ಇರುತ್ತೆ
ರಮ್ಮು ಬೀರು!

# ಕರೆಕ್ಟ್ ಚಂದ್ರಮ್ಮ

**- ಡಾ. ಶ್ಯಾಮಲಾ ರವಿಶಂಕರ್**

**ಮ**ನೆ ಕೆಲಸಕ್ಕೆ ಯಾರಾದರೂ ಸಿಕ್ಕಿದರೆ 'ಸಾಕಪ್ಪಾ' ಅಂತಿರೋ ಈ ದಿನಗಳಲ್ಲಿ ಸಿಕ್ಕಿದವರನ್ನ ಉಳಿಸ್ಕೊಳ್ಳೋ ಕಲೆನೂ ಕಲಿಯಬೇಕು ಕೆನೇ? ಯಾರ್ನಾದ್ರೂ ಹಿಡಿದ್ರೆ ಅವಳು ಎರಡೋ ಮೂರೋ ವಾರ ಕೆಲಸ ಮಾಡಿ ಪೊರಕೆ ಎಲ್ಲಿದೆ, ರಂಗೋಲಿ ಬಟ್ಲು ಎಲ್ಲಿದೆ ಎಂದು ತಿಳ್ಕೊಂಡ್ಲು ಎಂದ 'ಉಶ್ಯಪ್ಪಾ' ಅನ್ನೋ ಹೊತ್ತಿಗೆ ಊರಿಗ್ಹೋಗೋ ಕಾರಣಾನೋ, ಅಥವಾ ಗಂಡ ಹೆಂಡ್ತಿ ಜಗಳಾನೋ ಏನೋ ನೆಪ ಮಾಡ್ಕೊಂಡು ಕಳಚಿ ಕೊಂಡ್ಬಿಡ್ತಾರೆ ಅಥವಾ ವಿನಾ ಕಾರಣ ನೋಟೀಸ್ ಬರೋದೂ ಇಲ್ಲಿ, ನಮಗೆ ತಿಳಿಸೋದೂ ಇಲ್ಲ. ಇನ್ನೊಬ್ಬಳನ್ನು ಹುಡ್ಕೊವಾಗ ಅದೇನು ಸುಲಭದಲ್ಲಿದ ಮಾತು ಒಂದಿನ್ನೂರೋ, ಮುನ್ನೂರೋ ಹೆಚ್ಚು ಕೂಡ ಬೇಕಾಗುತ್ತೆ ಹೊಸ ರಿಕ್ರೂಟ್‌ಗೆ ಇಲ್ಲಾಂದರೆ, ಒಂದ ಐಟಂ ಕೆಲಸಾನಾದ್ರೂ ಕಡಿಮೆ ಮಾಡಬೇಕಾಗುತ್ತೆ. ಇವೆಲ್ಲಾ ಎಲ್ಲರ ಅನುಭವ.

ಹೀಗಿದ್ದಾಗ್ಯೂ ನಾನೊಬ್ಬಳನ್ನು ಹಿಡಿದೇ ಬಿಟ್ಟೆ! ಅವಳು ಸ್ವಲ್ಪ ವಯಸ್ಸಾದವಳು ಆರೋಗ್ಯವಂತಳೂ ಹಾಗೂ ಕೆಲಸಾನೂ ತಕ್ಕ ಮಟ್ಟಿಗೆ ಮಾಡ್ಕೊಂಡು ಹೋಗ್ತಾಳೆ. 'ಮತ್ತಿನ್ನೇನು, ನಿನ್ನ ತರಲೆ ಅಂತೀರಾ? ಇಲ್ಲೇ ಬರೋದು ನೋಡಿ ತಮಾಷೆ! ಅವಳಿಗೆ ಮಾತಿನ ಚಪಲ! ಒಂದೊಂದು ಕೆಲಸದಲ್ಲೂ ಒಂದೊಂದು ಭಂಗಿಯಲ್ಲಿ ನಿಂತು ಹರಟೆ ಶುರು ಮಾಡಿದ್ರೆ ದೇವರೆ ಗತಿ ಧೂಳು ಒರೆಸೋ ಬಟ್ಟೆ ಹಿಡಿದ ಕೈ ಸೊಂಟದ ಮೇಲೆ ಪೊರಕೆ ಹಿಡಿದ ಕೈ ವರದ ಹಸ್ತದ ಪೋಸು ಏನೋ ಹೇಳಿ ಈ ಪೋಸಿಗೆ ಮುಕ್ತಿ ಸಿಗತ್ತಾ ಅಂತ ಅಂದ್ಕೊಂಡಷ್ಟೂ ಅದು ಶಾಶ್ವತವಾಗೋ ಛಾನ್ಸುಗಳು ವ್ಯಕ್ತವಾಗುತ್ತವೆ.

ಎಷ್ಟೋ ಸಲ ಕಡಿವಾಣ ಹಾಕೋ ಪ್ರಯತ್ನ ಮಾಡ್ತಾನೇ ಇರ್ತೀನಿ ಉದಾಹರಣೆಗೆ ನೀನು ಆ ಮಲೆಯಾಳಿ ಅಮ್ಮನ ಮನೆಗೆ ಹೋಗ್ಬೇಕಾಗಿಲ್ವಾ ಈವತ್ತು ? ಎಂದೋ ಅಥವಾ ಆ ತಮಿಳು ಮಾಮಿಗೆ ಈ ದಿನ ಖಂಡಿತ ಕೋಪ ಬರತ್ತೆ, ಇನ್ನು ಹೊರಡು, ಮಾತು ನಾಳೆಗೆ ತಳ್ಳು ಎಂತಲೋ 'ಊಹೂಂ' ಇಂಥಾ ಸಣ್ಣ-ಪುಟ್ಟ ಸಿಗ್ನಲ್‌ಗಳನ್ನೆಲ್ಲಾ ಅವಳ ರಡಾರ್ ಪಿಕ್ಕೇ ಮಾಡೊಲ್ಲ.

ಒಂದೊಂದು ಸಲ ಪಾಪ ಏನೋ ಹೇಳ್ತಾ ಇದಾಳೆ, ಹೇಳ್ಕೊಳ್ಳಿ ಎಂದು ಕೇಳಿಸ್ಕೊಳ್ಳೊ ಪ್ರಯತ್ನಾನೂ ಮಾಡ್ತೀನಿ. ಅಂಥ ಸಮಯಗಳಲ್ಲೇ ನನಗೆ ಅವಳ ಮಾತಿನ ಕಂಟೆಂಟ್‌ಗಿಂತ ಅವಳ ಪರ್ಸನಾಲಿಟಿ ಮೇಲೆ ಮೋಜು ಸಿಗೋದು.

ಅವಳ ಹೆಸರು ಚಂದ್ರಮ್ಮ ಅವಳೇ ಸ್ವಯಂ ಕೃಷಿಯಿಂದ ತಂದುಕೊಂಡ ಹೆಸರು, ಅಲ್ಲಾ ಹೆಸರಿನ ಪ್ರಿಫಿಕ್ಸ್, ''ಕರೆಕ್ಟ್''. ಈ ಪೂರ್ವ ಪೀಠಿಕೆ ಅವಳಿಗೆ ನಾನಿತ್ತೆ. ಇದು ನನ್ನ ಉದಾರ ಮನೋಭಾವ ಹಲವಾರು ದಶಕಗಳೇ ಆದರೂ ಇನ್ನೂ ನಾಮಕರಣಗಳ ಉದಾರ ವಿತರಣೆ ಬಿಟ್ಟಿಲ್ವಾ ಎಂದು ಕೇಳಬೇಡಿ. ಆ ಕಾಲದಲ್ಲಿ ಒಬ್ಬೊಬ್ಬರಿಗೂ ಒಂದೊಂದು ಹೆಸರು ಕೊಟ್ಟು ಅದಕ್ಕಿಂತ ಇನ್ನೂ ಸಮಂಜಸವಾದ ಹೆಸರು ಹೊಳೆದಾಕ್ಷಣ, ಹಳೇ ಹೆಸರಿಗೆ 'ಕೊಕ್'

ಕೊಡುತ್ತಿದ್ದೆವು. ಇದು ವಾಚ್ ದಿ ಹಾರ್ಡ್ ಅಂದ ಹಾಗೆ, ಇಷ್ಟಕ್ಕೂ ಕೊಟ್ಟವರನ್ನು ಪ್ರಚೋದಿಸಿದ್ದು ಇಸಕೊಂಡವರೇ ಅಲ್ಲವೇ? ಇರಲಿ ಈಗ ನಮ್ಮ 'ಕರೆಕ್ಟ್ ಚಂದ್ರಮ್ಮನ ವಿಷಯ ಪ್ರಸ್ತುತಿ ನಾನು ಏನೇ ಹೇಳಲಿ, ಅವಳ ಅಪ್ರೂವಲ್ ತೋರಿಸ್ತಾಳೆ. 'ಕರೆಕ್ಟಮ್ಮಾ, ನೀ ಶೊಲ್ಲರದಿ' ಅಂತಾಳೆ ಹಾಗಂತ ಅದರರ್ಥ ಅವಳ ಸಮ್ಮತಿ ಎಂದಲ್ಲ! ಅವಳು ನಲವತ್ತು ವರ್ಷಗಳಿಂದ ಬೆಂಗಳೂರಿನಲ್ಲಿದ್ದರೂ ಕನ್ನಡ ಕಲಿತಿಲ್ಲ ಎಂಬುದನ್ನ ಒಂದು ದೊಡ್ಡ ಸಾಧನೆಯಂತೆ ಹೇಳಿಕೊಳ್ಳುತ್ತಾಳೆ. ನಾನಾದರೋ ಶುದ್ಧ ಕನ್ನಡಿಗಳಲ್ಲವೇ? ಅದಕ್ಕಾಗಿ ಅವಳ ಭಾಷೆಯನ್ನು ಕಲಿತು ಅವಳೊಂದಿಗೆ ಮಾತಾಡುತ್ತೇನೆ. ಇದೆಲ್ಲಾ ಕರೆಕ್ಟೇ ತಾನೇ?

ಅವಳ ಬಾಯಿ ಬೊಂಬಾಯಿ ಅಥವಾ ಮುಂಬಾಯಿ! ಎಲ್ಲಾದಕ್ಕೂ ಏನಾದರೂ ಒಂದು ಮಾತು ಒದರಲೇ ಬೇಕು. ನಾನು ನೀನು ಹೀಗೆ ಮಾತಾಡ್ತಾ ಇದ್ದರೆ ಅಯ್ಯ(ರ್)ಗೆ (ನನ್ನ ಪತಿ ದೇವರಿಗೆ) ಸರಿ ಬೀಳಲ್ಲ.

ಕ.ಚಂ. : ಕರೆಕ್ಟಮ್ಮಾ ನೀ ಶೊಲ್ಲರದಿ ಅಂದ ಹಾಗೆ ಅವರೂ ತಮಿಳು ಕಲಿತಿದ್ರೆ , ಅವರಿಗೆ ಬೇಜಾರಾಗ್ತಿರಲಿಲ್ಲ!

ನಾನು : ಅವಂಗ್ಯಾಕೆ ತಮಿಳು ಬರಬೇಕು? ನಾವೇನು ನಿಮ್ಮೂರಲ್ಲಿ ಇರಬೇಕಾ ಅಥವಾ ಅದೇನು ನಮ್ಮ ಮಾತೃ ಭಾಷೆನಾ?

ಕ.ಚಂ. : ಕರೆಕ್ಟಮ್ಮಾ ನೀ ಶೊಲ್ಲರದಿ ವೇಂಡ, ವೇಂಡ, ಅಯ್ಯರ್ಕು ತಮಿಳು ವೇಂಡ.

(ಡಿಕ್ಲೇರ್ಡ್)

ನಾನು : ಬೇರೆ ಮನೆಯವರು ನಿನ್ನನ್ನ ಬೈಕೊಳ್ತಾ ನನ್ನನ್ನೂ ಬೈಕೊಳ್ಳೊ ಹಾಗೆ ಮಾಡ್ಬೇಡ.

ಕ.ಚಂ. : ಕರೆಕ್ಟಮ್ಮಾ ನೀ ಶೊಲ್ಲರದಿ ಅಂದರೆ, ಆಯಮ್ಮ ಏಳ್ರದೇ ಲೇಟು ನಾನ್ ಶೀಘ್ರಮಾ ಪೋಯಿ ಎನ್ನ ಮಾಡೆ ಪಣ್ರದಿ?

ನಾನು : ಒ.ಎಮ್.ಜಿ. ನಾನು ಸಂಗೀತ ಕೇಳ್ತಾ ಇದ್ದೀನಿ ಹಾಡೋವ್ರ ಹೆಸರನ್ನಾದ್ರೂ ಕೇಳ್ಸಿ ಕೊಳ್ಳೋಣಾ ಅಂದ್ರೆ, ಅದೇ ಟೈಂಗೆ ಸರಿಯಾಗಿ ಮಾತಾಡ್ತೀಯಲ್ಲಾ ನೀನು?

ಕ.ಚಂ. : ಕರೆಕ್ಟಮ್ಮಾ ನೀ.... ಪೇರು ಎನ್ನಾಮ್ಮಾ, ಯಾರಾನಾ ಇರಕಟುಂ ಈ ಕಾಲದಲ್ಲಿ ಯಾರು ಹೇಗಾದ್ರೂ ಹಾಡಬಹುದು ರೇಡಿಯೊ ಟಿ.ವಿ.ಗಳಲ್ಲಿ ನಮ್ಮೂರಿನಲ್ಲಿ ಒಬ್ಬ ಹೆಂಗ್ಸು ಹುಚ್ಚುಚ್ಚಾಗಿ ಕಿರಚಾಡ್ತಿದ್ದವಳು, ಈಗ ರೇಡಿಯೊ ಆರ್ಟಿಸ್ಟೋ ಪೇಯಿಂಟರೋ ಏನೋ ಅಂತೆ!

(ಎಲ್ಲಾ ತಮಿಳಿನಲ್ಲಿ)

ನಾನು : ಪೇಯಿಂಟರ್ ಇರಬಹುದು!

(ಅಂದವಳು ದೇವರ ಮೊರೆ ಹೊಕ್ಕೆ ಕನ್ನಡದಲ್ಲೇ ಹಾಡೋಕೆ ಶುರು ಮಾಡಿದೆ, ಇವಳ

ಬಾಯಿ ಬಿಡಲಾಗದು ಎಂಬ ಶುಷ್ಕ ಪ್ರಯತ್ನದಲ್ಲಿ)

ಕ.ಚಂ. : (ಅಲ್ಲಿಗೂ ಬಿಡದೆ) ಕರೆಕ್ಟಮ್ಮಾ........ ನೀ ಪಾರ್ ಎವಳ ನಲ್ಲ ಪಾಡರೆ ನೀ ಪೋಯಿ ರೇಡಿಯೋಲಿ ಪಾಡಣಂ....

ನಾನು : ನೀನೇ ಈಗಷ್ಟೇ ಹೇಳಿದ್ಯಲ್ಲಾ ಯಾರೋ ಹುಚ್ಚುಚ್ಚಾಗಿ ಅಂತ, ಹಾಗೇ ನನ್ನನ್ನೂ......

ಕ.ಚಂ. : ಕರೆಕ್ಟಮ್ಮಾ..... ಅನ್ನಾಕ........ ಇಲ್ಲೆ............ ಇಲ್ಲೆ..... (ತಿದ್ದಿಕೊಳ್ಳೊ ಪ್ರಯತ್ನ.....)

ಮತ್ತೊಂದು ದಿನ ಅವಳ ಮಗಳನ್ನು ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿ ಸಾಲಕ್ಕೆ ಅರ್ಜಿ.

ನಾನು : ಎಲ್ಲಾ ಸಣ್ಣ ಸಣ್ಣ ಮುಜುಗರಗಳಿಗೂ ನೀವೆಲ್ಲ ಯಾಕೆ ಖಾಸಗಿ ಆಸ್ಪತ್ರೆಗಳಿಗೆ ಹೋಗ್ತೀರಾ? ಅವರು ನಿಮ್ಮನ್ನು ಸೇರಿಸಿಕೊಂಡು ಹಣ ಸುಲೀತಾರೆ ಅಂತ ಅಳ್ತೀರ ಅದೇ ಈ ಪಕ್ಕದಲ್ಲಿರುವ ಡಾಕ್ಟರ್‌ಗಳಿಗೆ ತೋರಿಸಿದ್ರೆ ನಿಮ್ಮ ಲೆವೆಲ್‌ಗೆ ಕಡಿಮೆ ಅಲ್ವೇ.

ಕ.ಚಂ. : ಕರೆಕ್ಟಮ್ಮಾ.... ನಮಗೆಲ್ಲಾ ಇವೆಲ್ಲಾ ತಿಳಿಯೋದೇ ಇಲ್ಲ. ಈಗ ದುಡ್ಡು ಕೊಡಮ್ಮಾ....

ನಾನು : ಸರಿ, ನನಗೆ ನನ್ನ ಹಣ ಹೇಗೆ ವಾಪಸ್ ಮಾಡ್ತೀಯಾ?

ಕ.ಚಂ. : ಕರೆಕ್ಟಾಗಿ ಹೇಳ್ತೀನಿ ತಿಂಗಳ ತಿಂಗಳಿಗೆ 500ರೂ ಹಿಡ್ಕೊತಾ ಹೋಗಮ್ಮಾ...

ನಾನು : ಇದು ತೀರೋದು ಯಾವ ಕಾಲಕ್ಕೆ? ಅಷ್ಟರಲ್ಲಿ ಇನ್ನಾವುದು ನೆಪ ಹೇಳಿ ಇನ್ನೊಂದು ಸಾಲ ರೆಡಿ!

ಕ.ಚಂ. : ಕರೆಕ್ಟಾಗಿ ಹೇಳ್ದೆಯಮ್ಮಾ! ನನ್ನ ಬಾಲ್ಯದಲ್ಲಿ ಆಟ ಆಡ್ಕೋತಾ ಇದ್ದವಳೊಬ್ಬಳ ಬೀಗರು ಸತ್ತು ಹೋದರಂತೆ ತಿರು ನೆಲ್‌ವೇಲಿಗೆ ಬೇರೆ ಹೋಗಬೇಕು......

ನಾನು : ಯಾಕೆ ನೀನು ಹೋಗದೆ ಅವರ ಸ್ವರ್ಗಾರೋಹಣ ನಡ್ಯೋಲ್ವಾ? ಖರ್ಚು, ಸಾಲ, ಸೂಲ ಮಾಡಿಯಾದ್ರೂ....

ಕ.ಚಂ. : ಕರೆಕ್ಟಮ್ಮಾ ಶೊನ್ನೆಮ್ಮಾ ಆದ್ರೂ ಈಗ ದುಡ್ಡು ಬೇಕಲ್ಲಾ ಅಂತೂ ಇವಳ ಕರೆಕ್ಟ್‌ನೆಸ್ಸಿನಿಂದ ಪಾರಾಗಲು ಹಣತೆತ್ತು ಮುಕ್ತಳಾದೆ.

ಯಾರೊ ಬಾಗಿಲು ತಟ್ಟಿದ್ರು, ಹೋಗಿ ನೋಡಮ್ಮಾ ನನ್ನ ಮಗಳೇ ಇರಬೇಕು' ಅಂದ್ರೆ 'ಕರೆಕ್ಟಮ್ಮಾ' ಎಂದು ಎದ್ದವಳು ಹೋಗಿ ಕರೆಕ್ಟಾಗಿ ಮೂರು ವಾರ ಆಯಿತು. ಅಂದು ಅವಳು ಕರೆಕ್ಟಾಗಿ ಬಂದು ಬಿಟ್ಟಳು ನಾನು ಅವಳಿಗೆ ಈ ಪ್ರಿಫಿಕ್ಸ್ ಅನ್ನು ಕೊಟ್ಟಿದ್ದೇನೆ ಎಂದು ಬೀಗಿದೆ. ಅದಕ್ಕೂ ಕೂಡ ಅವಳು 'ಕರೆಕ್ಟಮ್ಮಾ' ಎಂದು ಅಟೆಸ್ಟೇಷನ್ ಕೂಡ ಕೊಟ್ಟಳು.

# ಸ್ಕೋರ್ ಏನೂ ಸಾರ್?

**- ಸಿ.ಆರ್. ಸತ್ಯ**

**ನ**ಮ್ಮ ಬಡಾವಣೆ ಹಿರಿಯ ನಾಗರೀಕರ ಕ್ಲಬ್‌ನಲ್ಲಿ ಇತ್ತೀಚೆಗೆ ನಡೆದ ಒಂದು ಕಲಾಪದ ವರದಿಯನ್ನು ಓದುಗರಿಗೆ ಒಪ್ಪಿಸ್ತಿದೀನಿ :

''ಓಹೋಹೋ! ಬನ್ನಿ, ಪ್ರಹ್ಲಾದ ರಾವ್! ಏನು ನಿಮ್ಮ ಸ್ಕೋರ್ ಇವತ್ತು?''

''ಸೊನ್ನೆ ಕಣ್ರಪ್ಪ, ಸೊನ್ನೆ. ಮೈಯ್ಯಿ ಕೈಯ್ಯಿಗಳಿಗೆ ನೋವು ಬಂತು ಅಷ್ಟೆ! ನಿಮ್ಮದು?''

''ನಂದೂ ಅದೇ ಗೋಳೇ! ಒಂದು ಗೋಲೂ ಹೊಡೆಯೋಕ್ಕೆ ಆಗಿಲ್ಲಾ ನೋಡಿ. ನಿಮಗಾದರೂ ಕೈಗಳು ಗಟ್ಟಿಗಿವೆ. ನನಗೋ ಅರ್ಥರಿಟಿಸ್. ಆದ್ರೂ, ನಮ್ಮ ಆಚಾರರೇ ವಾಸಿ.

''ಏನಂತೀರ ಆಚಾರರೇ? ನಿಮ್ಮದೇನು ಸ್ಕೋರು?''

''ಮಧ್ಯಾಹ್ನದಿಂದ ಪ್ರಯತ್ನ ಮಾಡೀ ಮಾಡೀ ಒಂದು ಗೋಲು ಹೊಡೆದೆ ಮೂರ್ತಿ. ನಾಟ್ ಬ್ಯಾಡ್ ಅಲ್ಲವೇ?''

''ನಾಟ್ ಬ್ಯಾಡ್ ಏನು? ವೆರಿ ಗುಡ್ಡೇ ಆಚಾರರೇ! ನೀವು ಚಿಕ್ಕ ವಯಸ್ಸಿನಲ್ಲಿ ಟೆನ್ನಿಸ್ ಬಾಲ್ ಕ್ರಿಕೆಟ್ ಆಡ್ತಾ ಇದ್ದಾಗ ಒಳ್ಳೇ ಫೀಲ್ಡರ್ ಅಂತ ಅನ್ನಿಸ್ಕೊಂಡಿದ್ದಿರಿ. ಅದಕ್ಕೇ ನಿಮಗೆ ಗೋಲ್ ಆಯ್ತು.''

''ಏನೋ! ಅದ್ಯಾಕೆ ನಮ್ಮ ವೆಂಕಯ್ಯನವರು ಮೂತಿ ಸಿಂಡರಿಸಿಕೊಂಡು ಹೀಗೆ ಕೂತಿದಾರೆ? ಏನಾಯ್ತು ವೆಂಕಯ್ಯ? ಅಯ್ಯೋ! ನಿಮ್ಮ ದವಡೆ ಬೇರೆ ಊದಿಕೊಂಡ ಹಾಗಿದೆ..?''

''ಏನು ಹೇಳಲಿ? ಗೋಲ್ ಹಾಕೋಕ್ಕೆ ಎರಡು ಕೈಗಳೂ ಬೇಕಲ್ಲವೆ? ಯಾವುದೋ ಜ್ಞಾನದಲ್ಲಿ ಇವತ್ತು ಒಂದು ಕೈನಲ್ಲೇ ಗೋಲ್ ಹೊಡಿಯೋಕ್ಕೆ ಹೋದೆ. ಮುಂದೆ ಕೂತಿದ್ದ ನನ್ನ ಹೆಂಡತಿ ಕಪಾಲಕ್ಕೆ ನನ್ನ ಕೈ ಪಟಾರ್ ಅಂತ ಹೊಡೀತು. ಅವಳು ತಿರುಗಿಸಿ ಒಂದು ಕೊಟ್ಟಳು. ನಂದು ಡೆಂಚರ್ಸ್ ಕಳಚಿಕೊಂಡು ದವಡೇಲಿ ಹೊಕ್ತು. ಈ ಗತಿಗೆ ಬಂದೆ. ಗೋಲ್ ಇವತ್ತು ಮುಂಡಾಮೋಚ್ತು ಅಂತ ಅಂದ್ಕೊಂಡು ಕೂತ್ಕೊಂಡಿದೀನಿ. ಸಾಕೇ, ಡೀಟೈಲ್ಸು?''

''ಅಯ್ಯೋ ಪಾಪವೇ! ನೀವು ರಿಟೈರ್ ಆಗೋಕ್ಕೆ ಮುಂಚೆ ಆಫೀಸ್‌ನಲ್ಲಿ ದಿನಕ್ಕೆ ಐವತ್ತು ಅರವತ್ತು ಗೋಲ್ಗಳನ್ನ ಹೊಡೀತಿದ್ರಿ, ಯಾಕೆ ಈ ಗತಿ ಬಂತು? ಅಲ್ಲವೆ ಪ್ರಹ್ಲಾದ್ ರಾವ್?''

''ನಿಜ, ನಿಜ. ಆಫೀಸ್‌ನಲ್ಲಿ ಬೇರೇ ಏನೂ ಕೆಲಸವೂ ಇರಲಿಲ್ಲ ಬಿಡಿ. ಆದರೂ ನೋಡಿ, ಚಿಕ್ಕ ವಯಸ್ಸಿನಲ್ಲಿ ಸಾಧಾರಣವಾಗಿ ನಾವು ಏನು ಮಾಡಿದ್ರೂ, ಗುರಿ ತಪ್ಪಲ್ಲ. ಆರೋಗ್ಯ ಚೆನ್ನಾಗಿರುತ್ತೆ. ಯಾಕೆ, ನಾನು ಬಿಎಸ್‌ಸಿ ಓದ್ತಿದ್ದಾಗ, ಮ್ಯಾತ್ಸ್ ಮತ್ತು ಕೆಮಿಸ್ಟ್ರಿ ಟೀಚರ್ಸ್ ಮೇಲೆ, ಫ್ರಂಚ್ ಬೆಂಚ್ ಹುಡಿಗೀರ ಮೇಲೆ ಎಸೀತಿದ್ದ ಒಂದು ಚಾಕ್ ಪೀಸೂ

ಗುರಿ ತಪ್ಪಿರಲಿಲ್ಲ. ಅದೇ ನೋಡಿ, ಮೊನ್ನೆ ನಮ್ಮ ಮನೇಲೇ ಇರೋ ಮಾವಿನ ಮರಕ್ಕೆ ಕಾಯಿ ಉದುರಿಸೋದಕ್ಕೆ ಒಂದು ಕಲ್ಲು ಹೊಡೆದೆ. ಆ ಕಲ್ಲು ಕಾಯಿಗೆ ತಾಕೋ ಬದಲು – ''

''ಹೋಗಲಿ ಬಿಡಿ. ನೀವು ಹೇಳೋ ರೀತಿ  ನೋಡಿದ್ರೆ, ಆ ಕಲ್ಲು ನಿಮ್ಮ ತಲೇಗೋ ಅಥವಾ ನಿಮ್ಮ ಮನೆಯ ಕೆಲಸದವಳ ತಲೇಗೋ ಹೊಡೆದಿರಬೇಕು. ಅಂದ ಹಾಗೆ ನಮ್ಮ ರೋಟರಿ ರಂಗಯ್ಯನವರು ಬರ್ತಾ ಇದಾರೆ. ಬನ್ನಿ ರಂಗಯ್ಯ, ಕೂತ್ಕೊಳ್ಳಿ , ಕೂತ್ಕೊಳ್ಳಿ. ನಮಗೇನಾದರೂ ಒಳ್ಳೇ ಸುದ್ದಿ ಉಂಟೇನೋ? ಎಷ್ಟು ಸ್ಕೋರ್ ಮಾಡಿದ್ರೀ?''

''ಅದರ ವಿಷಯ ಎತ್ತಬೇಡಿ ಮೂರ್ತಿ. ನಮ್ಮ ಅಂಗೈಗಳನ್ನ ನೋಡಿ. ಎರಡೂ ಹೇಗೆ ಕೆಂಪಗೆ ಊದಿಕೊಂಡಿವೆ! ಇದು ಬೆಳಗಿನಿಂದ ಸ್ಕೋರ್ ಮಾಡೋಕ್ಕೆ ನಾನು ಮಾಡ್ತಾ ಇದ್ದ ಪ್ರಯತ್ನದ ಫಲ! ಮಧ್ಯಾಹ್ನದ ಹೊತ್ತಿಗೆ ನನ್ನ ಹೆಂಡ್ತಿ–ಅಲ್ರೀ, ನಿಮ್ಮ ಸೋಡಾ ಗ್ಲಾಸ್ ಹಾಕಿಕೊಳ್ಳದೇ ಸ್ಕೋರ್ ಮಾಡೊಕ್ಕೆ ನಿಮ್ಮ ಕೈಲಿ ಆಗುತ್ತೇನ್ರಿ? ಕನ್ನಡಕ ಹಾಕ್ಕೊಂಡು ಮಾಡಿ'' – ಅಂತ ಅಂದಳು.

''ಆಮೇಲೇ..?''

''ಕನ್ನಡಕ ಹಾಕ್ಕೊಂಡು ಒಂದು ಗೋಲ್‌ಗೆ ಜೋರಾಗೇ ಪ್ರಯತ್ನ ಪಟ್ಟೆ. ಹಾಳು ಕನ್ನಡಕ ಮೂಗಿನ ತುದಿಯಿಂದ ಜಾರಿಬಿದ್ದು ಅದರ ಮೇಲೆ ನಾನು ಕಾಲಿಟ್ಟು, ಒಂದು ಕಡೆ ಗಾಜು ಮುರೀತು..''

''ಗೋಲೂ?''

''ಯಾವ ಗೋಲೂ?''

''ಹೋಗ್ಲಿ ಬಿಡಿ. ಜಂಟಲ್‌ಮೆನ್, ನಾನು ನಿಮಗೆಲ್ಲರಿಗೂ ಒಂದು ಸಲಹೆ ಕೊಡ್ತೀನಿ. ನಮ್ಗೆಲ್ಲರಿಗೂ ವಯಸ್ಸಾಗಿದೆ. ಯಾರಿಗೂ ಗೋಲ್ ಹಾಕಿ ಸ್ಕೋರ್ ಮಾಡೊಕ್ಕೆ ಆಗ್ತಿಲ್ಲ. ತಲೆ, ಕೈಯ್ಯಿ, ಕಾಲೂ, ಡೆಂಚರ್ಸ್, ಕನ್ನಡಕ ಇವನ್ನೆಲ್ಲಾ ಜಖಂ ಮಾಡಿಕೊಳ್ಳೋ ಬದಲು ಈ ಇಳೀ ವಯಸ್ಸಿನಲ್ಲಿ ಇಂತಹ ಗೋಲೂ ಸ್ಕೋರೂ ಅನ್ನೋ ಆಟಗಳನ್ನೆಲ್ಲಾ ಬಿಟ್ಟು ಹಾಯಾಗಿ ಇರೋಣ.''

''ಅದು ಹೇಗೆ ಸಾಧ್ಯ ಮೂರ್ತಿ? ಈ ಚಿಕನ್ ಗುನ್ಯಾ, ಡೆಂಗೇ ಕಾಲದಲ್ಲಿ ದರಿದ್ರ ಸೊಳ್ಳೆಗಳನ್ನಾ ಇನ್ನು ಹೇಗೆ ಹೊಡೀತೀರಿ?''

''ಅದಕ್ಕೊಂದು ಐಡಿಯಾ ಮಾಡಿದೀನಿ ಜಂಟಲ್‌ಮೆನ್. ನಮ್ಮ ಕ್ಲಬ್ ಬಾಯ್‌ಗೆ ಹೇಳಿ ಈ ನಮ್ಮ ಕಾನ್ಫರೆನ್ಸ್ ಹಾಲಿನ ಮೂಲೇನಲ್ಲಿ ಒಂದು ದೊಡ್ಡ ಸೊಳ್ಳೆ ಪರದೆ ಕಟ್ಟಿಸಿ ಅದರ ಒಳಗೆ ನಾವು ಕೂತ್ಕೋಳ್ಳೋ ಹಾಗೆ ವೆನ್ಯೂನ ಶಿಫ್ಟ್ ಮಾಡೋಣಾ. ಏನಂತೀರಿ? ಮನೇಲಿ ಇದ್ದರೆ ಇದೂ ಆಗಲ್ಲ. ಸೊಳ್ಳೆ ಕಾಟ ಅಥವಾ ಹೆಂಡ್ತೀ ಕಾಟ ಇದ್ದೇ ಇರುತ್ತೆ. ಓಕೇನಾ? ಗುಡ್. ನಂಜುಂಡಾ, ಎಲ್ಲರಿಗೂ ಕಾಫೀ ತೊಗೊಂಡು ಬಾ ಮರಿ – ಶುಗರ್ ಲೆಸ್ಸು ! ಅಂದ ಹಾಗೆ, ನಾಳೆ ಮಾರ್ಕೆಟ್ ಕಡೆ ಹೋಗಿ ದೊಡ್ಡ ಸೊಳ್ಳೇ ಪರದೇಗೆ ಎಷ್ಟು ಬೆಲೆ ಆಗುತ್ತೇ ಅಂತ ವಿಚಾರಿಸಿಕೊಂಡು ಬಾಪ್ಪಾ ! ಗುಡ್ ಬಾಯ್!!''

❁

# ನಾನಾ ರೂಪದ ನಗೆಯಾನಂದ

**- ಬೇಲೂರು ರಾಮಮೂರ್ತಿ**

**ನಾ**ನಾ ರೂಪದ ಮಗುವು ಚಂದ. ನಾನಾ ರೂಪದ ನಗುವು ಚಂದ. ಮಗುವಿನ ನಗುವಿನಿಂದ ಆನಂದ. ನಗುವಿನ ಮುದದಿಂದ ಆನಂದ. ನಗುವಿಗೆ ಇಂಥಾ ಸಂದರ್ಭಗಳು ಅಂತಿಲ್ಲ. ಎಲ್ಲಿ ಸ್ವಚ್ಛಂದ ಮನಸ್ಸು ಇರುತ್ತದೋ, ಎಲ್ಲಿ ಸ್ನೇಹಭಾವ ಇರುತ್ತದೋ, ಎಲ್ಲಿ ಆತ್ಮೀಯತೆ ಇರುತ್ತದೋ, ಎಲ್ಲಿ ಅನುರಾಗ ಇರುತ್ತದೋ, ಎಲ್ಲಿ ಸ್ವಲ್ಪ ಚೇಷ್ಟೆ ಇರುತ್ತದೋ, ಎಲ್ಲಿ ತುಸುವೇ ಕಾಲೆಳೆಯುವ ಬುದ್ಧಿ ಇರುತ್ತದೋ ಅಲ್ಲೆಲ್ಲ ನಗು ಉಕ್ಕಿ ಹರಿಯುತ್ತದೆ. ಅಂಥಾ ಕೆಲವು ಸಂದರ್ಭಗಳನ್ನು ಓದಿ ನೋಡಿ.

## ಮದುವೆ ಲೆಕ್ಕಾಚಾರ

ಸುಂದ್ರು ಬಹಳ ಲೆಕ್ಕಾಚಾರ ಹಾಕ್ತಿರೋನ ಹಾಗೆ ಅಭಿನಯಿಸ್ತಿದಾನೆ. ಇನ್ನೊಂದು ಕಡೆಯಿಂದ ಬಹಳ ದುಃಖದಲ್ಲಿದ್ದ ರಾಜು ಬರ್ತಾನೆ. ಸುಂದ್ರು ಅವನನ್ನೇ ವಿಚಿತ್ರವಾಗಿ ನೋಡ್ತಾನೆ.

ಸುಂದ್ರು ಯಾಕೋ ಹೀಗಿದೀಯ – ಮುಂಡೇದು ಸುಟ್ಟ ಬದನೇಕಾಯಿ ಅಪರಾವತಾರ.

ರಾಜು ಒಂದ್ ಮಾತು ಹೇಳ್ತೀನಿ, ಈ ಪ್ರಪಂಚದಲ್ಲಿ ಗಂಡಸ್ರಾಗಿ ಹುಟ್ಲೇಬಾರ್ದು

ಸುಂದ್ರು ಹುಟ್ಟಾಯ್ತಲ್ಲ, ಮುಂದಕ್ಕೆ ಹೇಳು.

ರಾಜು ಅಲ್ಲ, ಒಂದು ಮದುವೆ ಮಾಡ್ಕೊತೀನಿ ಅಂದ್ರೆ ಅದಕ್ಕೆ ನೂರೆಂಟು ವಿಘ್ನ.

ಸುಂದ್ರು ಓ. ಇದಾ ಸಮಾಚಾರ, ನಿನ್ದು ಲವ್ ಮ್ಯಾರೇಜಾ.

ರಾಜು ಹೌದು, ನಾನೂ ಸುನಂದಾನೂ ತುಂಬಾ ಇಷ್ಟಪಡ್ತಿದೀವಿ, ಬೇಗ ಮದುವೆ ಮಾಡ್ಕೊಬೇಕು ಅಂತನೂ ಅಂದ್ಕೊಂಡಿದೀವಿ ಅದಕ್ಕೆ ನಮ್ಮನೆಯವರೂ ಒಪ್ತಿಲ್ಲ, ಅವಳ ಮನೆಯವರೂ ಒಪ್ತಿಲ್ಲ.

ಸುಂದ್ರು ಹಾಗಾದ್ರೆ ಓಡಿ ಹೋಗಿ ಮದುವೆ ಆಗಿಬಿಡು, ಆಗ ಯಾರೂ ಏನೂ ಮಾಡೋಕಾಗಲ್ಲ.

ರಾಜು ಹಾಗೆಲ್ಲ ಆಗೋಲ್ಲಯ್ಯ, ಮನೆಯವರನ್ನೆಲ್ಲ ಒಪ್ಪಿಸಿಯೇ ಮದುವೆಯಾಗೋಣ ಅಂತ ಇಬ್ರೂ ಅಂದ್ಕೊಂಡಿದೀವಿ, ದರಿದ್ರದವರು ಎಲ್ರೂ ಅಡ್ಡ ಬರ್ತಿದಾರೆ.

ಸುಂದ್ರು ಅಲ್ಲಯ್ಯ, ನೀವಿಬ್ರೂ ಪ್ರೀತಿಸ್ತಿರೋ ವಿಚಾರ ಗೊತ್ತಿದ್ರೂ ನಿಮ್ಮ ಮದುವೆಗೆ ಅಡ್ಡ ಬರ್ತಿದಾರೆ ಅಂದ್ರೆ ಅದು ಶುದ್ಧ ತಪ್ಪು.

ರಾಜು ಹೇಳಿದೀವಯ್ಯ ಆದ್ರೂ ನಾವಿಬ್ರೂ ಸುಖವಾಗಿರೋದು, ಅವರಿಗೆ ಬೇಕಿಲ್ಲ. ಶನಿಗಳ ಹಾಗೆ ಕಾಡ್ತಾರೆ.

ಸುಂದ್ರು ಅದ್ಸರಿ ನಿನ್ನ ಮದುವೆಗೆ ಅಡ್ಡಬರ್ತಿರೋರು ನಿಮ್ಮಪ್ಪ ಅಮ್ಮನಾ, ಅಥವಾ ಅವರಪ್ಪ ಅಮ್ಮನಾ.

ರಾಜು ಅವರ್‍ಯಾರೂ ಅಲ್ಲಯ್ಯ.

ಸುಂದ್ರು ಮತ್ತಿನ್ಯಾರಯ್ಯ.

ರಾಜು ಈ ಮದುವೆಗೆ ನನ್ನ ಹೆಂಡ್ತಿನೂ ಒಪ್ತಿಲ್ಲ, ಸುನಂದಳ ಗಂಡನೂ ಒಪ್ತಿಲ್ಲ.

****

## ಕೂಸಿಗೆ ಮುನ್ನ

ಚಂದ್ರು, ಬೇಗ ಬೇಗ ಬರ್ತಿರಬೇಕಾದ್ರೆ ಅವನ ಹಿಂದೆ ನಾಗ ಓಡಿಬರ್ತಾನೆ.

ನಾಗ ಸಾರ್, ಸಾರ್, ನೀವು ಪ್ರೆಸಿಡೆನ್ಸಿ ಸ್ಕೂಲ್ ಛೇರ್‌ಮನ್ ಅಲ್ವಾ.

ಚಂದ್ರು, ಹೌದು ಏನಾಗಬೇಕಿತ್ತು.

ನಾಗ ಎಲ್‌ಕೆಜಿ ಗೆ ಮಗುನ ಸೇರಿಸಬೇಕಾದ್ರೆ, ಎಷ್ಟಾಗುತ್ತೆ ಸರ್.

ಚಂದ್ರು, ಮೊದಲು ಒಂದು ಲಕ್ಷ ಡೊನೇಷನ್ ಕೊಡಬೇಕು ಆಮೇಲೆ ತಿಂಗಳಿಗೆ ಹತ್ತು ಸಾವಿರ ರೂಪಾಯಿನಂತೆ ಅಷ್ಟೂ ಹಣವನ್ನು ಒಟ್ಟಿಗೇ ಕಟ್ಟಿಬಿಡಬೇಕು.

ನಾಗ ಅಬ್ಬಾ ಅಷ್ಟೊಂದಾ, ಅಂದ್ರೆ ಎರಡು ಲಕ್ಷ ಇಪ್ಪತ್ತು ಸಾವಿರ ಆಯ್ತಲ್ಲ ಸರ್. ಸ್ವಲ್ಪ ಕಡಿಮೆ ಮಾಡ್ಕೊಳೋಕಾಗುತ್ತಾ.

ಚಂದ್ರು, ಹಾಗೆಲ್ಲ ಕಡಿಮೆ ಮಾಡೋಕಾಗಲ್ಲ. ನಮ್ಮಲ್ಲಿ ಎಲ್ರಿಗೂ ಒಂದೇ ರೂಲ್ಸು. ಆದ್ರೂ ನೀವು ಮಗೂನ ಕರ್‍ಕೊಂಡು ಬನ್ನಿ ಆಮೇಲೆ ನೋಡೋಣ.

ನಾಗ ಅಲ್ಲ ಸಾರ್ ಎಷ್ಟು ಕಡಿಮೆ ಮಾಡ್ತೀನೀಂತ ಹೇಳಿಬಿಟ್ರೆ ನಂಗೆ ದುಡ್ಡು ಅಡ್ಜಸ್ಟ್ ಮಾಡ್ಕೊಳೋಕೆ ಸರಿಹೋಗುತ್ತೆ.

ಚಂದ್ರು, ಮೊದಲು ಮಗು ಕರ್‍ಕೊಂಡು ಬನ್ರೀ, ಫಾರಂ ಫಿಲಪ್ ಮಾಡಿ.

ನಾಗ ಆದ್ರೂನೂ ನೀವು ಈಗಲೇ ಹೇಳಿದ್ರೆ ಚೆನ್ನಾಗಿತ್ತು.

ಚಂದ್ರು, ಇದೊಳ್ಳೆ ಕಥೆ ಆಯ್ತಲ್ಲ, ಈಗ ಸೀಟ್ ಬೇಕಾಗಿರೋದು ಯಾರಿಗೆ ನಿಮ್ಮ ಮಗೂಗೆ ತಾನೇ.

ನಾಗ ಅಯ್ಯೋ ಇಲ್ಲ ಸಾರ್, ನನಗೆ ಇನ್ನೂ ಮಗು ಆಗಿಲ್ಲ.

ಚಂದ್ರು, ಎಂಥದ್ರೀ ದರಿದ್ರ, ಕೂಸು ಹುಟ್ಟೋಕೆ ಮುಂಚೆ ಕುಲಾವಿ ಹೊಲಿಸಿದ್ರು ಅನ್ನೋ ಹಾಗೆ ಇನ್ನೂ ಮಗೂನೇ ಆಗಿಲ್ಲ ಆಗ್ಲೆ ನಿಮ್ಮ ಮಗೂಗೆ ಕೊಡೋ ಸೀಟಿಗೆ ನಾನು ಎಷ್ಟು ಕಡಿಮೆ ಮಾಡ್ಕೊತೀನಿ ಅಂತ ಹೇಳ್ಬೇಕಾ. ಹೋಗ್ರೀ ಹೋಗ್ರೀ.

ನಾಗ ಏನೇ ಆದ್ರೂ ಕಮಿಟ್‌ಮೆಂಟ್ ಕಮಿಟ್‌ಮೆಂಟೇ ಅಲ್ವಾ ಸಾರ್, ಎಲ್ಲಾ ಮೊದಲೇ ತಿಳ್ಕೊಂಡ್ ಬಿಡೋಣ ಅಂತ.

ಚಂದ್ರು ಬಡ್ಕೊಂಡ್ರು ನಿಮ್ಮ ಕಮಿಟ್‌ಮೆಂಟಿಗೆ ಮೊದ್ಲು ಮಗು ಕರ್ಕೊಂಡು ಬನ್ರೀ.

ನಾಗ ಬರ್ತೀನಿ ಸಾರ್ ನನ್ನ ಮಗು ಕರ್ಕೊಂಡು ನಿಮ್ಮ ಸ್ಕೂಲಿಗೇ ಬರ್ತೀನಿ ನಿಮ್ಮನ್ನೇ ಕಾಣ್ತೀನಿ. ಆಗ ನೀವು ನನ್ನ ಮಗುಗೆ ಸೀಟು ಇಲ್ಲ ಅನ್ಬಾರ್ದು.

ಚಂದ್ರು ಅದ್ಸರಿ, ಯಾಕೆ ಇನ್ನೂ ಮಗು ಆಗಿಲ್ಲ, ಮದುವೆಯಾಗಿ ಎಷ್ಟು ವರ್ಷ ಆಯ್ತು

ನಾಗ ಮದುವೆಯಾದ ಮೇಲೆ, ಮಕ್ಕಳಾದ ಮೇಲೆ ಏನೇನು ಕಮಿಟ್ ಮೆಂಟ್ ಇರುತ್ತೆ ಅಂತ ತಿಳ್ಕೊತಾ ಇದೀನಿ. ಅದಿಕ್ಕೇ.

ಚಂದ್ರು ಅದಿಕ್ಕೆ.

ನಾಗ ನಾನಿನ್ನೂ ಮದುವೇನೇ ಮಾಡ್ಕೊಂಡಿಲ್ಲ.

****

## ಟೈಂ ಪಾಸ್

ಶ್ರೀಪತಿ ರಸ್ತೇಲಿ ನಿಂತ್ಕೊಂಡು ಪೇಪರ್ ತಿರುವಿ ಹಾಕ್ತಾ ಇರ್ತಾನೆ. ಅಲ್ಲಿಗೆ ಭೂಪತಿ ಬರ್ತಾನೆ.

ಭೂಪತಿ ಕ್ಷಮಿಸಿ, ಇಲ್ಲಿ ನರಸಿಂಹ ರಾವ್ ಅನ್ನೋರ ಮನೆ ಎಲ್ಲಿದೆ.

ಶ್ರೀಪತಿ ಯಾವ ನರಸಿಂಹರಾವ್, ಪ್ರಧಾನಿ ಆಗಿದ್ರಲ್ಲ ಅವರಾ, ಅವರು ಸತ್ತುಹೋದ್ರಲ್ಲ.

ಭೂಪತಿ ಅವರಲ್ರೀ, ಟಿವಿ ಕಲಾವಿದರಿಗೆ ಮೇಕಪ್ ಮಾಡ್ತಾರಲ್ಲ ಅವರು.

ಶ್ರೀಪತಿ ಓ ಅವರಾ, ಟಿವಿ ನಟಿಯೊಬ್ಬಳಿಗೆ ಮೇಕಪ್ ಮಾಡುವಾಗ ಎಲ್ಲೆಲ್ಲೋ ಮುಟ್ಟಿ ಒದೆ ತಿಂದಿದ್ರಲ್ಲ ಅವರಾ.

ಭೂಪತಿ ಅದೇನೋ ನನಗೆ ಗೊತ್ತಿಲ್ಲ, ಅವರ ಮನೆ ಎಲ್ಲಿದೆ ಅಂತ ಹೇಳಿದ್ರೆ.

ಶ್ರೀಪತಿ ಯಾಕೆ, ನೀವು ಟಿವಿ ಸೀರಿಯಲ್ ತೆಗಿತಾ ಇದೀರಾ.

ಭೂಪತಿ ಅದೆಲ್ಲ ನಿಮಗ್ಯಾಕ್ರೀ, ಅಡ್ರೆಸ್ ಗೊತ್ತಿದ್ರೆ ಗೊತ್ತಿದೆ ಅನ್ನಿ ಇಲ್ದಿದ್ರೆ ಇಲ್ಲಾ ಅನ್ನಿ.

ಶ್ರೀಪತಿ ಈತರ ಎಲ್ಲ ಮಾತಾಡಿದ್ರೆ ಗೊತ್ತಿದ್ರೂ ಗೊತ್ತಿಲ್ಲ ಅಂತೀನಿ, ನಾ ಕೇಳಿದ್ರಲ್ಲಿ ಏನ್ರೀ ತಪ್ಪು , ಟಿವಿ ಸೀರಿಯಲ್ ತೆಗೀತಾ ಇದ್ರೆ ತೆಗಿತಾ ಇದೀನಿ ಅನ್ನಿ ಇಲ್ದಿದ್ರೆ ಇಲ್ಲ ಅನ್ನಿ, ತೆಗಿತಾ ಇದೀನಿ ಅಂದ್ರೆ ನಿಮ್ಮನ್ನ ಒಂದು ಪಾರ್ಟ್ ಕೇಳಿಬಿಡ್ತೀನಾ.

ಭೂಪತಿ ನಿಮ್ಮ ಮುಖಕ್ಕೆ ಟಿವಿ ಸೀರಿಯಲ್ಲಲ್ಲಿ ಪಾರ್ಟ್ ಕೊಟ್ಟ ಹಾಗೇ ಈಗೇನು ಅಡ್ರೆಸ್ ಹೇಳ್ತೀರೋ ಇಲ್ವೋ.

ಶ್ರೀಪತಿ ಹೇಳ್ತೀನಿ ಇರಿ, ಅವರು ಮೊದ್ಲು ಇಲ್ಲೇ ಇದ್ರು,ಆದ್ರೆ ಮನೆ ಬಾಡಿಗೆ ಕಟ್ಟದೆ ಓನರ್ರು ಅವರನ್ನ ಒದ್ದು ಓಡಿಸಿದ್ರು ಅಂತ ಜನ ಮಾತಾಡ್ಕೋತಾ ಇದ್ರು, ನಿಮಗೂ ಅವರು ಸಾಲ ಗೀಲ ಏನಾದ್ರೂ ಕೊಡಬೇಕಾ.

ಭೂಪತಿ ರೀ ಅದೆಲ್ಲ ನಿಮಗ್ಯಾಕ್ರೀ, ಹೆಚ್ಗೆ ಮಾತು ಬೇಡ, ಅಡ್ರೆಸ್ ಗೊತ್ತಿದ್ಯಾ.

ಶ್ರೀಪತಿ ಏನ್ರೀ ಆ ತರ ರೋಫ್ ಹೊಡೀತೀರ, ಅಡ್ರೆಸ್ ಗೊತ್ತಿದೆ ಆದ್ರೆ ಹೇಳಲ್ಲ ಹೋಗ್ರೀ ಏನ್ರೀ ಮಾಡ್ಕೊತೀರ.

ಭೂಪತಿ ನಾನೇನು ಮಾಡ್ಕೊತೀನಿ. ಇನ್ಯಾರನ್ನಾದ್ರೂ ಕೇಳ್ಕೋತೀನಿ, ನಿಮ್ಮ ಸಹವಾಸವೇ ಬೇಡ (ನಾಲ್ಕು ಹೆಜ್ಜೆ ಇಡ್ತಾನೆ).

ಶ್ರೀಪತಿ ರೀ ಬನ್ರೀ ಇಲ್ಲೀ, ಅಲ್ನೋಡಿ ಮೇಕಪ್ ಮಾಡೋ ನರಸಿಂಹರಾವ್ ಮನೆ ಎದುರಿಗೇ ಇದೆ, ನಂಗೆ ಸ್ವಲ್ಪ ಟೈಂ ಪಾಸ್ ಆಗಬೇಕಿತ್ತು, ಅದಕ್ಕೆ ನಿಮ್ಮನ್ನ ಕೆಣಕಿದೆ. ಚೆನ್ನಾಗಿ ಟೈಂ ಪಾಸ್ ಆಯ್ತು ಬಿಡಿ. ಇನ್ನು ನೀವು ಅವರ ಮನೆಗೆ ಹೋಗಬಹುದು.

ಭೂಪತಿ (ಹಿಂದಕ್ಕೆ ಬಂದು) ನನಗೂ ಗೊತ್ತು ಅವರ ಮನೆ ಎದುರಿಗೇ ಇದೆ ಅಂತ. ನನಗೂ ಸ್ವಲ್ಪ ಟೈಂ ಪಾಸ್ ಆಗಬೇಕಿತ್ತು ಅದಕ್ಕೇ ನಿಮ್ಮನ್ನು ಮಾತಾಡಿಸ್ತಾ ನಿಂತ್ಕೊಂಡೆ. ನನಗೇನು ಅವರತ್ರ ಕೆಲಸ ಇಲ್ಲ. ಇನ್ನು ನಾನೇಕೆ ಅವರ ಮನೆಗೆ ಹೋಗ್ಲಿ, ನನಗೆ ಬೇರೆ ಕೆಲಸ ಇದೆ ಬರ್ತೀನಿ.

****

## ಸಂಬಂಧ ರಾಗ

ಬಾಬು ಮತ್ತು ಬಾಲು ಆನಂದದಿಂದ ಬರ್ತಾರೆ.

ಬಾಬು ಅಂತೂ ನನ್ನ ಮಗಳನ್ನು ನಿನ್ನ ಮಗನಿಗೆ ತಂದುಕೊಳ್ಳೋಕೆ ನೀನು ಒಪ್ಪಿದ್ದು ನನಗೆ ತುಂಬಾ ಸಂತೋಷ ಕಣಯ್ಯ.

ಬಾಲು ನನಗೂ ಅಷ್ಟೆ, ನಿನ್ನಂಥ ಒಳ್ಳೆ ಸಂಬಂಧ ಇನ್ನೆಲ್ಲಿ ಸಿಗುತ್ತೆ ಹೇಳು.

ಬಾಬು ಹಾಗಂತ ವರದಕ್ಷಿಣೆ ವರೋಪಚಾರ ಅಂತ ಸಿಕ್ಕಾಪಟ್ಟೆ ಕೇಳಿಬಿಡಬೇಡಪ್ಪ.

ಬಾಲು ಎಲ್ಲಾದ್ರೂ ಉಂಟೇ, ನಿನ್ನ ಕೈಲಾದಷ್ಟು ಮಾಡು. ಇಲ್ದಿದ್ರೆ ಇನ್ನೊಂದು ಕೆಲಸ ಮಾಡೋಣ. ಮದುವೆ ಖರ್ಚನ್ನ ಇಬ್ರೂ ಸಮವಾಗಿ ಹಂಚಿಕೊಳ್ಳೋಣ.

ಬಾಬು ಅದು ಸರಿಯಾದ ಮಾತು. ಹಾಗಂತ ನಾವು ದುಂದು ವೆಚ್ಚ ಮಾಡೋದು ಬೇಡ. ಒಟ್ನಲ್ಲಿ ನಮ್ಮ ಸಂಬಂಧ ಗಟ್ಟಿಯಾಗಿರಬೇಕು ಅಷ್ಟೆ. ಈ ಸಂಬಂಧಕ್ಕೆ ನಿನ್ನ ಹೆಂಡತಿ ಒಪ್ಕೊತಾಳೆ ತಾನೇ?

(ಇವರಿಬ್ರೂ ಮಾತಾಡೋದನ್ನ ಕುತೂಹಲದಿಂದ ಒಬ್ಬ ನೋಡ್ತಾ ಇರ್ತಾನೆ)

ಬಾಬು ಅದು ಹ್ಯಾಗೆ ಒಪ್ಪೋಲ್ಲ ನಾನೂ ನೋಡ್ತೀನಿ. ಅವಳೇನಾದ್ರೂ ಒಪ್ಪದಿದ್ರೆ ಅವಳನ್ನ ಅಡ್ಡಡ್ಡ ಸೀಳಿಹಾಕಿಬಿಡ್ತೀನಿ.

ಬಾಲು ತಡ್ಕೊ, ಅಷ್ಟೊಂದು ಆವೇಶ ಬೇಡ. ಒಂದು ವೇಳೆ ನನ್ನ ಹೆಂಡ್ತಿ ಒಪ್ದಿದ್ರೆ ನಾನು ಅವಳನ್ನು ಹೇಗಾದ್ರೂ ಮಾಡಿ ಒಪ್ಪಿಸ್ತೀನಿ. ನೀನೂ ಹಾಗೇ ಮಾಡು.

ಬಾಬು ಸರೀಪ್ಪ , ನನಗೆ ಇವತ್ತು ತುಂಬಾ ಸಂತೋಷವಾಯ್ತು, ಜೀವನಕ್ಕೆ ಅದ್ಯಾವ್ದೋ ಶಕ್ತಿ ಬಂದ ಹಾಗಾಯ್ತು. ಅಂದ ಹಾಗೆ ಹನಿಮೂನಿಗೆ ಮಕ್ಕಳನ್ನ ಎಲ್ಲಿಗೆ ಕಳಿಸೋಣ.

ಬಾಲು ನಾವೇನು ಕಳಿಸೋದು, ಅದನ್ನ ಅವರೇ ಪ್ಲಾನ್ ಮಾಡ್ಕೊಂಡಿರ್ತಾರೆ. ನಮಗೆ ಆ ಕಷ್ಟ ಬೇಡ ಬಿಡು. ಸೀರೆ ತರೋಕೆ ಕಾಂಜೀವರಂಗೇ ಹೋಗೋಣಪ್ಪ.

ಬಾಬು ಹೌದೌದು, ಚಿನ್ನ ಬೆಳ್ಳಿ ಎಲ್ಲ ಚೆನ್ನೈನಲ್ಲಿ ಚೀಪಂತೆ. ಎರಡೂ ಫ್ಯಾಮಿಲಿನೂ ಅಲ್ಲಿಗೇ ಹೋಗಿ ಏನೇನು ಬೇಕೋ ಎಲ್ಲ ತಂದುಬಿಡೋಣ.

ಬಾಲು ಅಂತೂ ನನ್ನ ನಿನ್ನ ಸಂಬಂಧ ಪಕ್ಕ ಆಯ್ತು . ಈಗ ಬಹಳ ಮುಖ್ಯವಾದ ಕೆಲಸ ಮಾಡಬೇಕಾಗಿದೆಯಲ್ಲ ನಡಿ.

ಬಾಬು ಯಾವುದಪ್ಪ ಅದು ಮುಖ್ಯವಾದ ಕೆಲಸ.

ಬಾಲು ಇದೇನು ಹೀಗೆ ಕೇಳ್ತೀಯ. ನನ್ನ ನಿನ್ನ ಸಂಬಂಧ ಬೆಳೆಯಬೇಕಾದ್ರೆ ನನಗೆ ಮಗಳು ಹುಟ್ಟಬೇಕು, ನಿನಗೆ ಮಗ ಹುಟ್ಟಬೇಕು, ಹಾಗೆ ಆಗಬೇಕಾದ್ರೆ ನಾವು ಮದುವೆಯಾಗಬೇಕು, ಮದುವೆಯಾಗಬೇಕಾದರೆ ಹುಡುಗಿ ಹುಡುಕಬೇಕು, ಹುಡುಗಿ ಹುಡುಕಬೇಕಾದ್ರೆ ಶಾಸ್ತ್ರಿಗಳ ಮನೆಗೆ ಹೋಗಬೇಕು, ನಡಿ ಇಬ್ರೂ ಒಟ್ಟಿಗೇ ಹೋಗೋಣ, ಹುಡುಗಿ ಹುಡುಕೋಣ, ಮದುವೆಯಾಗೋಣ.

ಬಾಬು ನಡಿ ನಡಿ.

ಒಬ್ಬ ಬಹಳ ಚೆನ್ನಾಗಿದೆ, ಮುಂಡೇವಿಕ್ಕೇ ಇನ್ನೂ ಮದುವೆಯಾಗಿಲ್ಲ, ಆಗ್ಲೇ ಇವನ ಮಗಳಿಗೆ, ಅವನ ಮಗನಿಗೆ ಸಂಬಂಧ ಬೆಸೆಯೋಕೆ ಹೊರಟಿದಾರೆ ಇದಕ್ಕೇ ಅಲ್ವೇ ಹೇಳೋದು ಕೂಸು ಹುಟ್ಟೋಕೆ ಮುಂಚೆ ಕುಲಾವಿ ಅಂತ.

---

**ವ್ಯತ್ಯಾಸ**

ಕುಡಿದು ಮತ್ತಿನಲ್ಲಿರುವವನಿಗೂ ಅಹಂಕಾರದಿಂದ ಮತ್ತಿನಲ್ಲಿರುವವನಿಗೂ ಏನೂ ವ್ಯತ್ಯಾಸ ಇರುವುದಿಲ್ಲ.

**ಎಷ್ಟರವರೆಗೆ?**

ಎಲ್ಲಿ ಮಕ್ಕಳೇ, ನಿಮಗೆ ಎಷ್ಟರವರೆಗೆ ಎಣಿಸೋದಿಕ್ಕೆ ಬರುತ್ತೆ? ಪುಟ್ಟ, ನೀ ಹೇಳು..
**ಪುಟ್ಟ:** ಒಂದು, ಎರಡು, ಮೂರು, ನಾಲ್ಕು, ಐದು, ಆರು, ಏಳು, ಎಂಟು, ಒಂಬತ್ತು, ಹತ್ತು, ಜಾಕಿ, ರಾಣಿ, ರಾಜ..

**ಲೆಕ್ಕಾಚಾರ**

ರಾಮು ಯಾಕೆ ಲೆಕ್ಕ ಮಾಡುತ್ತಿಲ್ಲ?
ನನ್ನ ಪೆನ್ಸಿಲ್ ಇಲ್ಲ.
ಸರಿಯಾಗಿ ಹೇಳಬೇಕು. ನನ್ನ ಬಳಿ ಪೆನ್ಸಿಲ್ ಇಲ್ಲ. ಅವನ ಬಳಿ ಪೆನ್ಸಿಲ್ ಇಲ್ಲ. ನಮ್ಮ ಬಳಿ ಪೆನ್ಸಿಲ್ ಇಲ್ಲ. ಗೊತ್ತಾಯ್ತಾ?
ಸರಿ ನನ್ನ ಬಳಿ ಪೆನ್ಸಿಲ್ ಇಲ್ಲ. ಮತ್ತೆ ನಾನು ಹೇಗೆ ಬರೆಯಲಿ ಈಗ? ಆಟಕ್ಕೆ ಹೋಗ್ತೀನಿ.